ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 16-17 ಏಪ್ರಿಲ್ 24, 2005 ಬೆಲೆ ರೂ. 3.00

ಯಶಸ್ವಿಗೊಂಡ
ಸಿಪಿಐ(ಎಂ) ನ 18ನೇ ಮಹಾಧಿವೇಶನ



ಮಹಾ ಮಥನವೀ ಮಹಾಧಿವೇಶನ


ವಿಶೇಷ ವರದಿಗಳು



ಇತಿಹಾಸದ ಅವಲೋಕನ...




ಸೌಹಾರ್ದತೆಯ ಸಮ್ಮಿಲನ



ಸ್ವಯಂ ಸೇವಕರ ಸಂಚಲನ

ಸಮರ ಸಂಕಲ್ಪ...



- ಹೊಸ ಪ್ರದೇಶಗಳಿಗೆ ಪಕ್ಷದ ವಿಸ್ತರಣೆಗೆ ಆದ್ಯತೆ
- ಕೋಮುವಾದ-ಜಾಗತೀಕರಣದ ವಿರುದ್ಧ ಇನ್ನೂ ಹರಿತ ಹೋರಾಟ

18ನೇ ಮಹಾಧಿವೇಶನದಲ್ಲಿ ಸರ್ವಾನುಮತದಿಂದ ಆಯ್ಕೆಯಾದ ಕೇಂದ್ರ ಸಮಿತಿ

18ನೇ ಮಹಾಧಿವೇಶನ ಸಿಪಿಐ(ಎಂ)

ಒಳಗೆ ಇಣುಕುವ ಮುನ್ನ...

ಈ ಸಂಚಿಕೆಯ ಬಹುಪಾಲು ಪುಟಗಳು ಸಿಪಿಐ(ಎಂ) 18ನೇ ಮಹಾಧಿವೇಶನದ ಒಳ-ಹೊರಗಿನ ಸಂಗತಿಗಳ ಸಮಗ್ರ ಪರಿಚಯಕ್ಕೆ ಮೀಸಲು. ನೀವು ಒಳಪುಟಗಳೊಳಗೆ ಇಣುಕುವ ಮೊದಲು ಕುತೂಹಲ ಸಹಜವಾದ ಹೊಸ ನಾಯಕತ್ವದಲ್ಲಿ ಯಾರ್ಯಾರು ಎಂದು ಇಲ್ಲೇ ಇದೆ ನೋಡಿ ಬಿಡಿ. ಆದರೆ ಇದು ಸಾಮೂಹಿಕ ಕ್ರಾಂತಿಕಾರಿ ನಾಯಕತ್ವ ಎಂಬುದನ್ನು ಮರೆಯಬೇಡಿ.



ಕಾಂ. ಪ್ರಕಾಶ್ ಕಾರಟ್
ಪ್ರ. ಕಾರ್ಯದರ್ಶಿ

ಪೊಲಿಟ್‌ಬ್ಯೂರೋ ಸದಸ್ಯರು



ಕಾಂ. ಹರಕಿಶನ್ ಸಿಂಗ್‌ಸುರ್ಜಿತ್



ಕಾಂ.ಜ್ಯೋತಿಬಸು




ಕಾಂ.ವಿ.ಎಸ್. ಅಚ್ಯುತಾನಂದನ್



ಎಸ್.ರಾಮಚಂದ್ರನ್ ಪಿಳ್ಳೆ



ಕಾಂ. ಸೀತಾರಾಂ ಯೆಚೂರಿ



ಕಾಂ. ಆರ್. ಉಮಾನಾಥ್



ಕಾಂ. ಎಂ.ಕೆ. ಪಂಧೆ



ಕಾಂ. ಬಿಮನ್ ಬಸು



ಕಾಂ. ಅನಿಲ್ ಬಿಸ್ವಾಸ್



ಕಾಂ. ಮಾಣಿಕ್ ಸರ್ಕಾರ್



ಕಾಂ. ಪಿನರಾಯಿ ವಿಜಯನ್



ಕಾಂ. ಬುದ್ಧದೇವ್ ಭಟ್ಟಾಚಾರ್ಯ



ಕಾಂ. ಬಿ.ವಿ.ರಾಘವಲು



ಕಾಂ. ಕೆ. ವರದರಾಜನ್



ಕಾಂ. ಚಿತ್ತಬ್ರತ ಮಜುಂದಾರ್



ಕಾಂ. ಬೃಂದಾ ಕಾರಟ್

ಕೇಂದ್ರ ಸಮಿತಿಗೆ ವಿಶೇಷ ಆಹ್ವಾನಿತರು



ಕಾಂ.ಸಮರ್ ಮುಖರ್ಜಿ



ಕಾಂ. ಟಿ.ಕೆ. ರಾಮಕೃಷ್ಣನ್



ಕಾಂ. ಪಾಪಾ ಉಮಾನಾಥ್



ಕಾಂ. ಅಹಲ್ಯಾ ರಂಗ್ನೇಕರ್

ಕೇಂದ್ರ ಸಮಿತಿ ಸದಸ್ಯರು

ಸಂಗಾತಿಗಳಾದ

18. ಈ.ಬಾಲಾನಂದನ್
19. ಪಿ.ರಾಮಚಂದ್ರನ್
20. ಕೊರಟಾಲ ಸತ್ಯನಾರಾಯಣ
21. ಪಿ.ರಾಮಯ್ಯ
22. ಟಿ.ವೀರಭದ್ರಂ
23. ಮಲ್ಲುಸ್ವರಾಜ್ಯಂ
24. ಹೆಮನ್ ದಾಸ್
25. ನೂರುಲ್ ಹುಡಾ
26. ಉದ್ದಬ್ ಬರ್ಮನ್
27. ಗಣೇಶ್ ಶಂಕರ್ ವಿದ್ಯಾರ್ಥಿ
28. ಸುಬೋದ್ ರಾಯ್
29. ಜೋಗಿಂದರ್ ಶರ್ಮ
30. ಇಂದರ್‌ಜಿತ್ ಸಿಂಗ್
31. ಮಹಮ್ಮದ್ ಯೂಸುಫ್ ತರಿಗಾಮಿ
32. ಜೆ.ಎಸ್.ಮಜುಂದಾರ್
33. ಎಂ.ಎ.ಬೇಬಿ
34. ಪಲೊಲಿ ಮಹಮ್ಮದ್ ಕುಟ್ಟಿ
35. ಪಿ.ಕೆ.ಗುರುದಾಸನ್
36. ಪಿ.ಕರುಣಾಕರನ್
37. ಪಿ.ಕೆ.ಶ್ರೀಮತಿ
38. ಕೊಡಿಯೇರಿ ಬಾಲಕೃಷ್ಣನ್
39. ಎಂ.ಸಿ.ಜೋಸೆಫಿನ್
40. ಬಿ.ಎಸ್.ದಕ್ಕಡ
41. ಪಿ.ಸಾಸ್ನಗಿರಿ
42. ಅಶೋಕ್ ಧವಳೆ
43. ಜನಾರ್ಧನ್ ಪತಿ
44. ಬಲವಂತ ಸಿಂಗ್
45. ಎನ್.ವರದರಾಜನ್
46. ಟಿ.ಕೆ.ರಂಗರಾಜನ್
47. ಬೈದ್ಯನಾಥ್ ಮಜುಂದಾರ್
48. ಅಘೋರ್ ದೇಬ್‌ಬರ್ಮ
49. ಬಿಜನ್ ಧರ್
50. ಸುಭಾಷಿಣಿ ಆಲಿ
51. ಮಹಮದ್ ಅಮೀನ್
52. ಸುಕೋಮಲ್ ಸೇನ್
53. ಹನನ್ ಮೊಲ್ಲಾ
54. ಬಿನೊಯ್ ಕೊನಾರ್
55. ನಿರುಪಮ್ ಸೇನ್
56. ಮಹಮದ್ ಸಲೀಂ
57. ಶ್ಯಾಮಲ್ ಚಕ್ರವರ್ತಿ
58. ಸೂರ್ಯಕಾಂತ ಮಿಶ್ರಾ
59. ಶ್ಯಾಮಿಲಿ ಗುಪ್ತಾ
60. ಹರಿಸಿಂಗ್ ಕಂಗ್
61. ಕನ್ಯ ಬ್ಯಾನರ್ಜಿ
62. ಡಬ್ಲ್ಯು. ಆರ್.ವರದರಾಜನ್
63. ಸುನೀತ್ ಚೋಪ್ರಾ
64. ಎ.ವಿಜಯರಾಘವನ್
65. ಹರಿರಾಮ ಚೌಹಾನ್

ಹೊಸ ಸೇರ್ಪಡೆ

66. ಇ.ಪಿ.ಜಯರಾಜನ್(ಕೇರಳ)
67. ಶ್ರೀನಿವಾಸ್ ರಾವ್ (ಆಂಧ್ರಪ್ರದೇಶ)
68. ಪಿ.ಮಧು(ಆಂಧ್ರಪ್ರದೇಶ)
69. ಎ.ಕೆ.ಪದ್ಮನಾಭನ್ (ತಮಿಳುನಾಡು)
70. ಎಸ್.ಪಿ.ಕಶ್ಯಪ್(ಉತ್ತರಪ್ರದೇಶ)
71. ವಾಸುದೇವ್ (ರಾಜಸ್ತಾನ್)
72. ಜಿ.ಎನ್.ನಾಗರಾಜ್ (ಕರ್ನಾಟಕ)
73. ರಾಕೇಶ್ ಸಿಂಗಾ (ಹಿಮಾಚಲ ಪ್ರದೇಶ)
74. ಕುಮಾರ್ ಶಿರಾಲ್‌ಕರ್(ಮಹಾರಾಷ್ಟ್ರ)
75. ಜೊನಾನಿ ಬಿಸ್ವಾಸ್ (ಮಹಿಳೆಯರು)
76. ಯು.ವಾಸುಕಿ (ಮಹಿಳೆಯರು)
77. ಹೇಮಲತಾ (ಟಿ.ಯು.ಕೇಂದ್ರ)
78. ಬಸುದೇಬ್ ಆಚಾರ್ಯ (ಸಂಸತ್ತು)
79. ನಿಲೋತ್ಪಲ್ ಬಸು (ಸಂಸತ್ತು)
80. ಖಗೆನ್ ದಾಸ್ (ತ್ರಿಪುರ)
81. ಲೆಂಬರ್ ಸಿಂಗ್ ಥಗ್ಗರ್ (ಪಂಜಾಬ್)
82. ಚರಣ್ ಸಿಂಗ್ ವಿರ್ಧಿ (ಪಂಜಾಬ್)
83. ಅರುಣ್ ಮೆಹ್ತಾ (ಗುಜರಾತ್)
84. ಪಿ.ಎಂ.ಎಸ್. ಗ್ರೆವಾಲ್ (ಡೆಲ್ಲಿ)
85. ಕೇರಳ ರಾಜ್ಯಕ್ಕೆ ಮೀಸಲು

ಕೇಂದ್ರ ಸಮಿತಿಗೆ ವಿಶೇಷ ಆಹ್ವಾನಿತರು

1. ಕಾಂ.ಸಮರ್ ಮುಖರ್ಜಿ
2. ಕಾಂ. ಅಹಲ್ಯಾ ರಂಗ್ನೇಕರ್
3. ಕಾಂ. ಟಿ.ಕೆ.ರಾಮಕೃಷ್ಣನ್
4. ಕಾಂ. ಪಾಪಾ ಉಮಾನಾಥ್

ಕೇಂದ್ರ ಶಿಸ್ತು ಆಯೋಗ



1. ಎನ್.ಶಂಕರಯ್ಯ (ಅಧ್ಯಕ್ಷರು)
2. ಕಾಂತಿ ಬಿಸ್ವಾಸ್
3. ಟಿ.ಕೆ.ಬಾಲನ್
4. ಸಾಂಬಿ ರೆಡ್ಡಿ
5. ಕೃಷ್ಣ ಖೋಪ್ಕರ್


ಕೇಂದ್ರ ಶಿಸ್ತು ಆಯೋಗದ ಅಧ್ಯಕ್ಷರಾಗಿರುವ ಎನ್.ಶಂಕರಯ್ಯ, ಸಂವಿಧಾನದ ಪ್ರಕಾರ ಸಹಜವಾಗಿ ಕೇಂದ್ರ ಸಮಿತಿಯ ಸದಸ್ಯರೂ ಆಗಿರುತ್ತಾರೆ.



ಕರ್ನಾಟಕದ ಪ್ರತಿನಿಧಿಗಳು

ಕಾಂ. ಜಿ.ಎನ್. ಕೇಂದ್ರ ಸಮಿತಿಗೆ ಆಯ್ಕೆ

ಸಿಪಿಐ(ಎಂ)ನ 18ನೇ ಮಹಾಧಿವೇಶನವು ಆರಿಸಿದ 85 ಸದಸ್ಯರ ನೂತನ ಕೇಂದ್ರ ಸಮಿತಿಗೆ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಜಿ.ಎನ್. ನಾಗರಾಜ್‌ರವರು ಆಯ್ಕೆಯಾಗಿದ್ದಾರೆ.



ದಲಿತರನ್ನು ರಕ್ಷಿಸುವ ದಮನಖೋರರನ್ನು ಶಿಕ್ಷಿಸುವ ಎಷ್ಟೆಲ್ಲಾ ಕಾಯ್ದೆ-ಕಾನೂನುಗಳು, ಮಾತುಗಳು, ಭರವಸೆಯ ವರಸೆಗಳಿದ್ದರೂ ದಲಿತರ ಮೇಲಿನ ದಮನಕಾಂಡ ಕೊನೆಯಾಗಿಲ್ಲವೇಕೆ? ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮದಿನದ ಸಂದರ್ಭದಲ್ಲಿ ಒಂದು ಚಿಂತನೆ



ಜಾತಿ ದಮನ ಮತ್ತು ವರ್ಗ ಸಂಘರ್ಷ

ಇನ್ನೊಂದು 'ಅಂಬೇಡ್ಕರ್ ಜಯಂತಿ' ಬಂದು ಹೋಯಿತು. ಲೆಕ್ಕವಿಲ್ಲದಷ್ಟು ವೇದಿಕೆಗಳಲ್ಲಿ ನಮ್ಮ ಸಂವಿಧಾನ ಶಿಲ್ಪಿ, ಜಾತಿ ಪದ್ಧತಿಯ ವಿರುದ್ಧದ ದಣಿವರಿಯದ ಹೋರಾಟಗಾರ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜೀವನ-ಸಾಧನೆಗಳ ಕುರಿತು ಗುಣಗಾನ ನಡೆಯಿತು. ಭಾಷಣಗಳ ಸುರಿಮಳೆ, ಘೋಷಣೆಗಳ ಆರ್ಭಟ ಈಗ ಎಲ್ಲವೂ ತಣ್ಣಗಾಗಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ದಲಿತರ ಮೇಲೆ ನಿತ್ಯ ನಡೆಯುತ್ತಿರುವ ದಬ್ಬಾಳಿಕೆ, ದೌರ್ಜನ್ಯಗಳು ಮಾತ್ರ ನಿರಾತಂಕವಾಗಿ ಮುಂದುವರೆಯುತ್ತಿವೆ. ಮನುಷ್ಯರಲ್ಲಿಯೇ ಕೆಲವರನ್ನು ಪಶುಗಳಿಗಿಂತ ಕೀಳಾಗಿ ಕಾಣುವ ಈ ಅಮಾನವೀಯ ಜಾತಿ ವ್ಯವಸ್ಥೆಯನ್ನು ನಾಶ ಮಾಡಲು ಅಸಾಧ್ಯವೇ?


ಮರೀಚಿಕೆಯಾದ ಸಾಮಾಜಿಕ ನ್ಯಾಯ

ನಮ್ಮ ಸಂವಿಧಾನದ 17ನೇ ವಿಧಿಯ ಮೂಲಕ ಅಸ್ಪೃಶ್ಯತೆಯನ್ನು ರದ್ದುಗೊಳಿಸಲಾಗಿದೆ ಮತ್ತು ಅದರ ಯಾವುದೇ ರೂಪದ ಆಚರಣೆಯನ್ನು ನಿಷೇಧಿಸಲಾಗಿದೆ. ಸಂವಿಧಾನದ ಈ ವಿಧಿಯ ಮೂಲಕ ಪ್ರತಿಯೊಬ್ಬ ಪ್ರಜೆಗೆ ಘನತೆ, ಗೌರವ, ಸಮಾನತೆಯ ಮತ್ತು ತಾರತಮ್ಯರಹಿತವಾದ ಬದುಕಿನ ಹಕ್ಕನ್ನು ನೀಡಲಾಗಿದೆ. ಈ ಸಂವಿಧಾನಬದ್ಧ ಹಕ್ಕನ್ನು ಅನುಷ್ಠಾನಗೊಳಿಸುವುದಕ್ಕಾಗಿ 1955ರಲ್ಲಿ 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ'ಯನ್ನು ಜಾರಿಗೆ ತರಲಾಗಿತ್ತು. ಆದರೆ ಸಾಮಾಜಿಕ ದಮನವನ್ನು ತಡೆಗಟ್ಟುವಲ್ಲಿ ಈ ಕಾಯ್ದೆ ಯಶಸ್ವಿಯಾಗಲಿಲ್ಲ. ದಲಿತರ ಮತ್ತು ಆದಿವಾಸಿಗಳ ವಿರುದ್ಧದ ಅಪರಾಧಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಉದ್ದೇಶದಿಂದ, ಸುಮಾರು 34 ವರ್ಷಗಳ ನಂತರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯಗಳಿಗೆ ತಡೆ) ಕಾಯ್ದೆ, 1989ನ್ನು ಅನುಷ್ಠಾನಗೊಳಿಸಲಾಯಿತು. ದಲಿತರ ವಿರುದ್ಧದ ಅಪರಾಧಗಳ ವಿಚಾರಣೆ ನಡೆಸಲು ವಿಶೇಷ ನ್ಯಾಯಾಲಯಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಯಿತು. ಈ ಕಾಯ್ದೆ ಅಡಿಯಲ್ಲಿ ರಚಿಸಲಾದ ವಿವರವಾದ ನಿಯಮಾವಳಿಗಳಿಗೆ ಅನುಗುಣವಾಗಿ ದೌರ್ಜನ್ಯಕ್ಕೆ ಒಳಗಾದ ದಲಿತರಿಗೆ ತಕ್ಷಣದಲ್ಲೇ ಜಿಲ್ಲಾಡಳಿತದ ಮೂಲಕ ಪರಿಹಾರ ಮಾರ್ಗ, ಪುನರ್ವಸತಿ ಒದಗಿಸುವ ಏರ್ಪಾಡು ಮಾಡಲಾಯಿತು ಮತ್ತು ಇದಕ್ಕಾಗಿ ಖರ್ಚು ಮಾಡುವ ಮೊತ್ತದ ಶೇ.50ರಷ್ಟನ್ನು ರಾಜ್ಯಗಳಿಗೆ ಕೇಂದ್ರ ಸರ್ಕಾರ ಒದಗಿಸಬೇಕೆಂದು ನಿರ್ಧರಿಸಲಾಯಿತು. ಆದರೆ, ಈ ಕಾಯ್ದೆ ಜಾರಿಗೆ ಬಂದು 15 ವರ್ಷಗಳಾದರೂ, ದಲಿತರ ಮೇಲಿನ ದೌರ್ಜನ್ಯಗಳು ಅವ್ಯಾಹತವಾಗಿ ಮುಂದುವರೆಯುತ್ತಲೇ ಇರುವುದು ಅನೇಕ ಅಧ್ಯಯನಗಳಿಂದ ಸಾಬೀತಾಗಿದೆ.

ಈ ಕಾಯ್ದೆಯ ಸೆಕ್ಷನ್ 4 ರ ಪ್ರಕಾರ, ಒಬ್ಬ ಪೊಲೀಸ್ ಅಧಿಕಾರಿ ಅಥವಾ ಬೇರೆ ಯಾವುದೇ ಸರ್ಕಾರಿ ಅಧಿಕಾರಿ ದಲಿತರ ವಿರುದ್ಧದ ಅಪರಾಧವನ್ನು ಗಣನೆಗೆ ತೆಗೆದುಕೊಳ್ಳಲು ವಿಫಲವಾದರೆ, ಆತನ ವಿರುದ್ಧ ಶಿಕ್ಷಾರ್ಹ ಕ್ರಮವನ್ನು ಜರುಗಿಸಬಹುದಾಗಿದೆ. ಆದರೆ ಇಂತಹ ಪ್ರಕರಣಗಳಲ್ಲಿ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಿದ ಉದಾಹರಣೆಗಳು ಬಹಳ ವಿರಳ. ತನಿಖಾ ಅಧಿಕಾರಿಗಳು ಮತ್ತು ಸರ್ಕಾರ ನೇಮಿಸುವ ಪ್ರಾಸಿಕ್ಯೂಟರುಗಳು ಪ್ರಕರಣದಲ್ಲಿ ಉದ್ದೇಶ ಪೂರ್ವಕವಾಗಿ ತಾಂತ್ರಿಕ ದೋಷಗಳಿಗೆ ಅವಕಾಶ ಮಾಡಿಕೊಂಡು ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುವಂತೆ ಮಾಡುತ್ತಾರೆ. ಆಂಧ್ರಪ್ರದೇಶ, ಬಿಹಾರ, ಛತ್ತೀಸ್‌ಘಡ್, ಗುಜರಾತ್, ಕರ್ನಾಟಕ, ಮಧ್ಯಪ್ರದೇಶ ಮೊದಲಾದ ರಾಜ್ಯಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದ್ದರೂ ಇಲ್ಲಿ ಇತ್ಯರ್ಥಗೊಳ್ಳದೆ ಉಳಿಸಿರುವ ಪ್ರಕರಣಗಳ ಸಂಖ್ಯೆಯನ್ನು ಗಮನಿಸಿದರೆ, ಸಾಮಾಜಿಕ ನ್ಯಾಯದ ಪ್ರಶ್ನೆ ನನಸಾಗದ ಕನಸು ಎಂದೆನಿಸುತ್ತದೆ. ಒಂದು ಅಂಕಿಅಂಶಗಳ ಪ್ರಕಾರ 2003ರ ಆರಂಭದಲ್ಲಿ ಬಾಕಿ ಇದ್ದ ಒಟ್ಟು 1,38,484 ಪ್ರಕರಣಗಳ ಪೈಕಿ ವರ್ಷಾಂತ್ಯದಲ್ಲಿ ಇನ್ನೂ 1,17,678 ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿದ್ದವು. ಅಂದರೆ ಸುಮಾರು ಶೇ.85ರಷ್ಟು ಪ್ರಕರಣಗಳು ಬಾಕಿ ಉಳಿದಿದ್ದವು. ಇತ್ಯರ್ಥಗೊಂಡ ಒಟ್ಟು ಪ್ರಕರಣಗಳಲ್ಲಿ ಆ ವರ್ಷ ಕೇವಲ ಶೇ.11ರಷ್ಟು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಯಿತು. ಈ ಅಂಕಿ ಅಂಶಗಳನ್ನು ಗಮನಿಸುವಾಗ ದಲಿತರಿಗೆ ಸಾಮಾಜಿಕ ನ್ಯಾಯ ಒಂದು ಮರೀಚಿಕೆಯಾಗಿಯೇ ಇದೆ ಎಂದು ಸಾಬೀತಾಗುತ್ತದೆ.

ಜಾತಿ-ವರ್ಗ

ಅಸಮಾನತೆಯನ್ನು ಪೋಷಿಸಿಕೊಂಡು ಬಂದಿರುವ ಈ ಸಮಾಜ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆ ಮತ್ತು ಜಾತಿ ದಮನವನ್ನು ಕಾನೂನಿನ ಮೂಲಕ ನಾಶಮಾಡಲು ಸಾಧ್ಯವಿಲ್ಲ. ಅಂಬೇಡ್ಕರ್ ಅವರಿಗೂ ಇದರ ಅರಿವು ಇತ್ತು. ಆದ್ದರಿಂದಲೇ ಅವರು ತಮ್ಮ



ಕೊನೆಯ ದಿನಗಳಲ್ಲಿ ತುಂಬಾ ನಿರಾಶೆಯಲ್ಲಿದ್ದರು. ಜೀವನದುದ್ದಕ್ಕೂ ಅವರು ನಡೆಸಿದ ಹೋರಾಟ ಫಲಪ್ರದವಾಗದಿರುವುದು ಅವರಲ್ಲಿ ನಿರಾಶೆಯನ್ನು ಉಂಟುಮಾಡಿತ್ತು. ಕಾನೂನು ತಜ್ಞರಾಗಿದ್ದ ಅವರ ಕಾನೂನಿನ ಮೇಲೆ ಬಹಳ ವಿಶ್ವಾಸವಿಟ್ಟುಕೊಂಡಿದ್ದರು. ಕೊನೆಗೆ ಜಾತಿ ಶೋಷಣೆಯಿಂದ ತಪ್ಪಿಸಿಕೊಳ್ಳಲು ಬೌದ್ಧ ಧರ್ಮವನ್ನು ಸ್ವೀಕರಿಸುವಂತೆ ಅವರು ತಮ್ಮ ಅನುಯಾಯಿಗಳಿಗೆ ಹೇಳಬೇಕಾಯಿತು.

ಶೋಷಣೆಯಿಂದ ಮುಕ್ತವಾದ ಸಮಾಜ ರಚನೆಯ ಗುರಿಯಿಟ್ಟುಕೊಂಡು ಹೋರಾಡುತ್ತಿರುವ ಕಮ್ಯೂನಿಸ್ಟರಿಂದ ಅಂಬೇಡ್ಕರ್ ದೂರ ಉಳಿಯುವಂತಾದದ್ದು ವಿಷಾದದ ಸಂಗತಿಯಾಗಿದೆ. 'ಆಸೆಯೇ ದು:ಖಕ್ಕೆ ಕಾರಣ' ಎಂದ ಬುದ್ಧನನ್ನು ಒಪ್ಪಿಕೊಂಡರಾದರೂ ಖಾಸಗಿ ಆಸ್ತಿಯೇ ಶೋಷಣೆಯ ಮೂಲ" ಎಂದು ವೈಜ್ಞಾನಿಕವಾಗಿ ಪ್ರತಿಪಾದಿಸಿದ ಕಾರ್ಲ್ ಮಾರ್ಕ್ಸ್‌ರನ್ನು ಅಂಬೇಡ್ಕರ್ ಒಪ್ಪಿಕೊಳ್ಳಲು ಹಿಂದೇಟು ಹಾಕಿದ್ದು ಒಂದು ವಿಪರ್ಯಾಸವೇ ಆಗಿದೆ.

ನಿತ್ಯಾನಂದಸ್ವಾಮಿ

ಭಾರತದ ಸಮಾಜವನ್ನು ವಿಶ್ಲೇಷಿಸುವಾಗ, ಮಾರ್ಕ್ಸ್‌ವಾದವು ಆರ್ಥಿಕ ರಚನೆಗಳನ್ನು ಮೂಲ ರಚನೆಗಳೆಂದೂ ಜಾತಿ, ಧರ್ಮದಂತಹ ಸಾಮಾಜಿಕ ರಚನೆಗಳನ್ನು ಮೇಲ್ ರಚನೆಗಳೆಂದು ಗುರುತಿಸುತ್ತದೆ. ಒಂದು ಮೇಲ್ ರಚನೆಯು ನಾಶವಾಗಬೇಕಾದರೆ ಅದು ಆಧರಿಸಿ ನಿಂತಿರುವ ಮೂಲ ರಚನೆಯನ್ನು ನಾಶ ಮಾಡಬೇಕಾಗುತ್ತದೆ ಎಂಬುದು ಅದರ ತರ್ಕಬದ್ಧ ಪ್ರತಿಪಾದನೆಯಾಗಿದೆ. ಆದರೆ ಮೂಲ ರಚನೆ ನಾಶವಾದ ಬಳಿಕ ಮೇಲ್ ರಚನೆಯು ತನ್ನಷ್ಟಕ್ಕೆ ತಾನೆ ನಾಶವಾಗುತ್ತದೆ ಎಂಬ ಯಾಂತ್ರಿಕ ತಿಳುವಳಿಕೆ ಮಾರ್ಕ್ಸ್‌ವಾದಿ ತಿಳುವಳಿಕೆಯಲ್ಲ. ಶತಮಾನಗಳಿಂದ ಬೆಳೆದು ಬಂದಿರುವ, ಮೊದಲು ಪಾಳೆಗಾರಿ ವ್ಯವಸ್ಥೆ ಮತ್ತು ನಂತರ ಬಂಡವಾಳಶಾಹಿ ವ್ಯವಸ್ಥೆಗಳಿಂದ ಗಟ್ಟಿಗೊಂಡಿರುವ ಈ ಜಾತಿ ಪದ್ಧತಿ ಸಮಾಜವಾದಿ ಕ್ರಾಂತಿಯೊಂದಿಗೆ ತನ್ನಷ್ಟಕ್ಕೆ ತಾನೇ ಅಂತ್ಯಗೊಳ್ಳಲಾರದು. ಒಂದು ಸುದೀರ್ಘವಾದ ಸಾಂಸ್ಕೃತಿಕ ಕ್ರಾಂತಿಯೊಂದಿಗೆ ಮಾತ್ರ ಈ ವಿಶಿಷ್ಟವಾದ ಜಾತಿ ವಿಭಜನೆಯನ್ನು ಹಂತ ಹಂತವಾಗಿ ತೊಡೆದುಹಾಕಲು ಸಾಧ್ಯ. ಆದ್ದರಿಂದ ಜಾತಿ ವಿರೋಧಿ ಹೋರಾಟವನ್ನು ವರ್ಗಹೋರಾಟದ ಭಾಗವಾಗಿ ಪ್ರಜ್ಞಾಪೂರ್ವಕವಾಗಿ ಬೆಳೆಸಿಕೊಂಡು ಹೋಗುವುದು ಅತ್ಯಗತ್ಯವಾಗಿದೆ.

ಭಾರತದ ಸಂದರ್ಭದಲ್ಲಿ, ಜಾತಿ ಮತ್ತು ವರ್ಗಳು ಪರಸ್ಪರ ತಳಕು ಹಾಕಿಕೊಂಡಿವೆ. ಪ್ರತಿಯೊಂದು ಜಾತಿಯಲ್ಲಿಯೂ ವರ್ಗಗಳಿವೆ; ಪ್ರತಿಯೊಂದು ವರ್ಗದಲ್ಲಿ ಜಾತಿಗಳಿವೆ. ಮೇಲ್ಜಾತಿಗೆ ಸೇರಿದ ಒಬ್ಬ ಬಡ ರೈತ ಅಥವಾ ಕಾರ್ಮಿಕ, ಕೆಳಜಾತಿಗೆ ಸೇರದ ಒಬ್ಬ ಬಡರೈತನನ್ನು ಅಥವಾ ಕಾರ್ಮಿಕನನ್ನು ತನಗೆ ಸಮಾನ ಎಂದು ಪರಿಗಣಿಸುವ ಬದಲು, ತನಗಿಂತ ಕೀಳೆಂದು ಪರಿಗಣಿಸುವ ಪರಿಸ್ಥಿತಿ ಅಥವಾ ಕಾರ್ಮಿಕರು ಸಾಮಾನ್ಯ ಹೋರಾಟಗಳಲ್ಲಿ ಸೇರುತ್ತಿದ್ದರೂ ಅವರು ಕೇವಲ ಆರ್ಥಿಕ ಪ್ರಶ್ನೆಗಳಿಗಾಗಿ ಮಾತ್ರ ಸಾಮಾನ್ಯ ಹೋರಾಟಗಳಲ್ಲಿ ಭಾಗವಹಿಸುವುದನ್ನು ಕಾಣಬಹುದು.

ಕಾರ್ಮಿಕರು ಸದಸ್ಯರಾಗಿರುವ ಕಾರ್ಮಿಕ ಸಂಘಗಳು ಸೈದ್ಧಾಂತಿಕ ಕಣ್ಣೋಟದಿಂದ ತೀರಾ ಭಿನ್ನವಾದ ಕಣ್ಣೋಟ ಹೊಂದಿರುವ ರಾಜಕೀಯ ಪಕ್ಷಗಳನ್ನು ಅವರು ಬೆಂಬಲಿಸುವುದನ್ನು ಕಾಣಬಹುದು. ಸಾಮಾನ್ಯ ಹೋರಾಟಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಾ ಕಾರ್ಮಿಕರಾಗಲಿ, ರೈತರಾಗಲಿ ತಮ್ಮ ವರ್ಗ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಅಗತ್ಯ ಎಚ್ಚರಿಕೆ ವಹಿಸದಿದ್ದರೆ, ಅವರ ನಡುವಿನ ಜಾತಿ ಪ್ರಜ್ಞೆ ವರ್ಗ ಹೋರಾಟವನ್ನೇ ದಾರಿ ತಪ್ಪಿಸಬಹುದು. ಆದ್ದರಿಂದ ವರ್ಗ ಹೋರಾಟದ ಜೊತೆ ಜೊತೆಯಲ್ಲೇ ಜಾತಿವಾದ, ಕೋಮುವಾದ, ಮೂಲಭೂತವಾದ, ಅಂಧಶ್ರದ್ಧೆಯಂತಹ ಅನಿಷ್ಟಗಳ ವಿರುದ್ಧ ಪರಿಣಾಮಕಾರಿಯಾದ ಸಾಂಸ್ಕೃತಿಕ ಹೋರಾಟನ್ನು ನಡೆಸುವುದು ಅಗತ್ಯವಾಗಿದೆ. ಜಾತಿ ವಿನಾಶದ ಹೋರಾಟವನ್ನು ಕ್ರಾಂತಿಯ ನಂತರಕ್ಕೆ ಮುಂದೂಡಲು ಬರುವುದಿಲ್ಲ.

ಭಾರತದ ಹಿರಿಯ ಮಾರ್ಕ್ಸ್‌ವಾದಿ ಚಿಂತಕರಾದ ಇ.ಎಂ.ಎಸ್, ನಂಬೂದರಿಪಾದ್ ಹೀಗೆ ಹೇಳುತ್ತಾರೆ. "ಭಾರತವನ್ನು ಆಧುನಿಕ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಆದರ್ಶಗಳೊಂದಿಗೆ ಕಟ್ಟಬೇಕೆನ್ನುವುದಾದರೆ ಜಾತಿ ಆಧಾರಿತ ಹಿಂದು ಸಮಾಜ ಮತ್ತು ಅದರ ಸಂಸ್ಕೃತಿಯ ವಿರುದ್ಧ ರಾಜಿ ಇಲ್ಲದ ಹೋರಾಟ ಅಗತ್ಯವಾಗಿದೆ. ಶ್ರೇಣೀಕೃತ 'ಜಾತಿ ವ್ಯವಸ್ಥೆಯಿಂದ ವಿಭಜಿಸಲ್ಪಟ್ಟಿರುವ ಸಮಾಜ ವ್ಯವಸ್ಥೆಯನ್ನು ತೊಡೆದುಹಾಕದೆ ಒಂದು ಜಾತ್ಯಾತೀತ ಪ್ರಜಾಪ್ರಭುತ್ವ ನಿರ್ಮಾಣದ ಪ್ರಶ್ನೆಯೇ ಇಲ್ಲ; ಸಮಾಜವಾದದ ಪ್ರಶ್ನೆ ದೂರವೇ ಉಳಿಯಿತು. ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ನಡೆಯುವ ಹೋರಾಟವನ್ನು ಜಾತಿ ಸಮಾಜದ ವಿರುದ್ಧದ ಹೋರಾಟದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಇನ್ನೊಬ್ಬ ಹಿರಿಯ ಮಾರ್ಕ್ಸ್‌ವಾದಿ ಹೋರಾಟಗಾರಾಗಿದ್ದ ಬಿ.ಟಿ.ರಣದೀವೆ ಹೀಗೆ ಹೇಳುತ್ತಾರೆ.

"ಜಾತಿ ಮತ್ತು ಕೋಮುವಾದದ ವಿರುದ್ಧದ ಸೈದ್ಧಾಂತಿಕ ಹೋರಾಟದ ವಿಷಯದಲ್ಲಿ ನೀಡಲಾದ ಗಮನ ಸಾಲದು. ಜಾತಿ ದಮನದ ವಿರುದ್ಧ ಅಂತಹ ಹೋರಾಟ ಮತ್ತು ನೇರ ಮಧ್ಯಪ್ರವೇಶವಿಲ್ಲದೆ, ಆರ್ಥಿಕ ಹೋರಾಟಗಳಿಂದ ಉದ್ಭವವಾಗುವ ಸಾಮಾನ್ಯ ಪ್ರಜ್ಞೆಯನ್ನು ಮುಂದಕ್ಕೆ ಕೊಂಡೊಯ್ಯಲಾಗದು."

"ದುಡಿಯುವ ವರ್ಗದ ಐಕ್ಯತೆ ಮತ್ತು ಸೌಹಾರ್ದತೆಯ ದೃಷ್ಟಿಯಿಂದ, ಹೋರಾಡುವ ಶ್ರಮಜೀವಿಗಳಲ್ಲಿ ಮುಖ್ಯವಾಗಿ ಕಾರ್ಮಿಕರಲ್ಲಿ ಒಂದು ಬಲವಾದ ಜಾತಿ ವಿರೋಧಿ ಪ್ರಜ್ಞೆಯನ್ನು ಬೆಳೆಸುವ ಮೂಲಕ ಜಾತಿ ಮತ್ತು ಅಸ್ಪೃಶ್ಯತೆಯ ಸವಾಲನ್ನು ನಿರ್ಣಾಯಕವಾಗಿ ಎದುರಿಸಿ ಸೋಲಿಸಲು ಸಾಮೂಹಿಕ ಸಂಘಟನೆಗಳ ನಾಯಕರು ಗಮನ ನೀಡಬೇಕು. ಒಂದು ಬಲಿಷ್ಠವಾದ ಸೈದ್ಧಾಂತಿಕ ಪ್ರಚಾರದ ಮೂಲಕ ಇದನ್ನು ಸಾಧಿಸಬಹುದಾಗಿದೆ."


ಭಾರತದ ಜಾತಿ ವ್ಯವಸ್ಥೆಯ ಉಗಮವು ಖಾಸಗಿ ಆಸ್ತಿಯ ಉಗಮದೊಂದಿಗೆ ತಳಕು ಹಾಕಿಕೊಂಡಿದೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಜಾತಿಗಳಿಗೆ ಮಾತ್ರ ಆಸ್ತಿಯನ್ನು ಹೊಂದುವ ಅಧಿಕಾರವಿತ್ತು. ಶೂದ್ರ ಹಾಗೂ ಅಂತ್ಯಜ ಜಾತಿಗಳಿಗೆ ಸೇರಿದವರಿಗೆ ಆಸ್ತಿಯ ಹಕ್ಕುಗಳಿರಲಿಲ್ಲ. ಆಸ್ತಿಯ ಹಕ್ಕನ್ನು ಹೊಂದಿದ್ದ ಮೂರು ಮೇಲ್ಜಾತಿಗಳು ಸಹಜವಾಗಿ ಆಳುವ ವರ್ಗಗಳಾಗಿದ್ದವು. ಶೂದ್ರರು ಆಸ್ತಿಯನ್ನು ಸಂಪಾದಿಸಿದರೆ, ಅದನ್ನು ಕಿತ್ತುಕೊಳ್ಳುವ ಅಧಿಕಾರ ಮೇಲ್ಜಾತಿಗಳಿಗಿತ್ತು. ಜಾತಿ ಭ್ರಷ್ಟರಿಗೆ ಹುಟ್ಟಿದವರೇ ಅಂತ್ಯಜರಾಗಿ ಊರ ಹೊರವಲಯದಲ್ಲಿ ವಾಸಿಸುತ್ತಿದ್ದರು. ಅವರಿಗಂತೂ ಕನಿಷ್ಠ ಜೀವನಾವಶ್ಯಕ ವಸ್ತುಗಳನ್ನು ಸಹ ಇಟ್ಟುಕೊಳ್ಳುವ

ಪುಟ4 ಕ್ಕೆ

ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆ ರಕ್ಷಣೆಗಾಗಿ ಪ್ರತಿಭಟನೆ

ಬೆಳೆದು ನಿಂತಿರುವ ಬೆಳೆ ಉಳಿಸಲು ನೀರು ಕೊಡಿ ಎಂದು ರೈತರ ಚಳುವಳಿ. ಸಿಡಿದೆದ್ದಿದೆ ಮೂರು ಜನ ರೈತರು ಸಾವನ್ನಪ್ಪಿದ್ದಾರೆ. ನಾಯಕರ ಬಂಧನ, ಜೈಲುವಾಸಗಳು ಆರಂಭಗೊಂಡಿದೆ....





ಕೃಷ್ಣಾ ಅಚ್ಚುಕಟ್ಟು ನೀರಾವರಿ ಸಲಹಾ ಸಮಿತಿ ಸಭೆ ಇತ್ತೀಚೆಗೆ ಗುಲಬರ್ಗಾ ಜಿಲ್ಲೆಯ ಬೀಮರಾಯನ ಗುಡಿಯಲ್ಲಿ ಸೇರಿ ಮಾರ್ಚ್ 29ಕ್ಕೆ ನೀರು ನಿಲ್ಲಿಸಲು ತೀರ್ಮಾನಿಸಿರುವುದು ನೀರಾವರಿ ಪ್ರದೇಶದ ರೈತರಿಗೆ ಆಘಾತವುಂಟು ಮಾಡಿತ್ತು.

ಇದನ್ನು ವಿರೋಧಿಸಿ ಏಪ್ರಿಲ್-8 ರಂದು ಗುಲ್ಬರ್ಗಾ ಜಿಲ್ಲೆಯ ಬೀಮರಾಯನ ಗುಡಿಯಲ್ಲಿ ಸಾವಿರಾರು ರೈತರ ಬೃಹತ್ ಪ್ರತಿಭಟನೆಯನ್ನು ಸಂಘಟಿಸಲಾಯಿತು. ಆ ಸಂದರ್ಭದಲ್ಲಿ ಮಾತುಕತೆ ನಡೆದು, ಏಪ್ರಿಲ್-5.05ರವರೆಗೆ ನೀರು ಬಿಡುವುದಾಗಿ ಅಧಿಕಾರಿಗಳು ತಿಳಿಸಿದರು. ಇದನ್ನು ಒಪ್ಪದೇ ರೈತರು ಏಪ್ರಿಲ್ - 25 ರವರೆಗೂ ನೀರನ್ನು ಬಿಡಬೇಕೆಂದು ಆಗ್ರಹಿಸಿ, ಮತ್ತೆ ಮಾರ್ಚ್ 4 ಮತ್ತು 5 ರಂದು ನಾರಾಯಣಪುರ ಡ್ಯಾಂನ ನೀರಾವರಿ ಕಛೇರಿಯನ್ನು ಸಾವಿರಾರು ಸಂಖ್ಯೆಯಲ್ಲಿ ಮುತ್ತಿಗೆ ಹಾಕಿ ಹೋರಾಟ ನಡೆಸಲಾಯಿತು. ಏಪ್ರಿಲ್ 9 ರವರೆಗೆ ಈ ಹೋರಾಟದ ಫಲದಿಂದ ಮತ್ತೆ ನೀರನ್ನು ಬಿಡುವುದನ್ನು ವಿಸ್ತರಿಸಲು ಅಧಿಕಾರಿಗಳು ಒಪ್ಪಿದ್ದರೂ, ಏಪ್ರಿಲ್-25. ತನಕ ನೀರು ಬಿಡಲು ಸಿದ್ದವಿಲ್ಲ. ಈ ರೈತ ವಿರೋಧಿ ನೀತಿಯನ್ನು ಖಂಡಿಸಿ **ರೈತರ ಬೆಳೆಯನ್ನು ರಕ್ಷಿಸಲು ಏಪ್ರಿಲ್ 25 ರತನಕ ನೀರನ್ನು ಬಿಡಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ (KPRS) ನಾಯಕತ್ವದಲ್ಲಿ ಏಪ್ರಿಲ್ 8 ರಿಂದ ಮತ್ತೆ ಹೋರಾಟ ನಡೆಸಲಾಗುತ್ತಿದೆ.**

ಒಟ್ಟು ನೀರಾವರಿಗೆ ಒಳಪಟ್ಟ 11 ಲಕ್ಷ 70 ಸಾವಿರ ಎಕರೆ ಪ್ರದೇಶದಲ್ಲಿ 7 ಲಕ್ಷ 30 ಸಾವಿರ ಎಕರೆ ಪ್ರದೇಶದಲ್ಲಿ ಬೆಳೆ ಮಾರ್ಚ್ 31ರ ಒಳಗೆ ರೈತರ ಕೈಗೆ ಸೇರಿದೆ. ಇನ್ನುಳಿದ 4 ಲಕ್ಷ 40 ಸಾವಿರ ಎಕರೆ ಪ್ರದೇಶದಲ್ಲಿ ಶೇಂಗಾ, ಹತ್ತಿ, ಮೆಣಸಿನಕಾಯಿ, ಬತ್ತ, ಸೂರ್ಯಕಾಂತಿ, ಗೋದಿ ಮತ್ತಿತರ ಬೆಳೆಗಳು ನೀರಿಲ್ಲದೆ ಬತ್ತಿ ಹೋಗುವ ಸಾಧ್ಯತೆ ಇದೆ.

ಶೇಂಗಾ 28 ಕೋಟಿ ರೂಪಾಯಿಗಳು, ಹತ್ತಿ 100 ಕೋಟಿ, ಮೆಣಸಿನಕಾಯಿ 75 ಕೋಟಿ, ಬತ್ತ 300 ಕೋಟಿ, ಸೂರ್ಯಕಾಂತಿ, ಗೋದಿ ಇತ್ಯಾದಿ 50 ಕೋಟಿ, ಒಟ್ಟು 550 ಕೋಟಿ ರೂಪಾಯಿಗಳ ಮೌಲ್ಯದ ಬೆಳೆಗಳು ಒಣಗಿ ರೈತರ ಪಾಲಿಗೆ ಕಾರ್ಗತ್ತಲು ಮೂಡಲಿದೆ. ಗುಲಬರ್ಗಾ ಜಿಲ್ಲೆಯ ಶಹಾಪೂರ, ಸುರಪುರ, ಜೇವರ್ಗಿ, ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ, ಸಿಂದಗಿ, ಇಂಡಿ ತಾಲೂಕಿನ ರೈತರಿಗೆ ನೀರಾವರಿ ಸಲಹಾ ಸಮಿತಿ ತೀರ್ಮಾನ ಸಿಡಿಲು ಬಡಿದಂತೆ ಮಾಡಿದೆ. ಆಲಮಟ್ಟಿ ಮತ್ತು ನಾರಾಯಣಪುರ ಡ್ಯಾಂನಲ್ಲಿ ನೀರು ಸಂಗ್ರಹಣೆ ಇಲ್ಲದ್ದರಿಂದ ನೀರು ಕೊಡಲಿಕ್ಕೆ ಆಗುವುದಿಲ್ಲವೆಂದು ನೀರಾವರಿ ಸಲಹಾ ಸಮಿತಿ ಹೇಳಿದೆ.

ಆಲಮಟ್ಟಿ ಡ್ಯಾಂನಲ್ಲಿ -173 ಟಿ.ಎಂ.ಸಿ ನೀರು ಸಂಗ್ರಹಣೆ (519 ವರೆಗೆ ನೀರು ನಿಲ್ಲಿಸಿದ್ದರಿಂದ) ಮಾಡಲಾಗಿದೆ. ಸರಿ ಸುಮಾರು 17 ಲಕ್ಷ 30 ಸಾವಿರ ಎಕರೆ ನೀರಾವರಿ ಮಾಡಬಹುದಾಗಿದೆ. ಏತ ನೀರಾವರಿ ಯೋಜನೆಗಳು ಮತ್ತು ಕಾಲುವೆಗಳು ಪೂರ್ಣ ಮಾಡದೆ ಇರುವುದರಿಂದ ನೀರಿನ ಬಳಕೆಯಾಗಿಲ್ಲ. ಕಳೆದ ವರ್ಷ ಹೆಚ್ಚುವರಿ ನೀರನ್ನು ಆಂಧ್ರಪ್ರದೇಶಕ್ಕೆ ಬಿಟ್ಟ ನೆನಪು ಹಸುರಾಗಿದೆ. ನೀರಾವರಿ ಸಲಹಾ ಸಮಿತಿಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ರೈತರನ್ನು ಹಾಳು ಮಾಡಲು ಇಂತಹ ತೀರ್ಮಾನ ಕೈಗೊಂಡಿದ್ದಾರೆ. ಆಲಮಟ್ಟಿ ಡ್ಯಾಂನಲ್ಲಿ ಸಾಕಷ್ಟು ನೀರಿನ ಸಂಗ್ರಹಣೆ ಇರುವುದರಿಂದ ಹಾಗೂ ನಾರಾಯಣಪುರ ಡ್ಯಾಂನಲ್ಲಿರುವ 15-20 ಟಿ.ಎಂ.ಸಿ ನೀರನ್ನು ಬಳಸಿಕೊಂಡು ಗುಲಬರ್ಗಾ-ಬಿಜಾಪುರ ಜಿಲ್ಲೆಯ ಆರು ತಾಲೂಕಿನ ಲಕ್ಷಾಂತರ ರೈತರ 4 ಲಕ್ಷ 40 ಸಾವಿರ, ಎಕರೆ ಪ್ರದೇಶದಲ್ಲಿ ಬೆಳೆದು ನಿಂತ 550 ಕೋಟಿ ರೂಪಾಯಿಗಳ ಮೌಲ್ಯದ ಬೆಳೆ ರಕ್ಷಿಸಲು ಸಾಧ್ಯವಿದೆ.

ಕರ್ನಾಟಕದ ಬಹುಬಾಗ ಬರಗಾಲಕ್ಕೆ ತುತ್ತಾಗಿದೆ. ಜನಸಾಮಾನ್ಯರು ಆಹಾರದ ಕೊರತೆ ಅನುಭವಿಸುತ್ತಿರುವಾಗ ನೀರು ಬಿಡದೇ ಬೆಳೆ ಒಣಗಿಸಿ ರೈತರಿಗೆ ಅನ್ಯಾಯ ಮಾಡುವ ನೀತಿಯನ್ನು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯಸಮಿತಿ ತೀವ್ರ ಖಂಡಿಸಿದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಜಲಸಂಪನ್ಮೂಲ ಸಚಿವರು ಕೂಡಲೇ ಮಧ್ಯಪ್ರವೇಶ ಮಾಡಿ ರೈತರ ಬೆಳೆ ಸಂರಕ್ಷಿಸಲು ಮುಂದಾಗಬೇಕೆಂದು ವಿನಂತಿಸಿದೆ.

ರೈತರ ಬೇಡಿಕೆಗಳಿಗೆ ಸರ್ಕಾರದ ಸ್ಪಂದನ ಕಾಣದಾದಾಗ ಅನಿವಾರ್ಯವಾಗಿ ಹೋರಾಟಕ್ಕೆ ಮತ್ತೆ ಇಳಿಯಬೇಕಾಯಿತು. ನಾರಾಯಣಪುರ - ಆಲಮಟ್ಟಿ ಪ್ರದೇಶಗಳಲ್ಲಿ ಎರಡು ಸಾವಿರಕ್ಕೂ ಅಧಿಕವಾಗಿ ರೈತರು ಜಮಾಯಿಸಿ ನೀರು ಬಿಡಬೇಕೆಂದು ಚಳುವಳಿಗೆ ಇಳಿದರು. ಇದೇ ಸಂದರ್ಭದಲ್ಲಿ ಪ್ರತಿಭಟನಾ ರ್‍ಯಾಲಿಗೆ ಆಗಮಿಸುತ್ತಿದ್ದ ಶಹಪುರ ತಾಲ್ಲೂಕಿನ ರೈತರನ್ನೊತ್ತ ಟ್ರಾಕ್ಟರ್ ಮಗುಚಿ, ಮೂರು ರೈತರು ಸಾವನ್ನಪ್ಪಿದರು. ಇದರಿಂದಾಗಿ ಪರಿಸ್ಥಿತಿ ಉದ್ವಿಗ್ನವಾಯಿತು. ಇಂತಹ ಗಂಭೀರ ಸ್ಥಿತಿ ಅರಿತು ಸರ್ಕಾರ ನೀರು ಬಿಡಬಹುದಿತ್ತು. ಹಾಗೆ ಮಾಡದೇ, ರೈತರನ್ನು ಹಾದಿ ತಪ್ಪಿಸಲು ಯತ್ನಿಸಿತು. 'ರಸ್ತಾ ರೋಕೋ ನಡೆದವು. ಇನ್ನೂ ಪ್ರಬಲ ಪ್ರತಿಭಟನೆಗೆ ರೈತರು ಸಜ್ಜಾದರು. ಐದಾರು ಸಾವಿರ ಸೇರುವ ನಿರೀಕ್ಷೆ ಇತ್ತು. ಇದನ್ನು ದಮನಿಸಲು ಸರ್ಕಾರ ಪ್ರಾಂತ ರೈತ ಸಂಘದ ನಾಯಕರಾದ ಮಾರುತಿ ಮಾನ್ಪಡೆ, ಚಿನ್ನಪ್ಪ ರನ್ನು ಒಳಗೊಂಡು 36 ಜನರನ್ನು ಸೆಕ್ಷನ್ 161, 107 ಕೇಸ್ ಹೂಡಿ ಗುಲ್ಬರ್ಗಾ ಕಾರಾಗೃಹಕ್ಕೆ ತಳ್ಳಿತು. ಇನ್ನೊಂದೆಡೆ ಶಹಪುರದ ಶಾಸಕರನ್ನು ಬಳಸಿ ರೈತ ಹಿತರಕ್ಷಣಾ ಸಮಿತಿ ಹುಟ್ಟುಹಾಕಿ ಇವರೊಂದಿಗೆ ಮಾತುಕತೆ ನಡೆಸುವುದಾಗಿ ಪ್ರಕಟಿಸಿತು. ಹೀಗೆ ಪ್ರಾಂತ ರೈತ ಸಂಘದ ಹೋರಾಟವನ್ನು ದುರ್ಬಲಗೊಳಿಸುವ ತಂತ್ರವಿದು. ಬಂಧಿತ ರೈತ ಮುಖಂಡರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ನೀರು ಪಡೆಯುವವರೆಗೂ ಹೋರಾಟ ಮುನ್ನಡೆಯಲಿದೆ.

ಜಾತಿ ದಮನ ಮತ್ತು ....

ಪುಟ 3 ರಿಂದ


ಹಕ್ಕಿರಲಿಲ್ಲ. ಮೇಲ್ಜಾತಿಯವರು ತಿಂದುಂಡು ಎಸೆದ ಆಹಾರವನ್ನು ತಿನ್ನಬೇಕಾಗಿತ್ತು; ಒಡೆದ ಮಡಿಕೆಗಳಲ್ಲಿ ಉಣ್ಣಬೇಕಾಗಿತ್ತು. ಸ್ಮಶಾನದಲ್ಲಿ ಚೆಲ್ಲಿದ ಬಟ್ಟೆಗಳನ್ನು ತೊಡಬೇಕಾಗಿತ್ತು.

ಹೀಗೆ **ಭಾರತದ ಜಾತಿ ಪದ್ಧತಿಗೂ ಆಸ್ತಿಯ ಹಕ್ಕಿಗೂ ಇರುವ ಸಂಬಂಧವನ್ನು ವಿಶ್ಲೇಷಿಸಿದರೆ ಜಾತಿ ಮತ್ತು ವರ್ಗಗಳು ಹೇಗೆ ತಳಕು ಹಾಕಿಕೊಂಡು ಬಂದಿವೆ ಎಂಬುದು ಸ್ಪಷ್ಟವಾಗುತ್ತದೆ.** ಅಂದು ಭೂಮಿ ಮತ್ತು ದನಕರುಗಳೇ ಆಸ್ತಿಯಾಗಿದ್ದವು. ಹೀಗೆ ಜಾತಿ ಪದ್ಧತಿಯು ಪಾಳೇಗಾರಿ ವರ್ಗ ವ್ಯವಸ್ಥೆಯ ಭಾಗವಾಗಿ ಬೆಳೆದು ಬರುವಂತಾಯಿತು. ಧಾರ್ಮಿಕ ನಂಬಿಕೆಗಳು ಮತ್ತು ಧಾರ್ಮಿಕ ಗ್ರಂಥಗಳ ಮೂಲಕ ಅದನ್ನು ಗಟ್ಟಿಗೊಳಿಸಲಾಯಿತು. ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಯೊಂದಿಗೆ ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಬೆಳೆದುಬಂದಿತಾದರೂ, ಬ್ರಿಟೀಷರು ತಮ್ಮ ರಾಜಕೀಯ ಉಳಿವಿಗಾಗಿ ಪಾಳೆಗಾರಿ ಪದ್ಧತಿಯೊಂದಿಗೆ ಮೈತ್ರಿ ಮಾಡಿಕೊಂಡು ಬಂದುದರ ಪರಿಣಾಮವಾಗಿ ಜಾತಿ ಪದ್ಧತಿಯು ನಾಶವಾಗಲಿಲ್ಲ. ಸ್ವಾತಂತ್ರ್ಯ ನಂತರ ಅಧಿಕಾರವನ್ನು ವಹಿಸಿಕೊಂಡ ಬಂಡವಾಳಗಾರರ ವರ್ಗವು ಬ್ರಿಟಿಷ್ ನೀತಿಯನ್ನೇ ಮುಂದುವರೆಸಿ ಜಾತಿ ಪದ್ಧತಿಯ ಮೇಲೆ ದಾಳಿ ಮಾಡುವ ಗೋಜಿಗೇ ಹೋಗಲಿಲ್ಲ.

ಇಂದು ಜಾತಿ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆದರೆ ಅದರ ಅಮಾನವೀಯ ಕ್ರೌರ್ಯ ಮುಂದುವರೆದಿದೆ. ಭಾರತದಲ್ಲಿ ಉಳಿದುಕೊಂಡಿರುವ ಅರೆ ಪಾಳೆಗಾರಿ ವ್ಯವಸ್ಥೆಯಲ್ಲಿ ಅದರ ಬೇರುಗಳಿವೆ. ಒಂದು ಕಾರ್ಷಿಕ ಕ್ರಾಂತಿಯಿಂದ ಮಾತ್ರ ಈ ಬೇರುಗಳನ್ನು ಕತ್ತರಿಸಬಹುದು. ನೂರಕ್ಕೆ 99ರಷ್ಟು ಭೂಹೀನರಾಗಿರವ ದಲಿತರಿಗೆ ಭೂಮಿಯನ್ನು ಹಂಚಬೇಕು ಎಂದು ಅಂಬೇಡ್ಕರ್ ಸಹ ಪ್ರತಿಪಾದಿಸಿದ್ದರು. ಭೂಸುಧಾರಣೆಗಳನ್ನು ಜಾರಿಗೆ ತರುವ ಮೂಲಕವಷ್ಟೇ ದಲಿತರಿಗೆ ಭೂಮಿಯನ್ನು ವಿತರಿಸಲು ಸಾಧ್ಯ. ಕ್ರಾಂತಿಕಾರಕ ಭೂಸುಧಾರಣೆಗಳಿಗಾಗಿ ಗ್ರಾಮೀಣ ಬಡವರೆಲ್ಲರೂ ಒಂದಾಗಿ ಹೋರಾಡಬೇಕಾಗಿದೆ. ಇದರ ಯಶಸ್ಸನ್ನು ಪಶ್ಚಿಮ ಬಂಗಾಳ, ತ್ರಿಪುರ, ಕೇರಳದಂತಹ ರಾಜ್ಯಗಳಲ್ಲಿ ಗಮನಿಸಬಹುದು. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಜಾರಿಗೆ ತಂದ ಭೂಸುಧಾರಣೆಗಳಿಂದಾಗಿ 25 ಲಕ್ಷ ಕುಟುಂಬಗಳಿಗೆ ಭೂಮಿ ದೊರೆಯುವಂತಾಯಿತು. ಅವುಗಳಲ್ಲಿ ಶೇ.57ರಷ್ಟು ಫಲಾನುಭವಿಗಳು ದಲಿತ ಕುಟುಂಬಗಳೆಂಬುದು ಗಮನಾರ್ಹವಾಗಿದೆ. ಒಂದು ಕಾರ್ಷಿಕ ಕ್ರಾಂತಿಯು ದೇಶದಲ್ಲಿ ಬಹುಸಂಖ್ಯಾತರೇ ಆಗಿರುವ ದಲಿತ ಮತ್ತು ಹಿಂದುಳಿದ ವಿಭಾಗಗಳು ಪಾಲ್ಗೊಳ್ಳದೆ ಯಶಸ್ವಿಯಾಗಲು ಸಾಧ್ಯವಿಲ್ಲ. ಅಂತಹ ಕ್ರಾಂತಿಯಲ್ಲಿ ದಲಿತ ವಿಭಾಗಗಳಿಗೆ ವಿಶ್ವಾಸ ಮೂಡುವಂತಾಗಬೇಕಾದರೆ ಆರ್ಥಿಕ ಪ್ರಶ್ನೆಗಳ ಜೊತೆ ಜೊತೆಯಲ್ಲಿ ಜಾತಿ ದಮನ, ಅಸ್ಪೃಶ್ಯತೆಯಂತಹ ಸಾಮಾಜಿಕ ಪ್ರಶ್ನೆಗಳ ವಿರುದ್ಧವೂ ಬಲಿಷ್ಠವಾದ ಹೋರಾಟಗಳನ್ನು ನಡೆಸಲು ಸಾಧ್ಯವಾಗಬೇಕು. ○

ಗ್ರಾಮ ಪಂಚಾಯತಿ-ಸಿಪಿಐ(ಎಂ) ನೇತೃತ್ವ

ಉತ್ತರಕನ್ನಡದ ಹೊನ್ನಾವರ ತಾಲೂಕಿನ ಮಾವಿನಕುರ್ವಾ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿ ತಿಲಕ ಜಟ್ಟಿಗೌಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಿಪಿಐ(ಎಂ) ಪಕ್ಷದ ಜಿಲ್ಲಾಸಮಿತಿಯ ಕಾರ್ಯದರ್ಶಿಮಂಡಳಿ ಸದಸ್ಯರೂ, ಸಿಐಟಿಯುನ ಜಿಲ್ಲಾಸಮಿತಿ ಪ್ರಧಾನ ಕಾರ್ಯದರ್ಶಿಗಳೂ ಆದ ತಿಲಕ ಗೌಡ ಅವರು ಇತ್ತೀಚೆಗೆ ಮಾವಿನಕುರ್ವಾ ವಿ.ಎಸ್.ಎಸ್ ಬ್ಯಾಂಕಿಗೆ ನಡೆದ ಚುನಾವಣೆಯಲ್ಲಿ ಕೂಡ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಅಧ್ಯಕ್ಷರಾಗಿ ತಿಲಕ ಜಟ್ಟಿಗೌಡ

ಇದರೊಂದಿಗೆ ಹೊನ್ನಾವರ ತಾಲೂಕು ಮಾರ್ಕೆಟಿಂಗ್ ಸೊಸೈಟಿಗೆ ಎರಡನೇ ಅವಧಿಗೆ ನಿರ್ದೇಶಕರಾಗಿ ಮತ್ತು ಹೊನ್ನಾವರದ ಕಾಸರಕೋಡಿನಲ್ಲಿರುವ ಉತ್ತರಕನ್ನಡ ಜಿಲ್ಲಾ ಸಹಕಾರಿ ಹಂಚಿನ ಕಾರ್ಖಾನೆಯ ಕಾಸರಕೋಡು ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಕೂಡ ಮೊದಲ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಶ್ಯಾಮನಾಥ ನಾಯ್ಕ

ಉತ್ತರಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಕದ್ರಾ ಗ್ರಾಮಪಂಚಾಯತ್‌ಗೆ ಇತ್ತೀಚೆಗೆ ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಶ್ಯಾಮನಾಥ ನಾಯ್ಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಶ್ಯಾಮನಾಥ

ಕದ್ರಾ ವಿದ್ಯುತ್ ಉತ್ಪದನಾ ಕೇಂದ್ರ, ಅಣುಸ್ಥಾವರ ಇತ್ಯಾದಿಗಳಿಂದ ನಿರಾಶ್ರಿತರಾದ ದೊಡ್ಡ ಪಡೆಯೇ ಇರುವ ಮತ್ತು ಈ ಕಾರಣದಿಂದಲೇ ಜಿಲ್ಲೆಯ, ರಾಜ್ಯದ ಗಮನ ಸೆಳೆದ ಪ್ರದೇಶ ಇದು.

ಶ್ಯಾಮನಾಥ ನಾಯ್ಕ ಪ್ರಸ್ತುತ ಕರ್ನಾಟಕ ಪ್ರಾಂತ ರೈತ ಸಂಘದ ಕಾರವಾರ ತಾಲೂಕು ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಹಿಂದೆ ಡಿವೈಎಫ್‌ಐನ್ನು ಆ ಪ್ರದೇಶದಲ್ಲಿ ಸಂಘಟಿಸಿ, ನಿರಾಶ್ರಿತರ ಸಮಸ್ಯೆಯ ವಿರುದ್ಧ ಹೋರಾಡಿದವರು. ಕೈಗಾ ಅಣುಸ್ಥಾವರದ ನಿರ್ಬಂಧಿತ ಪ್ರದೇಶದಲ್ಲಿದ್ದ ಹರಟುಗಾ, ಬಾಳೇಮನೆ, ದೇವಕಾರ ಪ್ರದೇಶದಲ್ಲಿ ಅಪಾಯದ ಭಯದಿಂದ ವಾಸಿಸುತ್ತಿರುವ ಕುಟುಂಬಗಳನ್ನು ಬೇರೆಡೆಗೆ ಸಾಗಿಸಬೇಕು, ಈ ಕಾರಣಕ್ಕಾಗಿ ಭೂಮಿಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಪುನರ್ ವಸತಿ ಮತ್ತು ಪರಿಹಾರ ಕೊಡಬೇಕೆಂದು ನಡೆಸಿದ ನಿರ್ಣಾಯಕ ಚಳುವಳಿಯನ್ನು ಸಂಘಟಿಸಿದವರಲ್ಲಿ ಶ್ಯಾಮನಾಥ ನಾಯ್ಕ ಒಬ್ಬರಾಗಿದ್ದಾರೆ. ಇದರ ಫಲವಾಗಿಯೇ ಇಂದು ದೇವಕಾರ ಗ್ರಾಮವನ್ನು ತೆರವುಗೊಳಿಸಲು ಇಂದು ಸರ್ಕಾರ ನೋಟಿಫಿಕೇಶನ್ ಹೊರಡಿಸಲು ಮುಂದಾಗಿದೆ.

ಭಾರತ ಚೀನಾ- ಚರಿತ್ರಾರ್ಹ ಶೃಂಗಸಭೆ

ಜನತಾ ಚೀನಾದ ಪ್ರಧಾನಿ ವೆನ್ ಜಿಯಾ ಬೋ ಅವರ ಭಾರತದ ಭೇಟಿ ಅತ್ಯಂತ ಮಹತ್ವವಾದುದು. ಗಹನವಾದ ಹಲವು ಪ್ರಶ್ನೆಗಳ ಬಗ್ಗೆ ಪರಸ್ಪರ ತಿಳುವಳಿಕೆ - ಬಾಂಧವ್ಯಗಳ ಅಭಿವೃದ್ಧಿಗೆ ಸಹಾಯಕವಾಗಲಿದೆ.



ಒಪ್ಪಂದಗಳ ವಿನಿಮಯ

ಚೀನಾದ ಪ್ರಧಾನ ಮಂತ್ರಿ ವೆನ್‌ಜಿಯ ಬಾವೊರವರ ಭಾರತ ಭೇಟಿ ಅತ್ಯಂತ ಯಶಸ್ವಿಯಾಗಿದ್ದು ಚರಿತ್ರಾರ್ಹ ಮೈಲುಗಲ್ಲಾಗಿದೆ. ಬೆಂಗಳೂರು, ನವದೆಹಲಿಗೆ ಭೇಟಿ ನೀಡಿದ ಚೀನಾದ ಪ್ರಧಾನ ಮಂತ್ರಿ ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಿದರು. ಇದರಿಂದ ಚೀನಾ-ಭಾರತ ಸಂಬಂಧವು ಇನ್ನಷ್ಟು ವೃದ್ಧಿಗೊಳ್ಳುವುದಲ್ಲದೆ, ಇದರಿಂದ ಎರಡೂ ದೇಶಗಳಿಗೆ ಸಹಕಾರಿಯಾಗಲಿದೆ. ಒಟ್ಟು 11 ಒಪ್ಪಂದಗಳಿಗೆ ಸಹಿ ಹಾಕಿದ ಈ ಶೃಂಗಸಭೆಯಲ್ಲಿ, ವಾಣಿಜ್ಯ ಮತ್ತು ಆರ್ಥಿಕ ಸಹಕಾರದ ಕುರಿತಾದ ಜಂಟಿ ಅಧ್ಯಯನ ಗುಂಪಿನ (joint study group) ವರದಿಯನ್ನು ಬಿಡುಗಡೆಗೊಳಿಸಲಾಗಿದೆ.

ಗಡಿವಿವಾದವನ್ನು ಬಗೆಹರಿಸಲು ಮಾರ್ಗದರ್ಶಿ ಸೂತ್ರಗಳನ್ನು ಬಿಡುಗಡೆಗೊಳಿಸಿರುವುದು ಶೃಂಗಸಭೆಯ ಇನ್ನೊಂದು ಮಹತ್ವದ ಅಂಶ. ಎರಡೂ ದೇಶಗಳ ಭವಿಷ್ಯತ್ತಿನ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿ ಗಡಿ ಪ್ರಶ್ನೆಗಳ ಕುರಿತು ಆದಷ್ಟು ಬೇಗನೆ, ರಾಜಕೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು ಎಂದು ಹೇಳಿರುವುದಲ್ಲದೆ, ಈ ಕುರಿತು ಭಿನ್ನಾಭಿಪ್ರಾಯಗಳಿದ್ದಲ್ಲಿ, ಒಟ್ಟಾರೆ ದ್ವಿಪಕ್ಷೀಯ ಸಂಬಂಧಗಳ ಅಭಿವೃದ್ಧಿಗೆ ತೊಡಕಾಗಲು ಎಡೆ ಮಾಡಿಕೊಡುವುದಿಲ್ಲವೆಂದೂ ದಸ್ತಾವೇಜಿನಲ್ಲಿ ತಿಳಿಸಲಾಗಿದೆ. ಈ ಕುರಿತು ಅಂತಿಮ ಒಪ್ಪಂದದಲ್ಲಿ ಭಾರತ - ಚೀನಾ ಗಡಿಯ ಎಲ್ಲಾ ವಿಭಾಗಗಳನ್ನು ಒಳಗೊಳ್ಳುವುದಾಗಿ ಸ್ಪಷ್ಟಪಡಿಸುವ ದಸ್ತಾವೇಜು, ಯಾವುದೇ ಬಲ ಪ್ರಯೋಗ ಮಾಡುವುದಾಗಲೀ, ಬಲಪ್ರಯೋಗದ ಹೇಳಿಕೆನ್ನು ನೀಡುವುದನ್ನಾಗಲೀ ನಿಷೇಧಿಸಲಾಗಿದೆ.

ಗಡಿಪ್ರದೇಶದಲ್ಲಿ ಈಗಾಗಲೇ ವಾಸವಾಗಿರುವ ಜನರ ಹಿತಾಸಕ್ತಿಗಳನ್ನು ಕಾಪಾಡಲು ಎರಡೂ ದೇಶಗಳು ಬದ್ಧವಾಗಿರುವುದನ್ನು ಒಪ್ಪಂದವು ಪ್ರಸ್ತಾಪಿಸಿದೆ. ಇದು ಸ್ವಾಗತಾರ್ಹ ಅಂಶವಾಗಿದ್ದು, ಜನರಹಿತವಾಗಿರುವ ಗಡಿ ಪ್ರದೇಶಗಳ ಬಗ್ಗೆ ಮಾತ್ರ ಎರಡೂ ದೇಶಗಳು, 'ಕೊಡು-ಕೊಳ್ಳುವ' ನೀತಿ ಅನುಸರಿಸಲು ಒಪ್ಪಿರುವುದನ್ನು ಇದು ಸೂಚಿಸುತ್ತದೆ.

ಎರಡು ದೇಶಗಳ ನಡುವೆ ಆರ್ಥಿಕ ಸಹಕಾರವನ್ನು ಹೆಚ್ಚಿಸಲು ಇತರೆ ಒಪ್ಪಂದಗಳಲ್ಲಿ ಸೂಚಿಸಲಾಗಿದ್ದು, ಪ್ರಾದೇಶಿಕ ವಾಣಿಜ್ಯ ಒಪ್ಪಂದದ ಕುರಿತು ಅಭ್ಯಸಿಸಲು 'ಟಾಸ್ಕ್ ಫೋರ್ಸ್'ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಪೆಟ್ರೋಲಿಯಂ ಕ್ಷೇತ್ರದಲ್ಲೂ ಸಹಕಾರವನ್ನು ಹೆಚ್ಚಿಸಲು ಒಪ್ಪಲಾಗಿದ್ದು, 2008ರ ವೇಳೆಗೆ ಒಟ್ಟಾರೆ 20 ಬಿಲಿಯ (20,000 ಮಿಲಿಯ) ಡಾಲರುಗಳ ವ್ಯಾಪಾರದ ಗುರಿಯನ್ನು ಇಡಲಾಗಿದೆ.

ಸಿಕ್ಕಿಂ ರಾಜ್ಯವು ಭಾರತದ ಅವಿಭಾಜ್ಯ ಅಂಗ ಎಂದು ತೋರಿಸುವ ಚೀನಾದ ಭೂಪಟವನ್ನು ಪ್ರಧಾನಮಂತ್ರಿ ವೆನ್‌ಜಿಯಬಾವೊ, ಭಾರತದ ಪ್ರಧಾನ ಮಂತ್ರಿ ಮನಮೋಹನ್‌ಸಿಂಗ್ ಅವರಿಗೆ ಹಸ್ತಾಂತರಿಸುವುದರ ಮೂಲಕ ಭಾರತ-ಚೀನಾ ನಡುವಣ ಸಂಬಂಧದಲ್ಲಿ ದೊಡ್ಡ ತೊಡಕಾಗಿದ್ದ ಅಂಶವನ್ನು ನೀಗಿದಂತಾಗಿದೆ.

ಶೃಂಗಸಭೆಯ ಕೊನೆಯಲ್ಲಿ ನೀಡಲಾದ ಜಂಟಿ ಹೇಳಿಕೆಯಲ್ಲಿ ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧವು ಈಗ, 'ಜಾಗತಿಕ ಮತ್ತು ವ್ಯೂಹಾತ್ಮಕ' ಗುಣವನ್ನು ಹೊಂದಿದೆ ಎಂದು ಹೇಳಲಾಗಿದ್ದು, ಆದರೆ ಈ ಸಂಬಂಧವು ಶಾಂತಿ ಮತ್ತು ಅಭ್ಯುದಯಕ್ಕಾಗಿ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಚೀನಾದ ಲೋಯಾಂಗ್ ಪ್ರದೇಶದಲ್ಲಿ ಭಾರತ ಮಾದರಿಯ, ಬುದ್ಧ ದೇವಾಲಯವನ್ನು ಸ್ಥಾಪಿಸಲು ಒಪ್ಪಿರುವುದು ಮತ್ತು ಭಾರತ-ಚೀನಾ ಚಲನಚಿತ್ರ ಸಹಕಾರ ಆಯೋಗದ ರಚನೆ ಮೊದಲಾದ ಅಂಶಗಳು, ಒಪ್ಪಂದಗಳ ವ್ಯಾಪಕತೆಯನ್ನು ಸೂಚಿಸುತ್ತದೆ.

ಅಂತರರಾಷ್ಟ್ರೀಯ ಮಹತ್ವ : ಭಾರತ - ಚೀನಾ -ರಶಿಯಾ ದೇಶಗಳ ನಡುವಣ ಸಹಕಾರ ಅಂತರಾಷ್ಟ್ರೀಯ ಸಂಬಂಧಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಸಹಾಯವಾಗುತ್ತದೆ ಎಂಬುದನ್ನು ಈಗಾಗಲೇ ಮನಗಾಣಲಾಗಿದೆ. ಇದು ಜಗತ್ತಿನ ಮೇಲೆ ಏಕಧ್ರುವೀಕರಣವನ್ನು ಹೇರಲು ಬಯಸುವ ಅಮೇರಿಕದ ಶಕ್ತಿಯನ್ನು ತಡೆಯುತ್ತದೆ. ಇದೇ ಸಂದರ್ಭದಲ್ಲಿ ಚೀನಾದ ಪ್ರಧಾನ ಮಂತ್ರಿಯವರು ಜಗತ್ತಿನಲ್ಲಿ ಶಾಂತಿ, ಭದ್ರತೆಯನ್ನು ಖಾಯಂಗೊಳಿಸಲು ಚೀನಾವು ತ್ರಿಪಕ್ಷೀಯ ಸಹಕಾರಕ್ಕೆ ಮುಂದಾಗುವುದು ಎಂದು ಹೇಳಿದರಲ್ಲದೆ ಇದು ಅಂತರರಾಷ್ಟ್ರೀಯ ಸಂಬಂಧಗಳನ್ನು ಪ್ರಜಾಸತ್ತಾತ್ಮಕಗೊಳಿಸಲು ಸಹಾಯವಾಗುತ್ತದೆ ಎಂದೂ ಹೇಳಿದರು. ಭಾರತ ಭೇಟಿಯು ಅತ್ಯುತ್ತಮ ಫಲಿತಾಂಶ ನೀಡಿದೆ ಎಂದು ಹೇಳಿದ ಚೀನಾದ ಪ್ರಧಾನ ಮಂತ್ರಿ, ನಮ್ಮೆರಡು ದೇಶಗಳು ಚರಿತ್ರೆಯನ್ನು ನಿರ್ಮಿಸುತ್ತದೆ" ಎಂದು ಮನಮೋಹನಸಿಂಗ್‌ರವರು ಹೇಳಿದುದನ್ನು ಪುನರುಚ್ಚರಿಸಿದರು.

ಭಾರತ ಮತ್ತು ಚೀನಾ ಜತೆಯಾಗಿ ಕೆಲಸ ಮಾಡಿದ್ದೇ ಆದಲ್ಲಿ 21ನೇ ಶತಮಾನವು ಏಷ್ಯಾಖಂಡದ ಪಾಲಾಗಲಿದೆ ಎಂದು ಭರವಸೆ ನೀಡಿದ ಚೀನಾದ ಪ್ರಧಾನ ಮಂತ್ರಿಯವರು, ಹಿಂದಿ-ಚೀನಿ ಭಾಯ್ ಭಾಯ್ ಘೋಷಣೆಯು ಇಂದಿಗೂ ಪ್ರಸ್ತುತವಿದೆ ಎಂದು ಸ್ಪಷ್ಟಪಡಿಸಿದರು. ಭಾರತ ಅಭಿವೃದ್ಧಿ ಹೊಂದುವುದನ್ನು ಕಾಣಲು ನಾವು ಸಂತೋಷಪಡುತ್ತೇವೆ ಎಂದು ವೆನ್‌ಜಿಯಾಬಾವೊ ಹೇಳಿದರಲ್ಲದೆ 'ಚೀನಾದ ಬೆಳವಣಿಗೆಯು ಭಾರತದ ಹಿತಾಸಕ್ತಿಗೆ ಪೂರಕವಾಗಲಿದೆ' ಎಂಬುದನ್ನು ಒತ್ತಿಹೇಳಿದರು.

ಶೃಂಗಸಭೆ ಎಲ್ಲಾ ವಿಧದಲ್ಲೂ ಚರಿತ್ರಾರ್ಹವಾಗಿದೆ. ಸಹಿ ಹಾಕಿದ ಎಲ್ಲಾ ಒಪ್ಪಂದಗಳನ್ನು ಪ್ರಾಮಾಣಿಕವಾಗಿ ಜಾರಿಗೊಳಿಸಿದ್ದೇ ಆದಲ್ಲಿ ಭಾರತ ಮತ್ತು ಚೀನಾದ ಜನತೆಗೆ ಉತ್ತಮ ಭವಿಷ್ಯಕ್ಕೆ ದಾರಿಯಾಗುವುದು ಮಾತ್ರವಲ್ಲದೆ, ದಕ್ಷಿಣ ಏಷ್ಯಾ ಮತ್ತು ಜಗತ್ತಿನಲ್ಲಿ ಶಾಂತಿ, ಸಹಕಾರ ಮತ್ತು ಸುಭದ್ರತೆ ನೆಲೆಸಲು ಸಹಕಾರಿಯಾಗುತ್ತದೆ

ಅವರು ಹೇಳಿದರು ಎರಡು ಉತ್ಸವಗಳ ಕಥೆ

ಮುಂದಿನ ಪುಟಗಳಲ್ಲಿ ನಾವು ಓದಲಿರುವ ಸಿಪಿಐ(ಎಂ) ಮಹಾಧಿವೇಶನದ ಬಗೆಗಿನ ಲೇಖನಗಳಿಗೆ ಸ್ವಾಗತದ ಟಿಪ್ಪಣಿಯಂತಿದೆ ನೋಡಿ...

ಸಿಪಿಐ(ಎಂ) 18ನೇ ಮಹಾಧಿವೇಶನ ಆರಂಭವಾದ ದಿನವೇ ಬಿಜೆಪಿ ತನ್ನ 25ನೇ ವಾರ್ಷಿಕೋತ್ಸವ ಹಮ್ಮಿಕೊಂಡಿತ್ತು. ಅದೂ ದೆಹಲಿಯಲ್ಲಿ. ಈ ಎರಡು 'ಉತ್ಸವ'ಗಳನ್ನು ಹೋಲಿಸುತ್ತಾ ಕಂಡ ವ್ಯತ್ಯಾಸಗಳ ಬಗ್ಗೆ '**ದಿ ಹಿಂದೂ**' ಪತ್ರಿಕೆ ವಿಶ್ಲೇಷಣೆ ಪ್ರಕಟಿಸಿದೆ. ಅದರ ಭಾಗಗಳು.

ಎರಡು ಪ್ರಮುಖ ರಾಜಕೀಯ ಪಕ್ಷಗಳು - ಒಂದೇ ದಿನ ರಾಜಧಾನಿಯಲ್ಲಿ 'ಉತ್ಸವ'ಗಳನ್ನು ನಡೆಸುವುದು ಅಪರೂಪ.

ಬಿಜೆಪಿ ತನ್ನ 25ನೇ ವಾರ್ಷಿಕೋತ್ಸವ ಅಂಬೇಡ್ಕರ್ ಸ್ಟೇಡಿಯಂ(ಫುಟ್‌ಬಾಲ್ ಮ್ಯಾಚ್‌ಗಳು ನಡೆಯುವ ಸ್ಥಳ) ನಲ್ಲಿ ಅದ್ದೂರಿಯಾಗಿ ಹಮ್ಮಿಕೊಂಡಿದೆ. ಸಿಪಿಐ(ಎಂ) ತನ್ನ 18ನೇ ಮಹಾದಿವೇಶನವನ್ನು ತಾಲ್ಕತೋರ ಇನ್‌ಡೋರ್ ಸ್ಟೇಡಿಯಂ ಸಂಘಟಿಸಿದೆ. ಬಿಜೆಪಿ ತನ್ನ ಉತ್ಸವ ಸ್ಥಳವನ್ನು ದೀನ್‌ದಯಾಳ ಉಪಾಧ್ಯಾಯನಗರ ಎಂದು ಹೆಸರಿಸಿದರೆ, ಸಿಪಿಐ(ಎಂ) ಇ.ಕೆ.ನಾಯನಾರ್ ನಗರ ಎಂದು ಹೆಸರಿಸಿದೆ.

ಅಷ್ಟಕ್ಕೆ ಸಾಮ್ಯಗಳು ಮುಗಿಯುತ್ತವೆ. ಅದು ಬಿಟ್ಟು ಉಳಿದೆಲ್ಲವೂ ವ್ಯತ್ಯಾಸಗಳೇ. ಎರಡು ಉತ್ಸವಗಳು ವ್ಯತ್ಯಾಸ- ಶೈಲಿ, ಹೂರಣ ಮತ್ತು ನಾಯಕತ್ವ-ಎಲ್ಲರಲ್ಲೂ ಕಣ್ಣಿಗೆ ಹೊಡೆಯುವಂತಹದು.

ಬಿಜೆಪಿಗೆ ಹೊಸದಾಗಿ ಅಧ್ಯಕ್ಷರ ನಾಯಕತ್ವಕ್ಕೆ ಆಯ್ಕೆಯಾದ ಎಲ್‌ಕೆ.ಅದ್ವಾನಿ, ಎರಡನೇ ಪೀಳಿಗೆಯ ನಾಯಕ ವೆಂಕಯ್ಯ ನಾಯ್ಡುರ ಜಾಗ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಸಿಪಿಐ(ಎಂ)ನಲ್ಲಿ ಎಲ್ಲಾ ಸೂಚನೆಗಳ ಪ್ರಕಾರ ಹಿರಿಯ ನಾಯಕ ಸುರ್‌ಜೀತ್ ಎರಡನೇ ಪೀಳಿಗೆಯ ನಾಯಕ ಪ್ರಕಾಶ್ ಕಾರಟ್‌ಗೆ ನಾಯಕತ್ವ ವಹಿಸಲಿದ್ದಾರೆ.

ನಾಯಕತ್ವದ ಶೈಲಿಯಲ್ಲಿ ಸಹ ಎರಡೂ ಪಕ್ಷಗಳ ನಡುವೆ ವ್ಯತ್ಯಾಸವಿದೆ. ಆದರೆ ಕಣ್ಣಿಗೆ ಹೊಡೆಯುವಂತಹದು. ಎರಡು ಉತ್ಸವಗಳ ಹಿಂದೆ ಇರುವ ಉತ್ಸಾಹದ ಸ್ವಭಾವದಲ್ಲಿ ಇರುವ ವ್ಯತ್ಯಾಸದಲ್ಲಿ. ಬಿಜೆಪಿಯ ಉತ್ಸವದಲ್ಲಿ ಕಾರ್ಯಕರ್ತರ ಉತ್ಸಾಹದ ಪಾಲುಗೊಳ್ಳುವಿಕೆ ಅಷ್ಟಾಗಿ ಇಲ್ಲ. ಸಿಪಿಐ(ಎಂ) ಉತ್ಸವದಲ್ಲಿ ದೊಡ್ಡ ಕಾರ್ಯಕರ್ತರ ಪಡೆಯ ಉತ್ಸಾಹಕರ ಪಾಲುಗೊಳ್ಳುವಿಕೆ ಎಲ್ಲೆಲ್ಲೂ ಕಾಣುತ್ತದೆ.

ಬಿಜೆಪಿ ಉತ್ಸವದ ಎಲ್ಲಾ ಉಸ್ತುವಾರಿ ನೋಡುತ್ತಿರುವುದು ಕಂಟ್ರಾಕ್ಟರುಗಳು. ಆದರೆ ಸಿಪಿಐ(ಎಂ) ಉತ್ಸವದಲ್ಲಿ ಉತ್ತಮ ಪೋಸ್ಟರ್‌ಗಳು ವಾಲ್‌ಪೈಂಟಿಂಗ್‌ಗಳಿಂದ ಹಿಡಿದು, ಎಲ್ಲಾ ಉಸ್ತುವಾರಿ ಕಟಿಬದ್ಧ ಉತ್ಸಾಹಿ ಕಾರ್ಯಕರ್ತರದ್ದು. ಬಿಜೆಪಿ ಉತ್ಸವದಲ್ಲಿ ಸಾರ್ವಜನಿಕ ಸಭೆ ಇಲ್ಲ. ಸಿಪಿಐ(ಎಂ) ತನ್ನ ಮಹಾಧಿವೇಶನದ ಕೊನೆಗೆ ಭಾರಿ ಸಾರ್ವಜನಿಕ ಸಭೆ ಹಮ್ಮಿಕೊಂಡಿದೆ. ದೆಹಲಿಯಲ್ಲಿ ಬಿಜೆಪಿಗೆ ಬಹುಶಃ ಬೆಂಬಲಿಗರ- ಕಾರ್ಯಕರ್ತರ ಕೊರತೆ ಇಲ್ಲ. ಆದರೂ ಅದು ಉತ್ಸವದಲ್ಲಿ ಕಾಣುವುದಿಲ್ಲ. ಸಿಪಿಐ(ಎಂ)ದೆಹಲಿಯ ಸುತ್ತಲಿನ ಕೆಲ ಹೊರ ರಾಜ್ಯಗಳಿಂದಲೂ ಜನರನ್ನು ಅಣಿನೆರೆಸಿ ರ್‍ಯಾಲಿ ನಡೆಸಲಿದೆ.

ಅಂಬೇಡ್ಕರ್ ಸ್ಟೇಡಿಯಂನಲ್ಲಿ ಬಿಜೆಪಿ ನಾಯಕರ ದುಬಾರಿ ಕಾರುಗಳ ಎರಡು ಸಾಲು ದೆಹಲಿ ಗೇಟ್‌ನಿಂದ ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್‌ವರೆಗೂ, ಬಿಜೆಪಿಯ ಹೊಸ 'ಪಂಚತಾರಾ' ಸಂಸ್ಕೃತಿ ಕಣ್ಣಿಗೆ ಹೊಡೆಯುತ್ತದೆ. ತಲ್ಕತಾರಾ ಸ್ಟೇಡಿಯಂನಲ್ಲಿ ಕಾರುಗಳು ಕಡಿಮೆ ಮತ್ತು ಇರುವ ಸಾಮಾನ್ಯ ಕಾರುಗಳೇ.

ಶೈಲಿ ಮತ್ತು ಹೂರಣ

ಶೈಲಿ ಮಾತ್ರವಲ್ಲ, ಉತ್ಸವಗಳ ಹೂರಣದಲ್ಲಿ ಸಹ ಕಣ್ಣಿಗೆ ಹೊಡೆಯುವ ವ್ಯತ್ಯಾಸಗಳಿವೆ. ಬಿಜೆಪಿಯ ಹೇಳಿಕೆಗಳು ಕರ್ಕಶ, ಆಕ್ರಾಮಕ. ಸೋನಿಯಾ ಗಾಂಧಿಯ ಮೇಲೆ ವೈಯಕ್ತಿಕ ಟೀಕೆಗಳು, ಎರಡು ವಿದೇಶಿ ಗಣ್ಯರ (ಪಾಕಿಸ್ತಾನದ ಅಧ್ಯಕ್ಷ, ಚೀನಿ ಪ್ರಧಾನಿ)ಭೇಟಿಯ ಕೆಲವೇ ದಿನಗಳ ಮುಂಚೆ ಮನ್‌ಮೋಹನ್ ಸಿಂಗ್‌ರನ್ನು ಬಹುಶಃ ಯಾವುದೇ ಆಧಾರ ಇಲ್ಲದೆ "ಅತ್ಯಂತ ದುರ್ಬಲ ಪ್ರಧಾನಿ" ಎಂದು ಕರೆಯುವುದು - ಇವು ಬಿಜೆಪಿಯ ಶೈಲಿ ಮತ್ತು ಹೂರಣ. ಎನ್‌ಡಿಎ ಆಳ್ವಿಕೆ ಕಾಲದಲ್ಲಿ ವಾಜಪೇಯಿಯ ಬಗ್ಗೆ ಯಾವುದೇ ಟೀಕೆಯನ್ನು ಅದು ಪ್ರಧಾನಿ ಪಟ್ಟಕ್ಕೆ ಅಗೌರವ ಎನ್ನುವಂತೆ ಹೇಳುತ್ತಿತ್ತು.

ಬದಲಾಗಿ ಹರ್‌ಕಿಶನ್‌ಸಿಂಗ್ ಸುರ್‌ಜಿತ್‌ರ ಭಾಷಣ (ಪ್ರಕಾಶ್ ಕಾರಟ್ ಓದಿದ್ದು) ಪ್ರಸ್ತುತ ರಾಜಕೀಯ ಸನ್ನಿವೇಶದ ಪ್ರಾಮಾಣಿಕ, ಒಳನೋಟಗಳಿಂದ ಕೂಡಿದ ಬುದ್ಧಿವಂತ ವಿಶ್ಲೇಷಣೆಯಾಗಿತ್ತು. ಬಿಜೆಪಿಯ ಉತ್ಸವದ ಭಾಷಣಗಳು ಚರ್ವಿತ - ಚರ್ವಣ, ತಾತ್ಕಾಲಿಕ ಅವಕಾಶ ಬಾಚಿಕೊಳ್ಳುವ, ಸಂದರ್ಭ-ಸಾಧಕಗಳಂತೆ ಕಂಡವು. ಸಿಪಿಐ(ಎಂ) ನಿಲುವುಗಳಲ್ಲಿ ಸಂಕಲ್ಪನೆಯ ಸ್ಪಷ್ಟತೆ ಕಂಡುಬಂದಿತ್ತು. ಮುಖ್ಯವಾಗಿ ಮೂರನೇ ರಂಗದ ಬಗ್ಗೆ ನಿಲುವಿನಲ್ಲಿ ಇದು ಕಂಡುಬಂತು.

ಎರಡು ಉತ್ಸವಗಳು ಮಾಧ್ಯಮಗಳಿಂದ ಬೇರೆ ಬೇರೆ ರೀತಿಯ ಸ್ಪಂದನ ದೊರಕಿಸಿಕೊಂಡಿವೆ. ಬಿಜೆಪಿ ಮಾಧ್ಯಮಗಳ ಮೆಚ್ಚಿಗೆ, ಸಮ್ಮತಿ ಗಳಿಸಿದೆ. ಸಿಪಿಐ(ಎಂ)ಗೆ ಮಾಧ್ಯಮಗಳು ಲೆಕ್ಕರು ಕೊಡುತ್ತಿವೆ. ಒಟ್ಟಾರೆಯಾಗಿ ಎರಡು ಪಕ್ಷಗಳು, ಎರಡು ಉತ್ಸವಗಳು, ಮತ್ತು ಎರಡು ರಾಜಕೀಯ ಸಂಸ್ಕೃತಿಗಳು.

ಏಪ್ರಿಲ್ 11 ರಂದು ರಾಮಲೀಲಾ ಮೈದಾನದಲ್ಲಿ ಬೃಹತ್ ರ್‍ಯಾಲಿಗೆ ಆಗಮಿಸಿದ ಸಾವಿರಾರು ರೈತರ-ಕೂಲಿಕಾರ-ಮಹಿಳೆ ಹಾಗೂ ಕಾರ್ಮಿಕ ವರ್ಗ



ವರ್ಗ ಸಂಘರ್ಷದ ಮಹಾಮಥನವೀ ಮಹಾ

ಮೊತ್ತಮೊದಲ ಬಾರಿಗೆ ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ಜರುಗಿದ ಸಿಪಿಐ(ಎಂ) ಪಕ್ಷದ 18ನೇ ಮಹಾಧಿವೇಶನ ಹಲವು ವಿಷಯಗಳಲ್ಲಿಯೂ ವೈಶಿಷ್ಟಪೂರ್ಣ, ವೈವಿಧ್ಯಮಯ. ದೇಶದ ಎಲ್ಲಾ ರಾಜ್ಯಗಳಲ್ಲಿ ಸಾಗುತ್ತಿರುವ ಕಾರ್ಮಿಕವರ್ಗದ, ಜನತೆಯ ಪ್ರಜಾಸತ್ತಾತ್ಮಕ ಚಳವಳಿಗಳ ನಡುವಿನಿಂದ ಮೂಡಿಬಂದ ಪ್ರತಿನಿಧಿಗಳ ತೊರೆಗಳು ಸೇರಿ ಇಲ್ಲಿ ಮಹಾ ಸಮುದ್ರವಾಯಿತು. ಕಳೆದ ಮೂರು ವರ್ಷಗಳ ಅವಧಿಯ ವಿದ್ಯಮಾನಗಳ ಬಗ್ಗೆ ನಡೆದ ವಿಶ್ಲೇಷಣೆ-ವಿಮರ್ಶೆ-ಸ್ವವಿಮರ್ಶೆಯ ಮಹಾಮಥನವೇ ನಡೆಯಿತು. ಮುಂದಿನ ಅವಧಿಗೆ ಕ್ರಾಂತಿಕಾರಿ ಕರ್ತವ್ಯಗಳನ್ನು ಗುರುತಿಸಿತು.

ಮಹಾಧಿವೇಶನದ ಒಟ್ಟು ಕಲಾಪಗಳ ಒಳಹೊರಗುಗಳ ಸಂಕ್ಷಿಪ್ತ ವರದಿಗಳು ಇಲ್ಲಿವೆ. ಮಹಾಧಿವೇಶನದಲ್ಲಿ ಪ್ರತಿನಿಧಿಗಳಾಗಿದ್ದ ಎಸ್.ವೈ.ಗುರುಶಾಂತ್, ಕೆ.ಎನ್.ಉಮೇಶ್, ಬಾಲಕೃಷ್ಣ ಶೆಟ್ಟಿಯವರಿಂದ



ಸಂಭ್ರಮದ ಆರಂಭ

ಭುವಿಯಿಂದ ಬಾನಂಗಳದತ್ತ ಮುಖಮಾಡಿ ಮೆಲ್ಲಮೆಲ್ಲನೆ ಮೇಲೇರಿ ಅರುಣ ಪತಾಕೆ ಅರಳಿನಿಂತ ಕ್ಷಣಗಳೇ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಹದಿನೆಂಟನೆಯ ಮಹಾಧಿವೇಶನದ ಕಲಾಪಗಳಿಗೆ ವಿದ್ಯುಕ್ತವಾಗಿ ಚಾಲನೆ ನೀಡಿತು. ಧ್ವಜಾರೋಹಣ ಮಾಡಿದವರು ಹಿರಿಯ ಸಂಗಾತಿ ಕಾಮ್ರೇಡ್ ಸಮರ್ ಮುಖರ್ಜಿಯವರು 'ಕೆಂಬಾವುಟವೆಂದರೆ ಕ್ರಾಂತಿಕಾರಿಗಳ ಪ್ರಾಣ. ಸಮಾಜ ಬದಲಾವಣೆಯ, ಶೋಷಣೆಯ ವಿರುದ್ಧ ರಾಜಿ ಇಲ್ಲದ ಸಮರ ಸಾರಿ ಮುನ್ನುಗ್ಗುವ ಕಮ್ಯುನಿಸ್ಟ ಹೋರಾಟದ ತ್ರಾಣ. ಇದು ಬಣ್ಣದ ಬಟ್ಟೆಯಲ್ಲ. ಜೀವದುಸಿರಿನಂತೆ. ಅಂತೆಯೇ ಕೆಂಬಾವುಟ ಪಟಪಟನೆ ಹಾರುತ್ತಿದ್ದಂತೆ ನೆರೆದ ಎಲ್ಲರಲ್ಲೂ ರೋಮಾಂಚನ, ತ್ಯಾಗ ಬಲಿದಾನಗಳ ವರ್ಗ ಸಮರದಲ್ಲಿ ಹುತಾತ್ಮರಾದ ಸಂಗಾತಿಗಳ, ಆ ಪರಂಪರೆಯ ಒತ್ತರಿಸಿದ ನೆನಪುಗಳು. ಕೆಂಬಾವುಟ ಎತ್ತಿ ಹಿಡಿದು, ಬೆವರು ನೆತ್ತರು ಸುರಿಸಿಯಾದರೂ ಇನ್ನೂ ಎತ್ತರಕ್ಕೆ ಹಾರಿಸುವ ಬದ್ಧತೆಯ ಭಾವಾವೇಶ ಸಿಡಿದದ್ದು ಘೋಷಣೆಗಳಾಗಿ. ಇದಕ್ಕೆ ಲಯ ಜೋಡಿಸಿ ಹಾಡಿದವರು ದೆಹಲಿಯ ಸುಪ್ರಸಿದ್ಧ 'ಪರಚಂ' ತಂಡ. 'ಲಾಲ್ ಝುಂಡಾ ಲೇಕರ್ ಕಾಮ್ರೇಡ್.... ಆಗೇ ಬಡ್ತೇ ಜಾಯೆಂಗೇ....". ಬಳಿಕ ಎಲ್ಲರ ಹೆಜ್ಜೆ ಹುತಾತ್ಮರ ಸ್ತಂಭದತ್ತ. ಮೊದಲು ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಸುರ್ಜಿತ್ ನಂತರ ಕಾಂ. ಜ್ಯೋತಿಬಸು ಅನುಸರಿಸಿದ ಪೊಲಿಟ್‌ಬ್ಯೂರೋ ಸದಸ್ಯರು. ಕೇಂದ್ರ ಸಮಿತಿ ಸದಸ್ಯರು... ವಿದೇಶದ ಸೌಹಾರ್ದ ಪ್ರತಿನಿಧಿಗಳು ಹೀಗೆ.... ಹುತಾತ್ಮ ಸ್ಮಾರಕವೂ ಅತ್ಯಂತ ಅರ್ಥಪೂರ್ಣ. ಬಂಧನದ, ಶೋಷಣೆಯ ಸರಪಳಿ ಕಿತ್ತೊಗೆದು, ಬಿಡುಗಡೆಯ ಬಿಳಿ ಹಕ್ಕಿಗಳ ಹಾರುವ, ಈ ಸಂಘರ್ಷದಲ್ಲಿ ತ್ಯಾಗ, ಬಲಿದಾನಗಳ ಸಂಕೇತಿಸುವ ಸಮರಬದ್ಧತೆಯ ಮುಷ್ಟಿಗಳುಳ್ಳ ಪ್ರತಿಮೆಗಳು.

ಮಹಾಧಿವೇಶನದ ಮಹತ್ವ

ಕಾಂಗ್ರೆಸ್, ಬಿಜೆಪಿಯಂತಹ ಬಲಪಂಥೀಯ ಪಕ್ಷಗಳಿಗೆ ಸಮ್ಮೇಳನ, ಅಧಿವೇಶನಗಳೆಂದರೆ ಆಡಂಬರದ, ವೈಭವೀಕರಣದ ಪ್ರದರ್ಶನ. ಆದರೆ ಸಿಪಿಐ(ಎಂ)ನದು ಹಾಗಲ್ಲ. ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಧಿಸುವ ಹಾದಿಯಲ್ಲಿ ಪ್ರಸಕ್ತ ಪರಿಸ್ಥಿತಿಯಲ್ಲಿ ಪಕ್ಷ ನಡೆಸುವ ವರ್ಗ ಹೋರಾಟದ ಗೊತ್ತು ಗುರಿಗಳ ಅವಲೋಕನ, ವಿಮರ್ಶೆ, ಸ್ವವಿಮರ್ಶೆಗಳ ರಾಜಕೀಯ, ಸಂಘಟನಾ ಮಹಾ ಮಥನ. 2002 ರಲ್ಲಿ ಹೈದರಾಬಾದಿನಲ್ಲಿ ಜರುಗಿದ 17ನೇ ಮಹಾಧಿವೇಶನದಲ್ಲಿ ಕೈಗೊಳ್ಳಲಾದ ರಾಜಕೀಯ, ಸಂಘಟನಾತ್ಮಕ ನಿರ್ದೇಶನಗಳ ಜಾರಿ-ವಿಮರ್ಶೆ. ಅಂದಿನಿಂದ ಇಂದಿನವರೆಗಿನ ರಾಜಕೀಯ ವಿದ್ಯಮಾನಗಳ ಅಂದಾಜು ಹಾಗೂ ಮುಂದಿನ ಮಹಾಧಿವೇಶನದವರೆಗಿನ (ಮೂರು ವರ್ಷಗಳು) ಗೊತ್ತುಗುರಿಗಳ ನಿಗದಿ. ಹಾಗೂ ಹೊಸ ಕೇಂದ್ರ

ಆಂತರಿಕ ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಕೇಂದ್ರವಾದದ ಅತ್ಯುನ್ನತ ಮಾದರಿ

ಈ ಕಲಾಪಗಳು

"ಉತ್ತಮ ಬದುಕಿನ ಆಶಯವೇ ಪ್ರಧಾನ ಕೇಂದ್ರವಾಗಿರುವ ರಾಜಕಾರಣವು ನಮ್ಮ ದೇಶದ ರಾಜಕಾರಣದಲ್ಲಿ ಹೊಸಬಗೆಯ ಅಧ್ಯಾಯವಾಗಿದೆ. ಇದು ಧರ್ಮನಿರಪೇಕ್ಷಿತ, ಪ್ರಜಾಸತ್ತಾತ್ಮಕ ಭಾರತಕ್ಕೆ ಹಾದಿಯನ್ನು ತೆರೆಯುತ್ತದೆ. ಇದು ಸಾಮಾಜಿಕ ದಮನ, ಮತ್ತು ವರ್ಗ ಶೋಷಣೆಯಿಂದ ಮುಕ್ತವಾಗಿರುತ್ತದೆ". ಇದು ಮಹಾಧಿವೇಶನವನ್ನು ಉದ್ಘಟಿಸಿದ ಹಿರಿಯ ನಾಯಕ ಕಾಂ. ಸುರ್ಜಿತ್‌ರ ಮಾತುಗಳು ಎಲ್ಲಾ ಕಲಾಪಗಳಲ್ಲಿಯೂ ಧ್ವನಿಸಿದವು. ಈ ಆಶಯದ ಸಾಧನೆಯಲ್ಲಿ ಭಾರತದಲ್ಲಿ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಯಶಸ್ವಿಯಾಗಿ ನೆರವೇರಿಸುವುದು ನಮ್ಮ ಗುರಿ.

ಮಹಾಧಿವೇಶನದ ಪ್ರತಿಯೊಂದು ಕಲಾಪಗಳಲ್ಲಿಯೂ ಅತ್ಯಂತ ಶಿಸ್ತು, ಅಚ್ಚುಕಟ್ಟುತನ, ಆಂತರಿಕ ಪ್ರಜಾಪ್ರಭುತ್ವವನ್ನು - ಅದರ ಸ್ಫೂರ್ತಿ-ಸತ್ವದ ಅಳವಡಿಕೆ, ಅದನ್ನು ಜತನದಿಂದ ಪಾಲಿಸುವ ಎಚ್ಚರ. ಏಪ್ರಿಲ್ 6ರಂದು ಬೆಳಿಗ್ಗೆ ಮಹಾಧಿವೇಶನ ಆರಂಭವಾದ ನಂತರ ಮಹಾಧಿವೇಶನದ ಕಲಾಪ ನಡೆಸಿಕೊಡಲು

1. ಕಾಂ. ಜ್ಯೋತಿಬಸು (ಅಧ್ಯಕ್ಷರು), 2. ಕಾಂ. ಆರ್.ಉಮಾನಾಥ್, 3. ಕಾಂ.ಬಿನೋಯ ಕೊನಾರ್(ಪಂಜಾಬ್) 4. ಕಾಂ. ಪಲೋಳಿ ಮಹಮ್ಮದ್ ಕುಟ್ಟಿ(ಕೇರಳ), 5. ಕಾಂ.ರಮಾದೇವಿ (ಆಂಧ್ರ), 6. ಕಾಂ. ನಿರಂಜನದೇವಬರ್ಮ (ತ್ರಿಪುರಾ), 7. ಕಾಂ. ಹರಿರಾಮ ಚೌಹಾಣ್(ರಾಜಸ್ಥಾನ್). ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಚುನಾಯಿಲಾಯಿತು.

ಬಳಿಕ ನಿರ್ಣಯ ಸಮಿತಿ, ಇದರ ಸಂಚಾಲಕರಾಗಿ ಕಾಂ. ಎಂ.ಕೆ.ಪಂಧೆ, ಇತರೆ ಸದಸ್ಯರಾಗಿ, 2. ಕಾಂ. ಸೂರ್ಯಕಾಂತ ಮಿಶ್ರ, 3. ಕಾಂ. ಸುಭಾಷಿಣಿ ಅಲಿ, 4. ಕಾಂ. ಎ.ಕೆ. ಪದ್ಮನಾಭನ್,

ಅರ್ಹತಾ ಪರಿಶೀಲನಾ ಸಮಿತಿ ಸಂಚಾಲಕರಾಗಿ ಕಾಂ. ಕೆ.ವರದರಾಜನ್ ಇತರೆ ಸದಸ್ಯರೆಂದರೆ 2. ಕಾಂ. ತಪಸ್ ಸೇನ್ (ಕೇಂದ್ರ), 3. ಕಾಂ. ಸಿ.ಪಿ.ನಾರಾಯಣನ್(ಕೇರಳ), 4. ಕಾಂ. ವೀರಯ್ಯ (ಆಂಧ್ರ), 5. ಕಾಂ. ಅಮಿತಬ್ ಬಸು(ಪ.ಬಂಗಾಳ).

ಕಲಾಪಗಳ ದಾಖಲಾತಿ ಸಮಿತಿಗೆ ಸಂಚಾಲಕರು ಕಾಂ. ಸುನೀತ್ ಛೋಪ್ರಾ, 2. ಕಾಂ. ಟಿಕೇಂದರ್ (ಹಿಮಾಚಲ), ಕಾಂ. ಅಪೂರ್ವ ಚಟರ್ಜಿ, ಕಾಂ. ಕಿರಣ್ ಮೇಘೆ(ಮಹಾರಾಷ್ಟ್ರ),

ಮಹಾಧಿವೇಶನ ಸಂಚಾಲನ ಸಮಿತಿಯಾಗಿ ಪೊಲಿಟ್ ಬ್ಯೂರೋ, ಈ ಸಮಿತಿಗಳನ್ನು ಮಹಾಧಿವೇಶನವು ಅವಿರೋಧವಾಗಿ ಆಯ್ಕೆ ಮಾಡಿತು. ಒಟ್ಟು ಆರು ದಿನಗಳ ಕಲಾಪಗಳ ವೇಳಾಪಟ್ಟಿಯು ಸಹ ಮಂಡಿಸಲ್ಪಟ್ಟು ಅನುಮೋದಿಸಲಾಯಿತು.

ಕರಡು ವರದಿ

ಮಹಾಧಿವೇಶನಕ್ಕೆ ಮೂರು ತಿಂಗಳು ಮೊದಲು ಚರ್ಚೆಗಾಗಿ ಬಿಡುಗಡೆ ಮಾಡಲಾದ ರಾಜಕೀಯ ನಿರ್ಣಯವಲ್ಲದೇ, ಮಹಾಧಿವೇಶನದಲ್ಲಿ ಮಂಡಿಸಲಾದ ರಾಜಕೀಯ - ಸಂಘಟನಾ ನಿರ್ಣಯ ಅತ್ಯಂತ ವಿಸ್ತೃತವಾದ ವರದಿಯಾಗಿತ್ತು. ಈ ವರದಿಯು ಪ್ರಮುಖವಾಗಿ ಒಟ್ಟು ನಾಲ್ಕು ಭಾಗವಾಗಿದ್ದು - ಭಾಗ-1, ರಾಜಕೀಯವಾಗಿ ಕಳೆದ ಮೂರು ವರುಷಗಳಲ್ಲಿ ಅಂತರರಾಷ್ಟ್ರೀಯ - ರಾಷ್ಟ್ರೀಯವಾದ ರಾಜಕೀಯ ಬೆಳವಣಿಗೆಗಳಲ್ಲಿ ಪಕ್ಷವು ಹೇಗೆ ಮಧ್ಯಪ್ರವೇಶಿಸಿದೆ ಎಂಬುದರ ವಿಮರ್ಶೆ ಇದೆ.

ಭಾಗ 2 ಕೆಲವು ಧೋರಣೆ ವಿಷಯಗಳು ಇದ್ದು ಅದರಲ್ಲಿ ಕಳೆದ ಹಲವಾರು ವರುಷಗಳಲ್ಲಿ ಸೈದ್ಧಾಂತಿಕ ವಿಷಯಗಳು ಪ್ರಾಯೋಗಿಕ ಅನುಭವಗಳಿಂದಾಗಿ ಉದ್ಭವಿಸಿದ ಅನೇಕ ಸಂಗತಿಗಳ ಬಗ್ಗೆ ತಳೆಯಬೇಕಾದ ನಿಲುವು ಒಳಗೊಂಡಿದೆ.


ಭಾಗ-3 ಸಂಘಟನಾತ್ಮಕವಾದ ಪ್ರಶ್ನೆಗಳು, ಬೆಳವಣಿಗೆ-ಸಮಸ್ಯೆ ಸವಾಲುಗಳನ್ನು ವಿಮರ್ಶಾತ್ಮಕ ವರದಿಯಾಗಿದೆ.

ಭಾಗ 4 - ಸಾಮೂಹಿಕ ಸಂಘಟನೆಗಳು ಕುರಿತಾಗಿದ್ದು ವಿವಿಧ ರಂಗದಲ್ಲಿನ ಬೆಳವಣಿಗೆ ಸಮಸ್ಯೆಗಳ ಅವಲೋಕನವಿದೆ.


ಏಪ್ರಿಲ್ 6 ರಂದು ಸಂಜೆ ರಾಜಕೀಯ ನಿರ್ಣಯವನ್ನು ಕಾಂ. ಪ್ರಕಾಶ್ ಕಾರಟ್‌ರವರು ಮಂಡಿಸಿದರು. ಅಲ್ಲದೇ ಈ ವರದಿಗೆ ದೇಶದಾದ್ಯಂತ ಬಂದ ಒಟ್ಟು 2835 (ಹಿಂದಿನ ಮಹಾಧಿವೇಶನದಲ್ಲಿ 4780) ತಿದ್ದುಪಡಿಗಳಲ್ಲಿ ಅಂತಿಮವಾಗಿ ಮಹಾಧಿವೇಶನದ ಚರ್ಚೆಗಾಗಿ ಕ್ರೋಡೀಕರಿಸಿದ 66 ತಿದ್ದುಪಡಿಗಳನ್ನು ಮಂಡಿಸಿದರು. ಕೈಬಿಟ್ಟ ಅಥವಾ ತಿರಸ್ಕರಿಸಿದ್ದು ಯಾಕೆ ಎಂಬ ಬಗ್ಗೆಯೂ ವಿಶ್ಲೇಷಣೆ ನೀಡಿದರು. ರಾಜಕೀಯ ನಿರ್ಣಯ ಮತ್ತು ರಾಜಕೀಯ ಸಂಘಟನಾ ನಿರ್ಣಯದ ಭಾಗ-1 ಒಳಗೊಂಡು ಪ್ರತಿನಿಧಿಗಳ ಚರ್ಚೆ 7ರಂದ ಪ.ಬಂಗಾಳದ ಪ್ರತಿನಿಧಿ ಕಾಂ. ಗೌತಮ್‌ದೇವ್‌ರವರ ಚರ್ಚೆಯೊಂದಿಗೆ ಆರಂಭವಾಯಿತು. ಇದರಲ್ಲಿ ವಿವಿಧ ರಾಜ್ಯಗಳ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ಬಂದ ಚರ್ಚೆಗಳಿಗೆ ಸಂಚಾಲನಾ ಸಮಿತಿ (ಸ್ಟೀಯರಿಂಗ್ ಕಮಿಟಿ) ಪರವಾಗಿ ಕಾಂ. ಪ್ರಕಾಶ್ ಕಾರಟ್ ಉತ್ತರಿಸುವುದ ರೊಂದಿಗೆ ಮಹಾಧಿವೇಶನವು ವರದಿಯನ್ನು ಅನುಮೋದಿಸಿತು.

ಹಾಗೆಯೇ 8 ರಂದು ಸಂಘಟನಾ ವರದಿ ಭಾಗವನ್ನು ಕಾಂ. ಎಸ್.ರಾಮಚಂದ್ರ ಪಿಳ್ಳೆ ಮಂಡಿಸಿದರು.

10 ರಂದು ಕಾರ್ಯನೀತಿ ವಿಷಯಗಳ ವರದಿ ಭಾಗ ಎರಡನ್ನೂ ಕಾಂ. ಸೀತರಾಂ ಯೆಚೂರಿ ಮಂಡಿಸಿದರು. ಭಾಗ 2ರ ಮೇಲೆ ಬಂದ ಚರ್ಚೆಗಳು ಹಾಗೂ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಅಂಶಗಳನ್ನು ಇನ್ನು ಹೆಚ್ಚು ಆಳಗೊಳಿಸುವ ಮತ್ತು ಪರಿಶೀಲಿಸುವ ದೃಷ್ಟಿಯಲ್ಲಿ ಮುಂದಿನ ಕೇಂದ್ರ ಸಮಿತಿಯು ಚರ್ಚಿಸಿ ಅಂತಿಮ ಗೊಳಿಸಲು ನಿರ್ಧರಿಸಲಾಯಿತು.



...ವೇಶನ



ಮಹಾಧಿವೇಶನದ ಒಳನೋಟ

...ತಿ, ಪಿ.ಬಿ. ಈ ನಾಯಕತ್ವದ ಆಯ್ಕೆ ಇವೇ ...ನವಾದ ಕಲಾಪಗಳು. ಇದಕ್ಕೆ ಪೂರ್ವಭಾವಿ ...ತೆಗಳು ಹಲವಾರು ತಿಂಗಳನಿಂದಲೇ ಆರಂಭ. ...ಯವಾಗಿ ಜಿಲ್ಲಾ ಮಟ್ಟದಲ್ಲಿ ಸಮ್ಮೇಳನಗಳು ...ದು, ಅಲ್ಲಿಂದ ರಾಜ್ಯ ಸಮ್ಮೇಳನಗಳೂ ಜರುಗಿ ...ನಾಯಿತರಾದ ಪ್ರತಿನಿಧಿಗಳು ಈ ...ಹಾಧಿವೇಶನದಲ್ಲಿ ಬಂದು ಸೇರಿದ್ದು, ಎಲ್ಲ ...ಜ್ಯಗಳ ಚಳುವಳಿಗಳ ತೊರೆಗಳು ಇಲ್ಲಿ ...ದಾಗ ಮಹಾಧಿವೇಶನ ಒಂದು ವೈವಿಧ್ಯತೆಗಳ ...ಗೊಂಡ ಮಹಾಸಾಗರವಾದಂತೆ. ಹೀಗೆ ...ದವರು ಸುಮಾರು 800 ಪ್ರತಿನಿಧಿಗಳು.

...ನಮ್ಮ ಪ್ರತಿನಿಧಿಗಳಲ್ಲದೇ ಈ ಮಹಾಧಿವೇಶನಕ್ಕೆ ...ದವಿದೇಶಿ ಸೌಹಾರ್ದ ಪಕ್ಷಗಳ ಪ್ರತಿನಿಧಿಗಳು ... ದೇಶಗಳ ಒಟ್ಟು 57 ಪಕ್ಷಗಳನ್ನು, ...ಘಟನೆಗಳನ್ನು ಪ್ರತಿನಿಧಿಸಿದವರು.

...ದ್ಘಾಟನಾ ಅಧಿವೇಶನದಲ್ಲಿ :

2005 ರ ಏಪ್ರಿಲ್ 6 ರಿಂದ 11 ರವರೆಗೆ ...ದೆಹಲಿಯ ಖ್ಯಾತ 'ತಾಲ್‌ಕತೋರ' ...ಡಿಯಂನಲ್ಲಿ ಕಲಾಪಗಳು ನಡೆದಿವೆ. ಈ ...ವೇಶಕ್ಕೆ ಹಿರಿಯನಾಯಕ ಕಾಮ್ರೇಡ್ ...ನಾಯನಾರ್‌ರವರ ಹೆಸರನ್ನು ಇಡಲಾಗಿದೆ. ...ದ್ಘಾಟನಾ ಅಧಿವೇಶನದ ಅಧ್ಯಕ್ಷತೆಯನ್ನು ಕಾಂ. ...ತಿಬಸು ವಹಿಸಿದರು. ಕಾಂ. ಸುರ್ಜಿತ್‌ರವರು ...ಪೂರ್ಣವಾದ ವಿಶ್ಲೇಷಣೆ- ಒಳನೋಟವುಳ್ಳ ...ದ್ಘಾಟನಾ ಬಾಷಣ. ಹಾಗೆಯೇ ಅಧ್ಯಕ್ಷತೆ ...ಸಿದ ಕಾಂ. ಜ್ಯೋತಿಬಸುರವರಿಂದಲೂ. ...ಲ್ಲಕ್ಕೂ ಮೊದಲು ಪಿ.ಬಿ. ಸದಸ್ಯರಾದ ಕಾಂ. ...ಉಮಾನಾಥ್‌ರಿಂದ ಶ್ರದ್ಧಾಂಜಲಿ ನಿರ್ಣಯ ...ಡಿಸಲ್ಪಟ್ಟಿತ್ತು.

...ಮಹಾಧಿವೇಶನ ಉದ್ಘಾಟನಾ ಸಮಾರಂಭಕ್ಕೆ ...ಷ ಆಹ್ವಾನಿತರಾಗಿ ಆಗಮಿಸಿದ ಸಿಪಿಐ ನ ...ನ ಕಾರ್ಯದರ್ಶಿ, ಹಿರಿಯ ಸಂಗಾತಿ ಎ.ಬಿ. ...ನ್‌ರಿಂದ ಶುಭ ಹಾರೈಕೆಯು, ಎಡ ಪಕ್ಷಗಳ ಐಕ್ಯತೆ ಸಾರುವ ಆಶಯದ ಮಾತುಗಳು.



ಈ ಸಮಾರಂಭದ ಅತ್ಯಂತ ಮಹತ್ವದ ಇನ್ನೊಂದು ಘಟನೆಯೆಂದರೆ ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ, ಬ್ರಿಟಿಷರ ವಿರುದ್ಧ ನಡೆದ ಸಂಗ್ರಾಮದಲ್ಲಿ ಜನ ಸೇನಾನಿಗಳಾಗಿ ಶ್ರಮಿಸಿದ ಕೆಲವು ಪ್ರಮುಖ 12 ಸಂಗಾತಿಗಳನ್ನು ಅಭಿನಂದಿಸಿದ್ದು. ಚಿತ್ತಗಾಂಗ್ ಸಶಸ್ತ್ರ ಹೋರಾಟದಲ್ಲಿ ತೊಡಗಿ, ಅಂಡಮಾನ್ ಜೈಲಿನಲ್ಲಿ ಬಂಧಿಯಾಗಿ ಚಿತ್ರಹಿಂಸೆ ಅನುಭವಿಸಿದ್ದ ಕಾಂ. ಸುಬೋಧ್ ರಾಯ್ (89 ವರ್ಷಗಳು) ರವರಿಗೆ ನೇತಾಜಿ ನೇತೃತ್ವದ ಐಎನ್‌ಎ ಯಲ್ಲಿ ಕ್ಯಾಪ್ಟನ್ ಆಗಿದ್ದ ಕಾಂ. ಲಕ್ಷ್ಮಿ ಸೆಹಗಲ್‌ರವರಿಗೆ (90 ವರ್ಷ), ಉತ್ತರ ಮಲಬಾರ್ ರೈತ ಚಳುವಳಿಯ ನೇತಾರ ಕಾಂ. ಎಂ.ಪಿ. ನಾರಾಯಣನ್ ನಂಬಿಯಾರ್(90 ವರ್ಷ, ಕಣ್ಣೂರು), ಪುನಪ್ರವಯಲಾರ್ ರೈತ ಬಂಡಾಯದ ನಾಯಕ 82 ವರ್ಷಗಳ ಕಾಂ. ಕೆ.ವಿ.ತಂಗಪ್ಪನ್, ಸ್ವಾತಂತ್ರ್ಯ ಯೋಧ ಸಂಧ್ಯಾ ಚಟರ್ಜಿ(80), ತ್ರಿಪುರಾದಲ್ಲಿ ಜನಶಿಕ್ಷ ಅಭಿಯಾನದಿಂದ ಮೊದಲ್ಗೊಂಡು ಹಲವಾರು ಧೀಮಂತ ಹೋರಾಟಗಳಲ್ಲಿ ಭೂಗತನಾಗಿ ನಾಯಕತ್ವ ನೀಡಿದ ಕಾಂ. ವಿದ್ಯಾದೇವ್ ಬರ್ಮ(89) ತೆಲಂಗಾಣ ಸಶಸ್ತ್ರ ಹೋರಾಟದ ಕಾಂ. ಕೃಷ್ಣಮೂರ್ತಿ(89), ಕಾಂ. ಪರಸ ಸತ್ಯನಾರಾಯಣ(79), ಕಾಂ. ಸುಂದರಂ (84) ಕಾಂ. ಪಾಂಡ್ಯನ್(77) ಬ್ರಿಟಿಷ್ ವಿರುದ್ಧದ ಹೋರಾಟದಲ್ಲಿ ರಾಷ್ಟ್ರೀಯ - ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಪಾತ್ರನಿರ್ವಹಿಸಿದ ಕಾಂ. ಕಿಟ್ಟಿ ಮೆನನ್(82) ರನ್ನು ಭಾವಪೂರ್ಣವಾಗಿ ಅಭಿನಂದಿಸಲಾಯಿತು. ಅನಾರೋಗ್ಯದ ಕಾರಣದಿಂದ ಕಾಂ. ಪಿ.ಬಿ.ರಂಗ್ನೇಕರ್ ಹಾಜರಿರಲಿಲ್ಲ. ಈ ಹಿರಿಯ ಯೋಧರನ್ನು ಪರಿಚಯಿಸಿದ ಪಿ.ಬಿ. ಸದಸ್ಯರಾದ ಕಾಂ. ಪ್ರಕಾಶ್ ಕಾರಟ್ ರವರು 'ಇದೇ ದೆಹಲಿಯಲ್ಲಿ ಬಿಜೆಪಿಯು ಸ್ಥಾಪನೆಯಾದ 25 ವರ್ಷಗಳ ಆಚರಣೆಯನ್ನು ಪ್ರಸ್ತಾಪಿಸುತ್ತಾ, ದೇಶಪ್ರೇಮದ ಬಗ್ಗೆ ಬೊಗಳೆ ಹೊಡೆಯುವ ಬಿಜೆಪಿಯು ತನ್ನಲ್ಲಿ ಒಬ್ಬರೇ ಒಬ್ಬ ಸ್ವಾತಂತ್ರ್ಯ ಯೋಧನನ್ನು ತೋರಿಸಲಿ ಎಂದು ಸವಾಲು ಹಾಕಿದರು. ಅವರದೆನಿದ್ದರೂ ಬ್ರಿಟಿಷರ ಜೊತೆ ಕೈಜೋಡಿಸಿದ ಇತಿಹಾಸವೇ ಹೊರತು, ಹೋರಾಡಿದ ಇತಿಹಾಸವಿಲ್ಲ ಎಂದರು. ಈ ಸವಾಲಿಗೆ ಸಂಘ ಪರಿವಾರವಾಗಲೀ, ಬಿಜೆಪಿಯಾಗಲೀ ಇನ್ನೂ ಉತ್ತರ ನೀಡಿಲ್ಲ. ಉತ್ತರ ಏನೆಂದು ನೀಡಿಯಾರು!

ಸಂಭ್ರಮದ ಸಿದ್ಧತೆ

ಮೊತ್ತಮೊದಲ ಬಾರಿಗೆ ಮಹಾಧಿವೇಶನವನ್ನು ಯಶಸ್ವಿಯಾಗಿ ಸಂಘಟಿಸಲು ದೆಹಲಿ ಪಕ್ಷದ ಘಟಕ, ಕಾರ್ಯಕರ್ತರು, ಹಿತೈಷಿಗಳು ಅಹೋರತ ಶ್ರಮಿಸಿದ್ದಾರೆ. ಸಾಂಸ್ಕೃತಿಕವಾದ ಕಾರ್ಯಕ್ರಮಗಳ ಮೂಲಕ ಜನರನ್ನು ತಲುಪಲು ಕಾರ್ಯಕ್ರಮ ರೂಪಿಸಿದ್ದಾರೆ. ಕಲಾತ್ಮಕ ಬರಹಗಳು ರಾರಾಜಿಸುತ್ತಿವೆ. ಕೆಂಪುಕೋಟೆಯಿರುವ ದೆಹಲಿ ಮೇ ತಿಂಗಳ ಗುಲ್‌ಮೊಹರ್ ಹೂವಿನ ಕೆಂಪು ಹೂಗಳಿಂದ ಕಂಗೊಳಿಸುತ್ತಿರುವ ನವ ದೆಹಲಿಯೀಗ ಕೆಂಬಾವುಟಗಳ ಹಾರಾಟದಿಂದ ಹೊಸ ಮೆರಗು ಪಡೆದುಕೊಳ್ಳುತ್ತಿದೆ. ○

ಜನಕೇಂದ್ರಿತ ರಾಜಕಾರಣದ ಹೊಸ ಶಕೆಯತ್ತ ಸಾಗಬೇಕು...

- ಕಾಮ್ರೇಡ್ ಹರ್‌ಕಿಶನ್ ಸಿಂಗ್ ಸುರ್ಜಿತ್‌ರ ಕರೆ

ಸ್ವತಂತ್ರ ಚಳುವಳಿಯ ಪ್ರಮುಖ ಅಧ್ಯಾಯವಾದ ಸಾಮೂಹಿಕ ಅಸಹಕಾರ ಚಳುವಳಿಯಲ್ಲಿ ಭಾಗವಹಿಸುವಂತೆ ರಾಷ್ಟ್ರವನ್ನು ಹುರಿದುಂಬಿಸಿದಂತಹ ಗಾಂಧೀಜಿಯವರ ದಂಡಿ ಯಾತ್ರೆ - ಉಪ್ಪಿನ ಸತ್ಯಾಗ್ರಹ ಮುಕ್ತಾಯದ 75ನೇ ವಾರ್ಷಿಕೋತ್ಸವದ ದಿನ ಇಂದು. ಇಂತಹ ದಿನದಂದು ರಾಷ್ಟ್ರದ ರಾಜಧಾನಿ - ಐತಿಹಾಸಿಕ ನಗರವಾದ ದೆಹಲಿಯಲ್ಲಿ ಸಿಪಿಐ(ಎಂ) ನ 18ನೇ ಮಹಾಧಿವೇಶನ ಉದ್ಘಾಟನಾ ಸಮಾರಂಭ ಜರುಗುತ್ತಿದ್ದು, ಅದಕ್ಕೆ ಎಲ್ಲರನ್ನು ಸ್ವಾಗತಿಸುತ್ತೇನೆ.

ಕಮ್ಯುನಿಸ್ಟ್ ಪಕ್ಷವು ತನ್ನ ಆರಂಭದ 1920 ರಿಂದಲೂ ರಾಷ್ಟ್ರದ ವಿಮೋಚನೆಗಾಗಿ ದೃಢವಾಗಿ ನಿರಂತರವಾಗಿ ಹೋರಾಡುತ್ತಾ ಬಂದಿದೆ. 1921 ರ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನಕ್ಕೆ ಪೂರ್ಣ ಸ್ವರಾಜ್ಯದ ಘೋಷಣೆ ಅಂಗೀಕರಿಸಲು ಒತ್ತಾಯಿಸಲಾಗಿತ್ತು. ಅಂದಿನಿಂದ ಬ್ರಿಟಿಷ್ ಆಳರಸರ ತೀವ್ರ ದಬ್ಬಾಳಿಕೆಯ ನಡುವೆ ಕಾರ್ಮಿಕರು ಮತ್ತು ರೈತರನ್ನು ಸ್ವತಂತ್ರ ಹೋರಾಟದಲ್ಲಿ ತೊಡಗಿಸಲು ಹಾಗೂ ವರ್ಗ ಶೋಷಣೆಯಿಂದ ವಿಮುಕ್ತಿಗೊಳಿಸಲು ಸಂಘಟಿಸಿದ್ದಾರೆ.

ಉದ್ಘಾಟನಾ ಭಾಷಣ

ಈ ಹೆಮ್ಮೆಯ ಪರಂಪರೆಯ ವಾರಸುದಾರರಾಗಿ ಇಂದಿನ ಸಿಪಿಐ(ಎಂ) ಇದೆ. ಸಾಮ್ರಾಜ್ಯಶಾಹಿ ವಿರೋಧವು ಈ ಪರಂಪರೆಯ ಭಾಗವಾಗಿದೆ. ಏಕಧ್ರುವ ಯಜಮಾನಿಕೆಯನ್ನು ಅಮೆರಿಕ ಸಾಮ್ರಾಜ್ಯಶಾಹಿಯು ಹೇರಬಯಸುವ ಮತ್ತು ತನ್ನ ಜಾಗತಿಕ ಉದ್ದೇಶಗಳಿಗಾಗಿ ಸ್ವತಂತ್ರ ರಾಷ್ಟ್ರಗಳ ಸಾರ್ವಭೌಮತೆಯ ಮೇಲೆ ದಾಳಿ ನಡೆಸಲು ಹಿಂಜರಿಯದಿರುವ ಇಂದಿನ ಜಗತ್ತಿನಲ್ಲಿ ಈ ಅಸಮಾನ ವ್ಯವಸ್ಥೆ ವಿರುದ್ಧದ ಹೋರಾಟದ ಮುಂಚೂಣಿಯಲ್ಲಿ ಭಾರತದ ಕಮ್ಯುನಿಸ್ಟರು ಇರಲಿದ್ದಾರೆ ಎಂದು ಘೋಷಿಸುವುದು ಅಗತ್ಯ.

ಹೆಮ್ಮೆಯ ಜಾತ್ಯತೀತ ಇರಾಕ್‌ನಲ್ಲಿ ಅಮೆರಿಕಾದ ಕಳೆದ ಎರಡು ವರ್ಷಗಳ ಆಕ್ರಮಣದಿಂದ ಉಂಟಾಗಿರುವ ಅನಾಹುತಗಳನ್ನು ಸದ್ಯದ ಸಂದರ್ಭದಲ್ಲಿ ತೀವ್ರವಾಗಿ ಪರಿಗಣಿಸುತ್ತಿದೆ. ಜಗತ್ತಿನ ಇತರೆ ಪ್ರಗತಿಪರ - ಪ್ರಜಾಪ್ರಭುತ್ವವಾದಿ ಶಕ್ತಿಗಳ ಜೊತೆಗೂಡಿ ಇರಾಕ್‌ನಲ್ಲಿನ ಅಮೆರಿಕಾದ ಸೈನಿಕ ಹಿಡಿತವನ್ನು ಕೊನೆಗಾಣಬೇಕೆಂದು ಹಾಗೂ ಇರಾಕಿ ಜನತೆ ಸಾರ್ವಭೌಮ ರಾಷ್ಟ್ರವಾಗಿ ತಮ್ಮ ಭವಿಷ್ಯವನ್ನು ನಿರ್ಣಯಿಸಲು ಅನುವುಗೊಳಿಸಬೇಕೆಂದು ಒತ್ತಾಯಿಸುತ್ತದೆ.

ಭಾರತವನ್ನು ಅಮೆರಿಕಾದ ಜಾಗತಿಕ ವ್ಯೂಹದೊಳಗೆ ಸೆಳೆದುಕೊಳ್ಳುವ ಯಾವುದೇ ಯೋಜನೆಯನ್ನು ತಡೆಯಲು ಕಮ್ಯುನಿಸ್ಟರು ಮತ್ತು ಪ್ರಗತಿಪರ ಶಕ್ತಿಗಳು ಭಾರತದಲ್ಲಿ ಕಾರ್ಯನಿರ್ವಹಿಸಲಿದೆ. ಉಪಖಂಡದಲ್ಲಿ ನುಸುಳಲು ಭಾರತ-ಪಾಕ್ ನಡುವಿನ ಭಿನ್ನಾಭಿಪ್ರಾಯಗಳನ್ನು ಬಳಸಿಕೊಳ್ಳುವ ಅಮೆರಿಕಾದ ಯತ್ನ ಫಲಿಸದಂತೆ ಮಾಡಲು ನಾವು ಕಾರ್ಯನಿರ್ವಹಿಸಲಿದ್ದೇವೆ. ಭಾರತ-ಇರಾಕ್ ನಡುವೆ ನಡೆದಿರುವ ಮಾತುಕತೆ ಅತಿ ಮುಖ್ಯವಾದವುಗಳು. ಆದರಿಂದಾಗಿ ದಕ್ಷಿಣ ಏಶ್ಯಾದಲ್ಲಿ ಅಭಿವೃದ್ಧಿ ಹಾಗೂ ಶಾಂತಿಗಾಗಿ ಸ್ನೇಹ ಮತ್ತು ಸಹಕಾರದ ಸಂಬಂಧಗಳನ್ನು ಸಾಮ್ರಾಜ್ಯಶಾಹಿಗಳ ಮಧ್ಯ ಪ್ರವೇಶವಿಲ್ಲದೆ ಎರಡು ದೇಶಗಳು ಹೊರಹೊಮ್ಮಿಸುವಂತಾಗಬೇಕು.

ಅಸಮಾನತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯನ್ನು ಪ್ರಜಾಪ್ರಭುತ್ವದಲ್ಲಿ ರಾಷ್ಟ್ರದ ಮತ್ತು ಜನತೆಯ ಅಗತ್ಯಗಳ ಆದ್ಯತೆಗೊಳಿಸಿ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಿದಲ್ಲಿ ಹಾಗೂ ರಾಷ್ಟ್ರದ ಸಾರ್ವಭೌಮತೆಯನ್ನು ದೃಢವಾಗಿ ರಕ್ಷಿಸಿದಲ್ಲಿ ಜಗತ್ತಿನ ಎರಡನೆ ಅತ್ಯಂತ ದೊಡ್ಡ ಜನಸಂಖ್ಯೆ ಹೊಂದಿರುವ ಭಾರತವು 21ನೇ ಶತಮಾನದಲ್ಲಿ ಪ್ರಮುಖ ಪಾತ್ರವಹಿಸಲಿದೆ. ಭಾರತವು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಬೇಕು ಮತ್ತುಚೀನಾ, ರಷ್ಯಾ ಹಾಗೂ ಐರೋಪ್ಯ, ಏಷ್ಯ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ಪ್ರಮುಖ ರಾಷ್ಟ್ರಗಳೊಂದಿಗೆ ನಿಕಟ ಸಂಬಂಧ ಬೆಳೆಸಬೇಕು. ಪರಿಣಾಮವಾಗಿ ನಮ್ಮ ಸದ್ಯದ ದೇಶೀಯ ಕರ್ತವ್ಯಗಳನ್ನು ನಿಭಾಯಿಸಲು ಅನುವಾಗುವ ಬಹುಧ್ರುವಿ ಅಂತರ್ರಾಷ್ಟ್ರೀಯ ಪರಿಸ್ಥಿತಿ ಉಂಟಾಗುವಂತಾಗಬೇಕು.

2004 ರ ಲೋಕಸಭಾ ಚುನಾವಣೆಗಳು ರಾಷ್ಟ್ರದ ರಾಜಕೀಯ ಪರಿಸ್ಥಿತಿಗಳಲ್ಲಿ ಪ್ರಮುಖ ಬದಲಾವಣೆ ತಂದಿವೆ. 90 ರ ದಶಕದ ಅಂತ್ಯದವೇಳೆಗೆ ಭಾರತದ ರಾಜಕಾರಣದಲ್ಲಿ ಆರಂಭವಾದ ಬಲಪಂಥೀಯತೆ ಕಡೆಗಿನ ತಿರುವು ದ್ವೇಷ ಹಾಗೂ ಕೋಮುವಾದದ ರಾಜಕಾರಣಕ್ಕೆ ಜನಮನ್ನಣೆ ಒದಗಿಸುವಂತಹ ಆತಂಕಕಾರಿ ಬೆಳವಣಿಗೆಯಿಂದ ಕೂಡಿತ್ತು. 1998 ಹಿಂದುತ್ವವಾದಿ ಶಕ್ತಿಗಳ ಪ್ರಾಬಲ್ಯದ ಘಟ್ಟವನ್ನು ತಂದಿದೆ ಎಂದು ಬಿಜೆಪಿ ಆರ್‌ಎಸ್‌ಎಸ್ ಅಸಡ್ಡೆಯಿಂದ ಭಾವಿಸಿತ್ತು. ಅವರು ಭಾರತೀಯ ಪ್ರಭುತ್ವವನ್ನು ಹಿಂದು ರಾಷ್ಟ್ರವನ್ನಾಗಿಸಲು ವ್ಯವಸ್ಥಿತವಾಗಿ ಆರಂಭಿಸಿದವು. ಸಾಮಾನ್ಯ ದುಡಿಯುವ ಜನತೆ ಮತ್ತು ಜನಸಮೂಹದ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಪ್ರಜ್ಞೆಯನ್ನು ಪರಿಗಣಿಸಲಿಲ್ಲ. 2004 ರ ಮೇ ನಲ್ಲಿ ಅವರು ಹಿನ್ನಡೆ ಎದುರಿಸಬೇಕಾಯಿತು.

ಈ ಯಶಸ್ಸಿನ ಆಧಾರದಲ್ಲಿ ಮುನ್ನಡೆಯಬೇಕು. ಐದು ದಶಕಗಳ ಬಂಡವಾಳಶಾಹಿ ಭೂಮಾಲಿಕ ಆಳ್ವಿಕೆಯು ಕೇವಲ ಜಾತ್ಯತೀತ ಮೌಲ್ಯಗಳಲ್ಲಿ ಸವಕಳಿ ಉಂಟು ಮಾಡಿದೆ. ಮಾತ್ರವಲ್ಲದೆ ಎಡ ಪಕ್ಷಗಳೇತರ ಪಕ್ಷಗಳಲ್ಲಿ ಸ್ವಲ್ಪ ಪ್ರಮಾಣದ ಮೌಲ್ಯರಹಿತ ಸಂದರ್ಭ ಸಾಧಕತೆಯನ್ನು ತರುತಿದೆ ಎಂಬ ಅಂಶವನ್ನು ನಾವು ಮರೆಯಬಾರದು. ಪ್ರತಿಗಾಮಿ ಶಕ್ತಿಗಳ ವಿರುದ್ಧದ ಹೋರಾಟ ಮತ್ತು ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ನಡೆಸುವ ಪ್ರತ್ಯೇಕತಾ ರಾಜಕೀಯ ಸಿದ್ಧಾಂತವನ್ನು ಯಾವುದೇ ರಾಜಿಯಿಲ್ಲದೆ ಮುಂದುವರೆಸಬೇಕು. ಸಮಯಸಾಧಕತನದಿಂದ ಕೆಲವು ಜಾತ್ಯತೀತ ಪಕ್ಷಗಳು ಬಿಜೆಪಿಯೊಂದಿಗೆ ಸೇರಿದಾಗಲೂ ಸಿಪಿಐ(ಎಂ) ವಿಚಲಿತವಾಗಲಿಲ್ಲ. ನಮ್ಮೆಲ್ಲ ಸಂಪನ್ಮೂಲ ಬಳಸಿ ನಮ್ಮ ಹೋರಾಟ ಮುಂದುವರಿಸಿದ್ದೇವೆ.

ಕಳೆದ 10 ತಿಂಗಳಿನಿಂದ ಯುಪಿಎ ಸರ್ಕಾರ ಇದೆ. ಕಾಂಗ್ರೆಸ್ ಕುರಿತ ನಮ್ಮ ನಿಲುಮೆ ಸ್ಪಷ್ಟವಿದೆ. ನಮ್ಮ ವರ್ಗ ಗುಣಲಕ್ಷಣದಿಂದಾಗಿ ಮತ್ತು ಭಾರತವನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಿಕೊಂಡಿರುವ ದಾರಿಯಿಂದಾಗಿ ಮೂಲಭೂತ ಭಿನ್ನತೆಯಿದೆ. ಈ ಎರಡು

ಪುಟ 11 ಕ್ಕೆ



ಪರ್ಯಾಯ ರೂಪಿಸಲು ಎಡಶಕ್ತಿಗಳ ಬಲದಲ್ಲಿ ಗಣನೀಯ ಹೆಚ್ಚಳ ಅಗತ್ಯ

- ಕಾಂ ಜ್ಯೋತಿಬಸು

ಪಕ್ಷ ಮತ್ತು ಸಾಮೂಹಿಕ ಸಂಘಟನೆ ಗಳನ್ನು ದೇಶಾದಾದ್ಯಂತ ವಿಸ್ತರಿಸುವುದು ಹೇಗೆ ಎಂಬುದರ ಬಗ್ಗೆ ಪಕ್ಷದ 18ನೇ ಮಹಾದಿವೇಶನ ಗಹನವಾಗಿ ಚರ್ಚಿಸಿ ಜಾರಿ ಮಾಡಬೇಕು ಎಂದು ಹಿರಿಯ ಕಮ್ಯುನಿಸ್ಟ್ ಮುತ್ಸದ್ದಿ ಕಾಂ:ಜೋತಿಬಸು ಉದ್ಘಾಟನಾ ಸಮಾರಂಭದಲ್ಲಿ ಕರೆ ನೀಡಿದರು.

64 ವರ್ಷದ ತನ್ನ ಕಮ್ಯುನಿಸ್ಟ್ ಚಳುವಳಿ ಯನ್ನು ನೆನಪಿಸಿಕೊಳ್ಳುತ್ತ ಮಾತಾನಾಡಿದ 91 ವರ್ಷ ಪ್ರಾಯದ ಅನುಭವಿ ಸಂಗಾತಿ ಜೋತಿಬಸು ರವರು ಹೈದರಾಬಾದಿನಲ್ಲಿ ನಡೆದ 17ನೇ ಮಹಾಧಿವೇಶನದ ಕರೆಯಂತೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದೇವೆ. ಇತರ ಪ್ರಜಾಪ್ರಭುತ್ವ ಜಾತ್ಯಾತೀತ ಶಕ್ತಿಗಳು ಇದರಲ್ಲಿ ನೆರವಾಗಿವೆ. ಆದರೆ ಕೋಮುವಾದಿಗಳನ್ನು ಸಂಪೂರ್ಣವಾಗಿ ಮೂಲೋತ್ಪಾಟನೆ ಮಾಡಲು ಸಾಧ್ಯವಾಗಿಲ್ಲ ಎಂಬುದನ್ನು ಕಾಂ.ಬಸು ನೆನಪಿಸುತ್ತಾ ಮುಂದಿನ ದಿನಗಳಲ್ಲಿ ಅವುಗಳನ್ನು ಜನರಿಂದ ದೂರ ಮಾಡಲು ಇನ್ನಷ್ಟು ಕಾರ್ಯಕ್ರಮಗಳನ್ನು ರೂಪಿಸಬೇಕೆಂದೂ ಕರೆ ನೀಡಿದರು.

ಕಳೆದ ಆರು ವರ್ಷಗಳಲ್ಲಿ ಸರಕಾರದ ವಿವಿಧ ಸ್ತರಗಳಲ್ಲಿ ನುಸುಳಿರುವ ಬಿಜೆಪಿ.ಆರ್‌ಎಸ್‌ಎಸ್‌ನ ಅಪಾಯವನ್ನು ಅಳಿಸಿಹಾಕಬೇಕು, ಜಾತ್ಯಾತೀತತೆ ಯನ್ನು ಎತ್ತಿ ಹಿಡಿಯಬೇಕು. ಕೇಂದ್ರದಲ್ಲಿ ಬಿಜೆಪಿಯನ್ನು ಸೋಲಿಸಿದ ಯಶಸ್ಸಿನಿಂದ ತಮ್ಮ ಕರ್ತವ್ಯಗಳನ್ನು ಮರೆಯಬಾರದು ಎಂದು ಎಚ್ಚರಿಸಿದರು.

ತೀವ್ರವಾಗಿ ಅನಾರೋಗ್ಯದಿಂದ ಬಳಲುತ್ತಿದ್ದರೂ ಬಸುರವರು 18ನೇ ಮಹಾಧಿವೇಶನದ ಮಹತ್ವವನ್ನು ಪ್ರತಿನಿಧಿಗಳಿಗೆ ಮನದಟ್ಟು ಮಾಡಿದರು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಮಹಾಧಿವೇಶನ ಎಂದರೆ ಕಳೆದ 3 ವರ್ಷಗಳಲ್ಲಿ ನಡೆಸಿದ ಚಟುವಟಿಕೆಗಳು ಕಳೆದ ಅಧಿವೇಶನದಲ್ಲಿ ಅಂಗೀಕರಿಸಿದ ಗೊತ್ತುವಳಿಗಳಿಗೆ ಅನುಗುಣವಾಗಿದೆಯೇ ಎಂಬುದನ್ನು ಅವಲೋಕಿಸಬೇಕು ಹಾಗೂ ಮುಂದಿನ ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು.

ಸಿಪಿಐ(ಎಂ) ಜವಾಬ್ದಾರಿ

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಪ್ರಥಮ ಬಾರಿಗೆ ಸಿಪಿಐ(ಎಂ)ಗೆ 44 ಲೋಕ ಸ್ಥಾನಗಳು ಲಭಿಸಿವೆ. ಎಡಪಕ್ಷಗಳಿಗೆ ಒಟ್ಟು 61 ಸ್ಥಾನಗಳು ಲಭಿಸಿವೆ.

ಎಡಶಕ್ತಿಗಳ ಬೆಂಬಲದ ಮೇಲೆ ಯುಪಿಎ ಸರ್ಕಾರ ನಿಂತಿದೆ. ಇದು ಜನರು ನಮಗೆ ನೀಡಿದ ಜವಾಬ್ದಾರಿ. ಇದನ್ನು ಯಶಸ್ವಿಯಾಗಿ ಮುನ್ನಡೆಸಿ ಕೊಂಡು ಹೋಗಬೇಕಾಗಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದೇವೆ. ಇತರ ಪ್ರಜಾಪ್ರಭುತ್ವ ಜಾತ್ಯಾತೀತ ಶಕ್ತಿಗಳು ಇದರಲ್ಲಿ ನೆರವಾಗಿವೆ. ಆದರೆ ಕೋಮುವಾದಿಗಳನ್ನು ಸಂಪೂರ್ಣವಾಗಿ ಮೂಲೋತ್ಪಾಟನೆ ಮಾಡಲು ಸಾಧ್ಯವಾಗಿಲ್ಲ

ಆದರೆ ಯುಪಿಎ ಸರಕಾರದ ನೇತೃತ್ವ ಕಾಂಗ್ರೆಸ್ ಕೈಯಲ್ಲಿದೆ. ತನ್ನ ನೀತಿಗಳ ಬಗ್ಗೆ ಅದು ಪುನರ್ ಚಿಂತನೆ ನಡೆಸಬೇಕಾಗಿದೆ. ಮೊದಲಿನಂತೆಯೇ ಉದಾರೀಕರಣ ನೀತಿ ಮತ್ತು ಖಾಸಗೀಕರಣ ನೀತಿಯನ್ನು ಅದು ಮುಂದುವರಿಸಬಹುದೇ ಎಂದು ಪ್ರಶ್ನಿಸಿದ ಜ್ಯೋತಿಬಸುರವರು, ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ಎಲ್ಲಾ ಜನರ (ಆಮ್ ಆದ್ಮಿ) ಹಿತಕ್ಕಾಗಿ ದುಡಿಯುವ ಭರವಸೆ ಕೊಟ್ಟಿದನ್ನು ನೆನಪಿಸಿದರು. ಉದಾರೀಕರಣ ನೀತಿ ಕೇವಲ ಶೇ. 10 ಜನರಿಗೆ ಮಾತ್ರ ಲಾಭ ನೀಡಿದೆ. ಉಳಿದ ಜನರ ಗತಿಯೇನು? ದೇಶದ ಒಟ್ಟು ಉತ್ಪಾದನೆ ಜಾಸ್ತಿಯಾಗುತ್ತಿದೆ. ಆದರೆ ಸಾಮಾನ್ಯ ಜನರಿಗೆ ಲಭಿಸುತ್ತಿಲ್ಲ. ಈ ನಿಟ್ಟಿನಲ್ಲಿ ಸಾರ್ವಜನಿಕ ಉದ್ದಿಮೆಗಳನ್ನು ಬಲಪಡಿಸುವುದು ಮಾತ್ರವಲ್ಲದೆ ಪ್ರಮುಖ ಕ್ಷೇತ್ರಗಳಲ್ಲಿ ಅದಕ್ಕೆ ಆದ್ಯತೆ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಬಂಗಾಳದ ಮಾದರಿ

ಇಂದಿನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇದ್ದರೂ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ತನ್ನ 28 ವರ್ಷಗಳ ನಿರಂತರ ಆಡಳಿತವನ್ನು ಪರ್ಯಾಯ ದಾರಿಯಲ್ಲಿ ನಡೆಸುತ್ತಿದೆ. ಭೂಸುಧಾರಣೆಯ ಮೂಲಕ ಸಾಮಾನ್ಯ ಜನರಿಗೆ ಭೂಮಿ ನೀಡಲಾಗಿದ್ದು, ಸುಲಭದರದಲ್ಲಿ ಇತರ ಸಲಕರಣೆಗಳನ್ನು ಒದಗಿಸಿದ ಫಲವಾಗಿ ಕೃಷಿ ಉತ್ಪಾದನೆ ಹೆಚ್ಚಳವಾಗಿದೆ. ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಕಡಿಮೆ ಆಗಿದೆ.

ಈ ಅವಧಿಯಲ್ಲಿ 6 ಬಾರಿ ಪಂಚಾಯ್ತಿ ಚುನಾವಣೆಗಳು ನಡೆದಿವೆ. 3 ಹಂತದ ಚುನಾವಣೆಗಳಲ್ಲಿ ಜನರು ನೇರವಾಗಿ ಭಾಗವಹಿಸಲು ಸಾಧ್ಯವಾಗಿದೆ. ಅಧಿಕಾರ ಭೂಮಾಲಕರ ಮತ್ತು ಗ್ರಾಮೀಣ ಶ್ರೀಮಂತರ ಹಿಡಿತದಿಂದ ದೂರವಾಗಿದೆ.

ಭಾರತದ ಬಡಜನರನ್ನು ರಕ್ಷಿಸಿ ಅವರ ಜೀವನ ಮಟ್ಟವನ್ನು ಸುಧಾರಿಸಬೇಕಾದಲ್ಲಿ ದೇಶದಾದ್ಯಂತ ಪಕ್ಷವನ್ನು ಬೆಳೆಸಬೇಕೆಂದೂ ಕಾಮ್ರೇಡ್ ಜ್ಯೋತಿಬಸು ಅಧಿವೇಶನದ ಪ್ರತಿನಿಧಿಗಳಿಗೆ ಕರೆ ನೀಡಿದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಕಾಂ. ಎ.ಬಿ.ಬರ್ದನ್‌ರವರ ಶುಭಾಶಯ

ಸಂಗಾತಿಗಳೇ,

ಸಿಪಿಐ ಪಕ್ಷದ 19ನೇ ಮಹಾಧಿವೇಶವು ಕೇಂದ್ರ ಯುಪಿಎ ಸರ್ಕಾರದ ಕುರಿತ ನಮ್ಮ ಧೋರಣೆಯ ಬಗೆಗೆ ಚರ್ಚಿಸಿದೆ. ಕೇಂದ್ರ ಯುಪಿಎ ಸರ್ಕಾರಕ್ಕೆ ಎಡ ಪಕ್ಷಗಳು ನೀಡಿರುವ ಬೆಂಬಲವು ಅನಿರ್ಧಿಷ್ಟಾವಧಿಯವರೆಗೆ ನೀಡಲದ ಷರತ್ತುರಹಿತ ಬೆಂಬಲವೇನೂ ಅಲ್ಲ.

ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಅದರ ನೈಜ ಸ್ಪೂರ್ತಿಯೊಂದಿಗೆ ಜಾರಿ ಮಾಡುವವರೆಗೆ ಸರ್ಕಾರಕ್ಕೆ ಬೆಂಬಲವನ್ನು ನೀಡುತ್ತಲೇ ಮತ್ತೊಂದೆಡೆ ಸರ್ಕಾರದ ರೈತ-ಕೂಲಿಕಾರ-ಕಾರ್ಮಿಕರ ಹಾಗೂ ವಿದ್ಯಾರ್ಥಿ-ಯುವಜನ-ಮಹಿಳೆಯರ ಮತ್ತು ರಾಷ್ಟ್ರದ ಹಿತಾಸಕ್ತಿಗೆ ವಿರುದ್ಧವಾದ ನೀತಿಗಳಿಂದ ಸರ್ಕಾರವನ್ನು ಹಿಮ್ಮೆಟ್ಟಿಸಲು (ದೂರ ಸರಿಸಲು) ವಿಶಾಲವಾದ - ಸಾಮೂಹಿಕವಾದ ಜನಾಂದೋಲನ ಗಳನ್ನು ಹರಿಯಬಿಡಬೇಕೆಂದು ಸಮ್ಮೇಳನವು ನಿರ್ಣಯಿಸಿದೆ.

ಈ ಸರ್ಕಾರಕ್ಕೆ ನಾವು ಬೆಂಬಲ ನೀಡುವಾಗ ಜನ ಸಮುದಾಯದ ಹಿತಾಸಕ್ತಿ-ರಾಷ್ಟ್ರದ ಹಿತಾಸಕ್ತಿ-ಉದ್ಯೋಗಾವಕಾಶಗಳಲ್ಲಿ ಬೆಳವಣಿಗೆ, ಸಾಮಾಜಿಕ ನ್ಯಾಯದೊಂದಿಗೆ ಅಭಿವೃದ್ಧಿಯಂತಹ ಅಂಶಗಳೇ ನಮ್ಮ ಪರಿಗಣನೆಯಲ್ಲಿವೆ (ಮನಸ್ಸಿನಲ್ಲಿವೆ).

...... ಪ್ರಸಕ್ತ ಸನ್ನಿವೇಶವು ನಮ್ಮ ಮುಂದೆ ಮಹತ್ತರವಾದ ಅವಕಾಶವನ್ನು ತೆರೆದಿಟ್ಟಿದೆ. ಹಾಗೆಯೇ ದೇಶದ ಎಡಶಕ್ತಿಗಳು ಮತ್ತು ಕಮ್ಯುನಿಸ್ಟ್ ಪಕ್ಷಗಳಿಗೆ ಹೊಸ ಸವಾಲುಗಳನ್ನು ಒಡ್ಡಿದೆ. ಸಿಪಿಐ ಪಕ್ಷದ 19ನೇ ಮಹಾಧಿವೇಶನವು ನಾವು ಒಂದು ಎಡ-ಜಾತ್ಯಾತೀತ- ಪ್ರಜಾಸತ್ತಾತ್ಮಕ ಪರ್ಯಾಯವನ್ನು ರೂಪಿಸುವ ನಿಟ್ಟಿನಲ್ಲಿ ಶ್ರಮಿಸಬೇಕೆಂದು ನಿರ್ಣಯಿಸಿದೆ.

.... ಮುಂದಿನ ವರ್ಷ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳಲ್ಲಿ ನಿರ್ಣಾಯಕವಾದ ಚುನಾವಣೆಗಳು ನಡೆಯಲಿವೆ. ಎಡ ಪಕ್ಷಗಳು ಈ ರಾಜ್ಯಗಳಲ್ಲಿ ವಿಜಯ ಸಾಧಿಸಬೇಕಿದೆ. ಇದೇ ಸಮಯಕ್ಕೆ ಅಥವಾ ಇನ್ನೂ ಮುಂಚಿತವಾಗಿಯೇ ತಮಿಳು ನಾಡಿನಲ್ಲಿ ಸಹ ಚುನಾವಣೆ ನಡೆಯಲಿದೆ. ಈ ರಾಜ್ಯದಲ್ಲಿ ನಾವು ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸಬೇಕಿದೆ.

ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಈ ಎಡ ಐಕ್ಯತೆಯ ಮುಂಚೂಣಿಯಲ್ಲಿವೆ. ಪ್ರಸಕ್ತ ಸನ್ನಿವೇಶವು ಎರಡೂ ಕಮ್ಯುನಿಸ್ಟ್ ಪಕ್ಷಗಳ ನಡುವೆ ಇನ್ನಷ್ಟು ಸಾಮಿಪ್ಯದ ಸಹಕಾರವನ್ನು ಒತ್ತಾಯಿಸುತ್ತಿದೆ

ಈ ಎಲ್ಲ ಹಿನ್ನೆಲೆಯಲ್ಲಿ ಎಡ ಐಕ್ಯತೆಯನ್ನು ಮತ್ತಷ್ಟು ಕ್ರೋಢೀಕರಿಸಿ ಸದೃಢಗೊಳಿಸಬೇಕಾದ ಅಗತ್ಯವಿದೆ. ಎಡ ಪಕ್ಷಗಳ ನಡುವೆ ನಾಯಕತ್ವದ ಮಟ್ಟದಲ್ಲಿ ಸಂಸತ್ತಿನ ಮಟ್ಟದಲ್ಲಿ ಹಾಗೂ ಚುನಾವಣೆಯ ಸಂದರ್ಭದಲ್ಲಿ ಮತ್ತಷ್ಟು ಉತ್ತಮ ಸಮನ್ವಯ ಹಾಗೂ ಪರಸ್ಪರ ಸಹಕಾರ - ಹೊಂದಾಣಿಕೆಯ ಅಗತ್ಯವಿದೆ.

ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಈ ಎಡ ಐಕ್ಯತೆಯ ಮುಂಚೂಣಿಯಲ್ಲಿವೆ. ಪ್ರಸಕ್ತ ಸನ್ನಿವೇಶವು ಎರಡೂ ಕಮ್ಯುನಿಸ್ಟ್ ಪಕ್ಷಗಳ ನಡುವೆ ಇನ್ನಷ್ಟು ಸಾಮಿಪ್ಯದ ಸಹಕಾರವನ್ನು ಒತ್ತಾಯಿಸುತ್ತಿದೆ ಮತ್ತು ಮಾರ್ಕ್ಸ್‌ವಾದ ಲೆನಿನ್‌ವಾದದ ವಿಜ್ಞಾನವನ್ನು ಭಾರತದ ನಿರ್ದಿಷ್ಟ ಪರಿಸ್ಥಿತಿಗೆ ಅನ್ವಯಿಸುವುದನ್ನು ಹಾಗೂ ಸೈದ್ಧಾಂತಿಕ ನೆಲೆಯಲ್ಲಿ ಭಾರತದ ಕಮ್ಯುನಿಸ್ಟ್ ಚಳುವಳಿಯ ಐಕ್ಯತೆಯನ್ನು ಬಯಸುತ್ತಿದೆ. ಈ ದಾರಿಯಲ್ಲಿರುವ ಅಡೆತಡೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಸಹ ಎರಡೂ ಪಕ್ಷಗಳ ನಡುವೆ ಚರ್ಚೆಯ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಿದೆ ಮತ್ತು ಅದು ಸಾಧ್ಯವಾಗಬೇಕಿದೆ.



ಕಾಂ. ಬರ್ದನ್, ಕಾಂ. ಜ್ಯೋತಿಬಸು ಮತ್ತು ಕಾಂ. ಸುರ್ಜಿತ್

ಸಿಪಿಐ(ಎಂ) ಪಕ್ಷದ 18ನೇ ಮಹಾಧಿವೇಶನಕ್ಕೆ ನಾನು ಯಶಸ್ಸನ್ನು ಕೋರುತ್ತೇನೆ.

(ಸಾರ ಸಂಗ್ರಹ)

ಅರುಣ ಪತಾಕೆಯಲ್ಲಿ ಮಿನುಗಿದ ನಕ್ಷತ್ರಗಳು, ಈ ತ್ಯಾಗ ಜೀವಿಗಳು



ಮಹಾಧಿವೇಶನದ ಕಲಾಪಗಳು ಆರಂಭದಲ್ಲಿ ಮೊದಲ ನುಡಿ-ನಡೆ ಮೀಸಲಾಗಿರುವುದೇ ಹುತಾತ್ಮ ಸಂಗಾತಿಗಳಿಗೆ. ಅಗಲಿದ ನಾಯಕರಿಗೆ, ಅಂತರ್‌ರಾಷ್ಟ್ರೀಯ ಮಟ್ಟದಿಂದ ರಾಷ್ಟ್ರೀಯ, ರಾಜ್ಯಗಳ ಮೂರ್ತಿಗಳಲ್ಲಿಯೂ ಶ್ರಮಿಕ ವರ್ಗದ ವಿಮೋಚನೆಗಾಗಿ ದುಡಿದು-ಮಡಿದವರಿಗೆ ಶ್ರದ್ಧಾಂಜಲಿಯ ಭಾವತರ್ಪಣ.

ಉಗ್ರಗಾಮಿಗಳ, ವರ್ಗಶತ್ರುಗಳ ಧಾಳಿಗಳಲ್ಲಿ ಹುತಾತ್ಮರಾದ 202 ಸಂಗಾತಿಗಳು ತ್ರಿಪುರಾ ರಾಜ್ಯದವರು. ಪಶ್ಚಿಮ ಬಂಗಾಳದಲ್ಲಿ 171 ಸಂಗಾತಿಗಳು. 26 ಸಂಗಾತಿಗಳು ಕೇರಳದಲ್ಲಿ. ಬಿಹಾರದಲ್ಲಿ ಆರು, ತಮಿಳುನಾಡು ಮೂರು ಸಂಗಾತಿಗಳು, ಮಾತ್ರವಲ್ಲ ಜಮ್ಮು ಕಾಶ್ಮೀರದಲ್ಲಿ, ಉತ್ತರ ಪ್ರದೇಶದಲ್ಲಿ, ಮಧ್ಯ ಪ್ರದೇಶದಲ್ಲಿ... ದೇಶಾದ್ಯಂತ ಜನತೆಯ ಹೋರಾಟದಲ್ಲಿ ಪ್ರಾಣ ಕೊಟ್ಟ ಮಹಾನ್ ತ್ಯಾಗಿಗಳು. ಮಾತ್ರವಲ್ಲ ಎಲ್ಲೆಡೆಗಳಲ್ಲಿಯೂ ಧಾಳಿ, ದಬ್ಬಾಳಿಕೆಗಳನ್ನು ಎದುರಿಸಿದ ಪರಂಪರೆ ವಿಸ್ತೃತವಾಗಿದೆ.

ಹುತಾತ್ಮ ಸಂಗಾತಿಗಳ ಆಶಯ, ಸಾಧನೆ, ಎತ್ತಿಹಿಡಿದ ಕೆಂಬಾವುಟ ಇನ್ನೂ ಮೇಲಕ್ಕೆ ಹಾರಿಸುವ ದೃಢ ಪ್ರತಿಜ್ಞೆಯೊಂದಿಗೆ ಇಡೀ ಮಹಾಧಿವೇಶನದ ಶ್ರದ್ಧಾಂಜಲಿ ಸಲ್ಲಿಕೆ

ಸಿಪಿಐ(ಎಂ)ನ 18ನೇ ಮಹಾಧಿವೇಶನದ ಆದೇಶ



ಪಕ್ಷ ದುರ್ಬಲವಾಗಿರುವ ಹಿಂದಿ ಪ್ರದೇಶದಲ್ಲಿ ಮಹಾಧಿವೇಶನ ಅತ್ಯಂತ ಯಶಸ್ವೀಯಾಗಿದೆ. ಈ ಮಹಾಧಿವೇಶನ ಹಲವು ವೈಶಿಷ್ಟಗಳ ಆಗರ ಎಂದು ಗುರುತಿಸಿದ್ದಾರೆ ಹಿರಿಯ ಸಂಗಾತಿ

ಇಕ್ಕಟ್ಟನ್ನು ಮುರಿದು ಹೊಸ ಪ್ರದೇಶಗಳಿಗೆ ವಿಸ್ತರಿಸಿ

ಹರಕಿಶನ್ ಸಿಂಗ್ ಸುರ್ಜೀತ್

ಹಿಂದೆ ನಾನು ಹೇಳಿದಂತೆ "ಒಂದು ಕಮ್ಯೂನಿಸ್ಟ್ ಪಕ್ಷಕ್ಕೆ ಒಂದು ಮಹಾಧಿವೇಶನ ಪ್ರದರ್ಶನವಲ್ಲ, ನಿರ್ದಿಷ್ಟ ಅವಧಿಗಳಲ್ಲಿ ಪೂರೈಸಬೇಕಾದ ಕಾಟಾಚಾರದ ಕೆಲಸವಲ್ಲ. ಅದು ಇಡೀ ಪಕ್ಷ ಒಂದಿಲ್ಲೊಂದು ರೀತಿಯಲ್ಲಿ ಭಾಗವಹಿಸಲು ಒಂದು ಗಂಭೀರ ಅವಕಾಶ. ಅದು ಹಿಂದಿನ ಮಹಾಧಿವೇಶನದ ನಂತರ ಮಾಡಿದ ಕೆಲಸಗಳನ್ನು, ಗಳಿಸಿದ ಯಶಸ್ಸುಗಳು ಹಾಗೂ ಎದುರಿಸಿದ ವಿಫಲತೆಗಳನ್ನು ವಿಮರ್ಶಿಸುತ್ತದೆ ಮತ್ತು ಮುಂದಿನ ಸುಮಾರು ಮೂರು ವರ್ಷಗಳಿಗೆ ಕಾರ್ಯತಂತ್ರದ ರೂಪುರೇಷೆಗಳನ್ನು ರಾಜಕೀಯ ಮತ್ತು ಸಂಘಟನಾ ಕರ್ತವ್ಯಗಳನ್ನು ರೂಪಿಸುತ್ತದೆ."

ಸಿಪಿಐ(ಎಂ)ನ ಇತ್ತೀಚಿನ ಮಹಾಧಿವೇಶನವೂ ಈ ಸರಣಿಯಲ್ಲಿ 18ನೇಯದ್ದು ಕೂಡಾ. ಈ ಕೆಲಸಗಳನ್ನು ಮೆಚ್ಚತಕ್ಕ ರೀತಿಯಲ್ಲಿ ಈಡೇರಿಸಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಸಿಪಿಐ(ಎಂ) ತನ್ನ ಮಹಾಧಿವೇಶನವನ್ನು ತಾನು ದುರ್ಬಲವಾಗಿರುವ ಹಿಂದೀ ಪ್ರದೇಶವೊಂದರಲ್ಲಿ ನಡೆಸಿರುವುದು ಇದೇ ಮೊದಲು. ಇದು ನಮ್ಮ ಹಲವಾರು ಹಿತೈಷಿಗಳು, ಬೆಂಬಲಿಗರ ಮನದಲ್ಲಿ ಆತಂಕವನ್ನು ಉಂಟುಮಾಡುತ್ತಿತ್ತು. ಪಕ್ಷದ ಮಹಾಧಿವೇಶನವನ್ನು ತೃಪ್ತಿಕರವಾಗಿ ನಡೆಸಲಾದೀತೆ ಎಂಬ ನೈಜ ಆತಂಕ ಅವರಲ್ಲಿತ್ತು. ಅದು ಕೂಡಾ ಈ ಪ್ರದೇಶದ ಕೇಂದ್ರಸ್ಥಳದಲ್ಲಿ, ಪ್ರತಿಯೊಂದರ ಮೇಲೂ ಮಾಧ್ಯಮ ನಿಗಾ ಇಟ್ಟಿರುವ, ಇಡೀ ಜನತೆ ನೋಡುತ್ತಿರುವ ಒಂದು ಸ್ಥಳದಲ್ಲಿ.

ಅಗಾಧ ಪ್ರಚಾರ, ಜನ ಭಾಗಿ

ಹೌದು, ಕೊನೆಗೆ ಎಲ್ಲವೂ ಸುಲಲಿತವಾಗಿ ನಡೆದುಹೋಯಿತಷ್ಟೇ ಅಲ್ಲ, ಪಕ್ಷದ ಕಾರ್ಯಕರ್ತರು, ಬೆಂಬಲಿಗರ ನಡುವೆ ಅಪಾರ ಉತ್ಸಾಹವನ್ನು ಉಂಟುಮಾಡಿತು. ಅವರು ಪಕ್ಷದ ಮಹಾಧಿವೇಶನವನ್ನು ಯಶಸ್ವಿಗೊಳಿಸುವಲ್ಲಿ ನೆರವಾಗಲು ದೊಡ್ಡ ಸಂಖ್ಯೆಯಲ್ಲಿ ಬಂದರು. ಪಕ್ಷದ ಮಹಾಧಿವೇಶನವನ್ನು ದಿಲ್ಲಿಯಲ್ಲಿ ನಡೆಸುವ ನಿರ್ಣಯಕ್ಕೆ ಅಗಾಧ ಪ್ರಚಾರ ದೊರೆಯಿತು. ಅತ್ತ ಮಹಾಧಿವೇಶನದ ಸಿದ್ಧತೆಗಳಿಗೆ ಸಾಕಷ್ಟು ಹಣಕಾಸಿನ ಹಾಗೂ ಕಾರ್ಯಕರ್ತರ ಕೊಡುಗೆಗಳೂ ಬಂದವು. ಇಡೀ ಪ್ರಕ್ರಿಯೆಯಲ್ಲಿ ಕಾರ್ಯಕರ್ತರನ್ನು ಗಮನಾರ್ಹ ರೀತಿಯಲ್ಲಿ ಅಣಿನೆರೆಸಲು, ಒಟ್ಟಾರೆಯಾಗಿ ಜನತೆ ಸಿದ್ಧತೆಗಳಲ್ಲಿ ಭಾಗವಹಿಸುವಂತಾಯಿತು. ಇವೆಲ್ಲಾ ಜನಸಾಮಾನ್ಯರ ನಡುವೆ ಪಕ್ಷದ ಪ್ರತಿಷ್ಠೆ ನಾವು ಬಲಿಷ್ಟವಾಗಿರುವಲ್ಲಿ ಮಾತ್ರವಲ್ಲ, ದುರ್ಬಲವಾಗಿರುವಲ್ಲಿ ಕೂಡಾ ಎಷ್ಟಿದೆ ಎಂಬುದನ್ನು ತೋರಿಸಿತು.

ಪಕ್ಷದ ಮಹಾಧಿವೇಶನದ ವೆಚ್ಚವನ್ನು ಭರಿಸಲು 50 ಲಕ್ಷ ರೂ.ಗಳ ಸಂಗ್ರಹ ಪಕ್ಷದ ಬಗ್ಗೆ ಜನತೆಯ ಪ್ರೀತಿಯ ಸೂಚಕಗಳಲ್ಲಿ ಒಂದಷ್ಟೇ. ಮಹಾಧಿವೇಶನಕ್ಕೆ ಹಣಕಾಸು ಸಂಗ್ರಹಿಸಲು ಒಂದು ವಿಧಾನವಾಗಿ ಸಾಕಷ್ಟು ಸಂಖ್ಯೆಯಲ್ಲಿ ಕಲಾವಿದರು ಮಾರಾಟಕ್ಕಾಗಿ ತಮ್ಮ ಕಲಾಕೃತಿಗಳನ್ನು ಪಕ್ಷಕ್ಕೆ ದಾನವಾಡಿದರು. ಅದೇ ವೇಳೆಗೆ ಇತರ ರಾಜ್ಯಗಳೂ ನೆರವಿಗೆ ಬಂದವು. ಒಂದು ಉದಾಹರಣೆ ಹೇಳುವುದಾದರೆ ಪಂಜಾಬ್ ಇಡೀ ಮಹಾಧಿವೇಶನದ ಅವಧಿಯಾದ್ಯಂತ ಅಕ್ಕಿ ಮತ್ತು ಇತರ ಅಗತ್ಯಗಳನ್ನು ಒದಗಿಸಿತು. ವಿವಿಧ ಸ್ವರೂಪಗಳಲ್ಲಿ ಪಶ್ಚಿಮ ಬಂಗಾಳ ಮತ್ತು ಇತರ ಕೆಲವು ಪ್ರದೇಶಗಳಿಂದ ಅಪಾರ ಪ್ರಮಾಣದಲ್ಲಿ ನೆರವು ಬಂತು.

ಪಕ್ಷದ ಮಹಾಧಿವೇಶನದ ಸಿದ್ಧತೆಯ ಸಮಯದಲ್ಲಿ ಹಲವು ವಿಧಗಳಲ್ಲಿ ನೆರವಾಗಲು ಜನ ಮುಂದೆ ಬಂದರು. ಹಲವು ರಾಜ್ಯಗಳಿಂದ ಬಂದ ನಾಟಕ ತಂಡಗಳು 15 ಸ್ಥಳಗಳಲ್ಲಿ ತಮ್ಮ ಪ್ರದರ್ಶನಗಳನ್ನು ನೀಡಿ ಈ ಘಟನೆಯ ಬಗ್ಗೆ ಅರಿವು ಬೆಳೆಸಿದರು. ಹಿಂದಿ ಮತ್ತು ಇಂಗ್ಲೀಷ್‌ನಲ್ಲಿ ನಡೆದ ವಿಚಾರ ಸಂಕಿರಣಗಳ ಸರಣಿ ರಾಷ್ಟ್ರದ ರಾಜಧಾನಿಯ ಬುದ್ಧಿಜೀವಿಗಳಿಗೆ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಲು ಪ್ರೇರಣೆ ನೀಡಿದವು. ಒಟ್ಟಿನಲ್ಲಿ, ಮಹಾಧಿವೇಶನ ನಡೆಯುವ ಮೊದಲೇ ಅದು ರಾಷ್ಟ್ರದ ರಾಜಧಾನಿಯ ಹಾಗೂ ಇಡೀ ದೇಶದ ಜನಗಳ ಗಮನ ಸೆಳೆಯಿತು.

ಸಿಪಿಐ(ಎಂ)ನ 18ನೇ ಮಹಾಧಿವೇಶನ ಹಿಂದೀ ಭಾಷಿಕ ಪ್ರದೇಶದಲ್ಲಿ ನಡೆದ ಮೊದಲ ಮಹಾಧಿವೇಶನವೆಂಬುದಷ್ಟೇ ಅಲ್ಲ, ಅದರ ಮಹತ್ವ ಭಾರತದ ಸಮಕಾಲೀನ ಇತಿಹಾಸದಲ್ಲಿ ಒಂದು ಅತ್ಯಂತ ನಿರ್ಣಾಯಕ ಘಟ್ಟದಲ್ಲಿ ಈ ಸಮ್ಮೇಳನ ನಡೆದಿದೆ ಎಂಬುದೂ ಕೂಡಾ ಮಹತ್ವದ ಸಂಗತಿಯಾಗಿತ್ತು. ಹಿಂದಿನ ಲೇಖನದಲ್ಲಿ ನಾನು ಹೇಳಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಇಡಿಯಾಗಿ ದೇಶದಲ್ಲಿ ಅವುಗಳು ದುರ್ಬಲತೆ ಮುಂದುವರೆಯುತ್ತಿದ್ದರೂ ಒಂದು ನಿರ್ಣಾಯಕ ಪಾತ್ರ ವಹಿಸುತ್ತಿರುವ ಸಂದರ್ಭದಲ್ಲಿ ಈ ಮಹಾಧಿವೇಶನ ನಡೆದಿದೆ. ಅದೇ ವೇಳೆಗೆ ಇದು **"ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ಹೊರಹಾಕಿದ್ದರೂ, ಅವು ಮತ್ತೆ ಮರಳುವ ಸಾಧ್ಯತೆಗಳಿರುವ, ಎಡಪಕ್ಷಗಳನ್ನು ಬಿಟ್ಟು ಇತರ ಜಾತ್ಯಾತೀತ ಪಕ್ಷಗಳು ಇನ್ನೂ ಕೋಮುವಾದಿ ಬೆದರಿಕೆಯನ್ನು ಪೂರ್ಣವಾಗಿ ಗ್ರಹಿಸಿಲ್ಲದ ಸಮಯದಲ್ಲಿ ನಡೆದಿದೆ.**

ಹೀಗೆ ಇಂದಿನ ನಾಜೂಕಾದ ಸನ್ನಿವೇಶದಲ್ಲಿ 18ನೇ ಮಹಾಧಿವೇಶನ ಆಳುವ ಮೈತ್ರಿಕೂಟ ಜನಗಳ ಹಿತಾಸಕ್ತಿಗಳ ಮೇಲೆ ಕಠಿಣ ರೀತಿಯಲ್ಲಿ ಸವಾರಿ ಮಾಡಲು ಸಾಧ್ಯವಾಗದಂತೆ ಅತ್ತ ಬಿಜೆಪಿಯೂ ಅಸಂತೃಪ್ತಿಯ ಪ್ರಯೋಜನ ಪಡೆಯದಂತೆ ಮಾಡುವ ರೀತಿಯಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಸೂಕ್ತ ಕಾರ್ಯತಂತ್ರಗಳನ್ನು ರೂಪಿಸುವ ಕೆಲಸದಲ್ಲಿ ತೊಡಗಿತು. ಪ್ರಸಕ್ತ ಘಟ್ಟದಲ್ಲಿ ಸಿಪಿಐ(ಎಂ)ನ 18ನೇ ಮಹಾಧಿವೇಶನದ ಮಹತ್ವವನ್ನು ಒತ್ತಿ ಹೇಳಲು ಇದಿಷ್ಟೇ ಸಾಕು. ದೇಶಾದ್ಯಂತ ಪಕ್ಷದ ಕಾರ್ಯಕರ್ತರು ಮತ್ತು ಇತರರು ಗರಿಷ್ಠ ಮಟ್ಟಿಗೆ ತಮ್ಮ ಶಕ್ತಿಗಳನ್ನು ಅಣಿನೆರೆಸಲು ಕಾರಣವೂ ಕೂಡಾ ಇಲ್ಲೇ ಕಾಣುತ್ತದೆ. ಈ ಶಕ್ತಿಯ ಆಧಾರದಲ್ಲಿಯೇ ಪಕ್ಷದ ಮಹಾಧಿವೇಶನ ತನ್ನ ಕರ್ತವ್ಯಗಳನ್ನು ಯಶಸ್ವಿಯಾಗಿ, ಮೆಚ್ಚತಕ್ಕ ರೀತಿಯಲ್ಲಿ ಈಡೇರಿಸಲು ಸಾಧ್ಯವಾಯಿತು.

ಮಹತ್ವದ ಪ್ರಶ್ನೆಗಳು

ನಿರೀಕ್ಷೆಯಂತೆ ಪಕ್ಷದ ಮಹಾಧಿವೇಶನ ಪ್ರಸಕ್ತ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸನ್ನಿವೇಶವನ್ನು ವಿವರವಾಗಿ ಗಮನಿಸಿತು ಹಾಗೂ ಪಕ್ಷದ ರಾಜಕೀಯ ಮಧ್ಯಪ್ರವೇಶಗಳ ಹಾಗೂ ಸಂಘಟನಾ ಸ್ಥಿತಿ-ಗತಿಯ ಪರಾಮರ್ಶೆ ನಡೆಸಿತು. ಕರ್ತವ್ಯವನ್ನು ನಿಭಾಯಿಸುವಲ್ಲಿ ದೇಶಾದ್ಯಂತ ಚುನಾಯಿತರಾಗಿ ಬಂದ ಪ್ರತಿನಿಧಿಗಳು ಬುಡಮಟ್ಟದಲ್ಲಿ ತಮ್ಮ ದೈನಂದಿನ ಜೀವಂತ ಅನುಭವಗಳನ್ನು ತಂದಿದ್ದರು. **ಪ್ರತಿನಿಧಿಗಳು ವೀಕ್ಷಕರ ಮಧ್ಯಪ್ರವೇಶದ ಮಟ್ಟ ಅವರ ಉನ್ನತ ರಾಜಕೀಯ ಪ್ರಜ್ಞೆಯನ್ನು ತೋರಿಸಿತಷ್ಟೇ ಅಲ್ಲ, ದೇಶದ ಸಾಮಾನ್ಯ ಶ್ರಮಜೀವಿ ಜನಸಮೂಹಗಳ ಹಿತಾಸಕ್ತಿಯಿಂದ ಸಮಾಜದ ಪರಿವರ್ತನೆಯ ಧ್ಯೇಯಕ್ಕೆ ಅವರ ಬದ್ಧತೆಯನ್ನು ತೋರಿಸಿತು.** ಅದೇ ವೇಳೆಗೆ ಚರ್ಚೆಗಳು ನಡೆದ ರೀತಿ ಹಾಗೂ ಧಾಟಿ ಪಕ್ಷ ಹೇಗೆ ಪ್ರಜಾಸತ್ತಾತ್ಮಕ ಕೇಂದ್ರವಾದದ ಪ್ರಕಾರ ನಡೆಯುತ್ತಿದೆ ಎಂಬುದನ್ನು ಎತ್ತಿ ತೋರಿತು.

ದೇಶದಲ್ಲಿನ ಪ್ರಸಕ್ತ ಸನ್ನಿವೇಶವನ್ನು ಜಾಗರೂಕತೆಯಿಂದ, ಚಾತುರ್ಯದಿಂದ ನಿಭಾಯಿಸಬೇಕಾದ ಕೆಲಸಕ್ಕೆ ದೇಶಾದ್ಯಂತ ಸಿಪಿಐ(ಎಂ) ಕಾರ್ಯಕರ್ತರು ಎಂತಹ ತುರ್ತು ಮಹತ್ವವನ್ನು ನೀಡಿದ್ದಾರೆ ಎಂಬುದೂ ಚರ್ಚೆಗಳಿಂದ ಕಂಡುಬಂತು. ಪಕ್ಷದ ಮಹಾಧಿವೇಶನದ ಕಲಾಪಗಳಲ್ಲಿ ಈ ತುರ್ತಿನ ಭಾವನೆ ಬಿಂಬಿತವಾಯಿತು. ಕೇಂದ್ರದಲ್ಲಿನ ಪ್ರಸಕ್ತ ಯುಪಿಎ ವ್ಯವಸ್ಥೆಯನ್ನು ಬಿಜೆಪಿಗೆ ಎದುರಾಗಿ ಬೆಂಬಲಿಸುತ್ತಲೇ ಬಿಜೆಪಿ ನೇತೃತ್ವದ ಮತ್ತು ಕಾಂಗ್ರೆಸ್ ನೇತೃತ್ವದ ಸರ್ಕಾರ ಹೋಗಿ ಒಂದು ಮೂರನೇ ಪರ್ಯಾಯಕ್ಕಾಗಿ ಕೆಲಸ ಮಾಡಬೇಕಾದ ತುರ್ತು ಅಗತ್ಯವನ್ನು ಮಹಾಧಿವೇಶನದಲ್ಲಿ ಒತ್ತಿ ಹೇಳಲಾಯಿತು. ಅದೇ ವೇಳೆಗೆ ನಾವು ಮುಂಗಾಣುವ ಮೂರನೇ ಪರ್ಯಾಯ ಸಮರ್ಥವಾಗಿರಲು, ಬದುಕುಳಿಯಲು ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಸ್ವತಂತ್ರ ಶಕ್ತಿಯಲ್ಲಿ ಗಮನಾರ್ಹ ವೃದ್ಧಿಯಾಗಬೇಕಾದ ಅಗತ್ಯವಿದೆಯೆಂಬುದನ್ನು ಚರ್ಚೆಯಲ್ಲಿ ಒತ್ತಿ ಹೇಳಲಾಯಿತು.

ಅಖಿಲಭಾರತ ಆಂದೋಲನಕ್ಕೆ ಕರೆ

ಒಟ್ಟಾರೆಯಾಗಿ ಈ ಭಾವನೆಯೊಂದಿಗೆ ಪಕ್ಷದ ಮಹಾಧಿವೇಶನ ಭೂಮಿ, ಉದ್ಯೋಗ (ಗ್ರಾಮೀಣ ಉದ್ಯೋಗದ ಮೇಲೆ ಒತ್ತಿನೊಂದಿಗೆ)ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೂ ಒಂದು ನಿರಂತರ ಅಖಿಲಭಾರತ ಆಂದೋಲನದ ಪ್ರಮುಖ ಪ್ರಶ್ನೆಗಳಾಗಿ ಗುರುತಿಸಿತು; ಇದು ಪ್ರಸಕ್ತ ಇಕ್ಕಟ್ಟನ್ನು ಬೇಧಿಸಿ ಪಕ್ಷದ ವಿಸ್ತರಣೆಗೆ ದಾರಿ ಮಾಡಿಕೊಡುತ್ತದೆ. ಅಂದರೆ ಇತರ ಪ್ರಶ್ನೆಗಳು ಮಹತ್ವದಲ್ಲ ಎಂದೇನಲ್ಲ, ನಿಜವಾಗಿ ದೇಶದ ವಿವಿಧ ಭಾಗಗಳಲ್ಲಿ ಪಕ್ಷದ ಘಟಕಗಳು ತುರ್ತು ಪ್ರಶ್ನೆಗಳಿಗೆ ಪ್ರಸ್ತುತವಾದ ಇತರ ಹಲವಾರು ಸಾರ್ವತ್ರಿಕ ಹಾಗೂ ಭಾಗಶಃ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತವೆ. ಈ ಎಲ್ಲಾ ಪ್ರಶ್ನೆಗಳ ಮೇಲೆ ಪಕ್ಷದ ಘಟಕಗಳು ತಂತಮ್ಮ ಪ್ರದೇಶಗಳಲ್ಲಿ ಹೋರಾಟಗಳನ್ನು ನಡೆಸುತ್ತ ಬಂದಿವೆ. ಆದರೆ ಅವು ಬಹುಮಟ್ಟಿಗೆ ಅಲ್ಲೊಮ್ಮೆ ಇಲ್ಲೊಮ್ಮೆ ನಡೆಸುವ ಹೋರಾಟಗಳಾಗಿದ್ದವು. ಆದರೆ ಇಂದು ಬೇಕಾಗಿರುವುದು ಒಂದು ಅಖಿಲ ಭಾರತ ಸ್ವರೂಪದ ಸಂಯೋಜಿತ ಚಳುವಳಿ. ಈ ಉದ್ದೇಶಕ್ಕಾಗಿ ಮಹಾಧಿವೇಶನ ಮೇಲೆ ಹೇಳಿದ ಮೂರು ಪ್ರಮುಖ ಪ್ರಶ್ನೆಗಳ ಮೇಲೆ ಇಂತಹ ಒಂದು ಚಳುವಳಿಯ ರೂಪು ರೇಷೆಗಳನ್ನು, ದಿಕ್ಕನ್ನು ರೂಪಿಸಲು ಹೊಸ ಕೇಂದ್ರ ಸಮಿತಿಗೆ ಅಧಿಕಾರ ನೀಡಿದೆ.

ಕೋಮುವಾದ, ಜಾತಿ ಬೇಧಭಾವ ಮತ್ತು ಜಾತಿದಮನ, ಹಲವಾರು ರೀತಿಗಳಲ್ಲಿ ಬುಡಕಟ್ಟು ಜನರ ದಮನ, ಮಹಿಳೆಯರು ಮತ್ತು ಇತರ ದುರ್ಬಲ ವಿಭಾಗಗಳ ಮೇಲೆ ಅತ್ಯಾಚಾರಗಳು, ದೇಶದ ಬಹಳಷ್ಟು ಭಾಗಗಳಲ್ಲಿ ಪಾಳೆಯಗಾರಿ ಹಾಗೂ ಅದರ ಮೊದಲಿನ ವಿಚಾರಗಳ ಹಿಡಿತ ಇತ್ಯಾದಿ ಅನಿಷ್ಟಗಳನ್ನು ಉಪೇಕ್ಷಿಸಿದರೆ ಅದರಿಂದ ನಮಗೇ ಕೇಡು.

ಅದೇ ವೇಳೆಗೆ ಚಾಲ್ತಿಯಲ್ಲಿರುವ ಉದಾರೀಕರಣ, ಜಾಗತೀಕರಣ ನಮ್ಮ ಕೃಷಿಕ ಜನಸಮುದಾಯದ ಸಂಕಟಗಳನ್ನು ಹೆಚ್ಚಿಸಿದೆ, ಗ್ರಾಮಾಂತರದಲ್ಲಿ ಒಂದು ವಾಸ್ತವ ಬಿಕ್ಕಟ್ಟನ್ನು ಉಂಟು ಮಾಡಿದೆ. ಇದಕ್ಕೆ ಕಳೆದ ಐದು ವರ್ಷಗಳಲ್ಲಿ ಆಂಧ್ರಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ನಡೆದ ಸಾವಿರಾರು ರೈತರ ಆತ್ಮಹತ್ಯೆಗಳೇ ಸಾಕ್ಷಿ. ನಮ್ಮ ಬಹುಪಾಲು ಜನ ಗ್ರಾಮೀಣ ಪ್ರದೇಶಗಳಲ್ಲಿ ಇರುವುದರಿಂದ ಈ ಕಾರ್ಷಿಕ ಬಿಕ್ಕಟ್ಟು ನಮ್ಮ ಇಡೀ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಅಷ್ಟೇಕೆ, ಆರಂಭದಿಂದಲೇ ಒಟ್ಟಾರೆ ರಾಷ್ಟ್ರೀಯ ಪುನರುಜ್ಜೀವನದಲ್ಲಿ ಗ್ರಾಮೀಣ ಪುನರುಜ್ಜೀವನದ ಮಹತ್ವದ ಬಗ್ಗೆ ಸಿಪಿಐ(ಎಂ)ಗೆ ಸ್ಪಷ್ಟತೆ ಇದೆ. ಆದ್ದರಿಂದಲೇ ನಾವು ಮುಂಗಾಣುವ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಅಕ್ಷವಾಗಿ ಒಂದು ಕಾರ್ಷಿಕ ಕ್ರಾಂತಿಯ ಅಗತ್ಯವನ್ನು ಒತ್ತಿ ಹೇಳುತ್ತಾ ಬಂದಿದ್ದೇವೆ.

ಇನ್ನಷ್ಟು ಮಹಾನ್ ವಿಜಯಗಳತ್ತ

ಸಿಪಿಐ(ಎಂ)ನ 18ನೇ ಮಹಾಧಿವೇಶನ ಪಕ್ಷದ ಈ ತಿಳುವಳಿಕೆಯನ್ನು ಪುನರುಚ್ಚರಿಸಿದೆಯಷ್ಟೆ. ಆದ್ದರಿಂದಲೇ ಅಖಿಲ-ಭಾರತ ಮಟ್ಟದಲ್ಲಿ ಒಂದು ನಿರಂತರ, ಸಂಯೋಜಿತ ಆಂದೋಲನವನ್ನು ಬೆಸೆಯಲು ಭೂಮಿ, ಉದ್ಯೋಗ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪ್ರಶ್ನೆಗಳ ಮೇಲೆ ಒತ್ತು ನೀಡಿದೆ.

ಇಲ್ಲಿ, ಪಕ್ಷ ದೇಶದ ವಿವಿಧ ಭಾಗಗಳಲ್ಲಿ ರೈತ ಹೋರಾಟಗಳನ್ನು ಸಂಘಟಿಸುವಲ್ಲಿ ಒಂದು ದೊಡ್ಡ ಪಾತ್ರ ವಹಿಸಿದೆ. ಬಂಗಾಳದ ತೆಭಾಗಾ ಹೋರಾಟ, ಬಿಹಾರದಲ್ಲಿ ಬಕಶ್ತ್ ಹೋರಾಟ, ಇಂದಿನ ಕೇರಳದಲ್ಲಿರುವ ಪುನ್ನಪ್ರ ವಯಲಾರ್ ಹೋರಾಟ, ಆಗಿನ ಸಂಯುಕ್ತ ಪ್ರಾಂತ ಮತ್ತು ಸುರ್ಮಾ ಕಣಿವೆ ಇತ್ಯಾದಿಗಳಲ್ಲಿನ ಹೋರಾಟಗಳು, ಮುಂಬೈ ಪ್ರೆಸಿಡೆನ್ಸಿಯಲ್ಲಿನ ವಾರ್ಲಿ ಆದಿವಾಸಿ ಬಂಡಾಯ, ಎಲ್ಲಕ್ಕೂ ಮಿಗಿಲಾಗಿ ತೆಲಂಗಾಣದಲ್ಲಿನ ಉಜ್ವಲ ಸಶಸ್ತ್ರ ರೈತ ಹೋರಾಟ, ಇವೆಲ್ಲಾ ಪಕ್ಷದ ಇತಿಹಾಸದಲ್ಲಿನ ಮಹತ್ವದ ಮೈಲಿಗಲ್ಲುಗಳು ಅಲ್ಲದೆ ಇವೆಲ್ಲಾ ಎರಡನೇ ಮಹಾಯುದ್ಧ ಕೊನೆಗೊಂಡಾಗ ಕಂಡುಬಂದ 'ಮಹಾ ಉತ್ಕ್ರಾಂತಿ'ಯ ಘಟ್ಟದ

ಪುಟ 12 ಕ್ಕೆ



ಮೂರು ವರುಷಗಳಲ್ಲಿನ ಬೆಳವಣಿಗೆಗಳು - ಪಕ್ಷದ ಮಧ್ಯಪ್ರವೇಶ

ಮಹಾಧಿವೇಶನದಲ್ಲಿ ಮಂಡಿಸಿ ಚರ್ಚಿಸಿ, ಅಂಗೀಕರಿಸಿದ ವರದಿ ಏನನ್ನುತ್ತದೆ?

(ರಾಜಕೀಯ, ಸಂಘಟನಾ ವರದಿ ಭಾಗ-1)

18ನೇ ಮಹಾಧಿವೇಶನದಲ್ಲಿ ಮಂಡಿಸಲಾದ ಕರಡು ರಾಜಕೀಯ-ಸಂಘಟನಾತ್ಮಕ ವರದಿಯ ಮೊದಲಭಾಗವು 17ನೇ ಮಹಾಧಿವೇಶನದಲ್ಲಿ ಅಳವಡಿಸಿಕೊಂಡ ರಾಜಕೀಯ ತಾಂತ್ರಿಕ ಧೋರಣೆಯ ಜಾರಿಯ ಕುರಿತಂತೆ ವಿವರವಾದ ವಿಮರ್ಶೆ-ಅವಲೋಕನವನ್ನು ಒಳಗೊಂಡಿದೆ.

"ಬಿಜೆಪಿ ನೇತೃತ್ವದ ಸರ್ಕಾರವನ್ನು ಸೋಲಿಸುವುದೇ ಮುಂದಿನ ದಿನಗಳಲ್ಲಿ ಪ್ರಥಮ ನಿರ್ಣಾಯಕ ಕರ್ತವ್ಯವಾಗಿದೆ. ಮತ್ತು ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯವನ್ನು ರೂಪಿಸಲು ಶ್ರಮಿಸಬೇಕು. ಇದಕ್ಕಾಗಿ ಎಲ್ಲಾ ಜಾತ್ಯತೀತ, ಪ್ರಜಾಸತ್ತಾತ್ಮಕ ಶಕ್ತಿಗಳನ್ನು ವಿಶಾಲವಾಗಿ ಅಣಿನೆರೆಸಬೇಕು"

ಹಾಗೆಯೇ "..... ಈ ಹೋರಾಟವು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆಗೆ ಹಾದಿಯಾಗಬೇಕು. ಸಿಪಿಐ(ಎಂ) ಈ ದಿಶೆಯಲ್ಲಿನ ಹೋರಾಟದ ಮುತುವರ್ಜಿ ವಹಿಸಬೇಕು. ಎಲ್ಲಾ ಎಡಶಕ್ತಿಗಳು ಒಂದಾಗಿ ದೇಶಪ್ರೇಮೀ ಹಾಗೂ ಪ್ರಜಾಸತ್ತಾತ್ಮಕ ಜನ ಸಮುದಾಯಗಳು ಭಾಗ ವಹಿಸುವಂತಾಗಬೇಕು. ಇಂತಹ ಹೋರಾಟದಿಂದ ರೂಪುಗೊಳ್ಳುವ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವು ದೇಶದ ಎದುರು ಹೊಸ ಹಾದಿಯನ್ನು ತೆರೆದಿಡಬೇಕು...."

"ಈ ಗುರಿ ಸಾಧನೆಗಾಗಿ ಪಕ್ಷವು ಕೋಮುವಾದಿ ಶಕ್ತಿಗಳನ್ನು ರಾಜಕೀಯವಾಗಿ ಹಾಗೂ ಸೈದ್ಧಾಂತಿಕವಾಗಿಯೂ ಬಿಜೆಪಿ ಸರ್ಕಾರದ ಉದಾರೀಕರಣ, ಖಾಸಗೀಕರಣ ಹಾಗೂ ಸಾಮ್ರಾಜ್ಯಶಾಹಿ ಪರವಾದ ವಾಜಪೇಯಿ ಸರ್ಕಾರದ ನೀತಿಗಳ ವಿರುದ್ಧದ ಹೋರಾಟಗಳನ್ನು ದ್ವಿಗುಣಗೊಳಿಸಬೇಕು" ಎಂದಿತ್ತು.

ಕಳೆದ ಮೂರು ವರ್ಷಗಳಲ್ಲಿ ಈ ಗುರಿ ಸಾಧಿಸಲಾಗಿದೆಯೇ? ಪಕ್ಷವು ಕೋಮುವಾದಿ ಶಕ್ತಿಗಳ ವಿರುದ್ಧ ಹಾಗೂ ಬಿಜೆಪಿ - ಕೂಟವನ್ನು ಜನರಿಂದ ದೂರಗೊಳಿಸಲು ಸತತವಾಗಿ ಹೋರಾಟ ನಡೆಸುತ್ತಾ ಬಂದಿದೆ. ಗುಜರಾತ್‌ನ ಮೋದಿ ಸರ್ಕಾರದ ಜನಾಂಗೀಯ ಹತ್ಯೆಯಂತಹ ಕೋಮುವಾದಿ ಹತ್ಯಾಕಾಂಡದ ವಿರುದ್ಧ ದೇಶಾದ್ಯಂತ ವ್ಯಾಪಕ ಆಂದೋಲನ ನಡೆಸಿ, ಅದರ ಫ್ಯಾಸಿಸ್ಟ್ ಸ್ವರೂಪ ಮುಖವನ್ನು ಅನಾವರಣ ಮಾಡಿದೆ. ಸಂತ್ರಸ್ತರಿಗಾಗಿ ಸುಮಾರು 66 ಲಕ್ಷ ರೂ.ಗಳ ಹಣ ಸಂಗ್ರಹಿಸಲಾಗಿದೆ. (ಬಂಗಾಳವೇ 47 ಲಕ್ಷ). ಮತ್ತು ಸಾಮೂಹಿಕ ಸಂಘಟನೆಗಳ ವೇದಿಕೆಯ ರಾಷ್ಟ್ರಮಟ್ಟದ ಪ್ರಚಾರಾಂದೋಲನ ವನ್ನು ಪಕ್ಷ ಬೆಂಬಲಿಸಿದೆ (ಜೂನ್ 2003)

ಕಂಚಿ ಶಂಕರಾಚಾರ್ಯರನ್ನು ಬಳಸಿ ಅಯೋಧ್ಯಾ ಬಾಬ್ರಿ ಮಸೀದಿ-ಮಂದಿರ ವಿಷಯದಲ್ಲಿ ನಡೆಸಲಾಗುತ್ತಿದ್ದ ಆಟವನ್ನು ಬಹಿರಂಗಪಡಿಸಲಾಯಿತು. ಅಯೋಧ್ಯಾ ವಿವಾದಕ್ಕೆ ನ್ಯಾಯಾಲಯದ ತೀರ್ಮಾನಕ್ಕಾಗಿ ದೇಶವ್ಯಾಪಿ ಪ್ರಚಾರಾಂದೋಲನ ನಡೆಸಲಾಯಿತು.

ಗಾಂಧಿನಗರದ ಸ್ವಾಮಿ ನಾರಾಯಣ ದೇವಸ್ಥಾನದ ಮೇಲೆ ಭಯೋತ್ಪಾದಕ ಧಾಳಿ ಖಂಡಿಸಿ ಅಕ್ಟೋಬರ್ 2, 2002 ರಂದು ಎಡಪಕ್ಷಗಳ 'ಕೋಮುಸೌಹಾರ್ದತೆ ದಿನ' ಯಶಸ್ವಿಕಾರ್ಯಕ್ರಮ.

ಮಾಯಾವತಿ ಸರ್ಕಾರ, ನಂತರ ಮುಲಾಯಂ ಸಿಂಗ್ ಸರ್ಕಾರ ಬಾಬ್ರಿ ಮಸೀದಿ ಧ್ವಂಸದ ಪ್ರಕರಣದಲ್ಲಿ ತಳೆದ ನಿಲುವನ್ನು ಬಹಿರಂಗ ಪಡಿಸಿ, ಒತ್ತಡ ಹೇರಲಾಯಿತು. ವಿಶೇಷವಾಗಿ ಶಿಕ್ಷಣ ರಂಗದ ಕೋಮುವಾದೀಕರಣದ ವಿರುದ್ಧ ಸತತವಾದ ಹೋರಾಟ, ಜನರೆದುರು ವಿಕೃತಿಗಳನ್ನು ತೆರೆದಿಡಲು ಅನೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಾಗೆಯೇ ಮಧ್ಯಪ್ರದೇಶದ ಕಾಂಗ್ರೆಸ್ ರಾಜ್ಯ ಸರ್ಕಾರ ಗೋ ಹತ್ಯೆಯಂತಹ ವಿಷಯದಲ್ಲಿ ಬಿಜೆಪಿ ಯಂತೆ ವರ್ತಿಸಿದ್ದನ್ನು ಖಂಡಿಸಿ ದೃಢ ನಿಲುವು ತಳೆಯಲಾಗಿದೆ. ರಾಜಸ್ತಾನ, ಮಧ್ಯಪ್ರದೇಶ ಮುಂತಾದೆಡೆ ತ್ರಿಶೂಲ ಹಂಚಿಕೆ ವಿರೋಧಿಸಲಾಗಿದೆ. ಗೋಹತ್ಯೆ ಮಸೂದೆ ಪಾರ್ಲಿಮೆಂಟ್‌ನಲ್ಲಿ ಮಂಡಿಸಲೆತ್ನಿಸಿ ಕೋಮುವಾದಿ ವಿಭಜನೆ ತರಲು ಬಿಜೆಪಿ ಯತ್ನಿಸಿದಾಗ ವಿಫಲಗೊಳಿಸಲಾಗಿದೆ. ಸಾವರ್ಕರ್, ತ್ರಿವರ್ಣ ಧ್ವಜ ದುರ್ಬಳಕೆ ವಿರುದ್ಧ ಪ್ರತಿಭಟಿಸಲಾಗಿದೆ.

ಕೋಮುವಾದಿ ಅಪಾಯಗಳ ವಿರುದ್ಧ ರಾಷ್ಟ್ರವ್ಯಾಪಿ ಪ್ರಚಾರಾಂದೋಲನ, ಜಾಥಾಗಳನ್ನು ಸಂಘಟಿಸಿದ್ದು ವಿಶೇಷ.

ಈ ನಡುವಿನ ಹಲವು ರಾಜ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಪಕ್ಷದ ನಿಲುವು ಜಾರಿಗೊಳಿಸುವ ಚುನಾವಣಾ ತಂತ್ರ ಅನುಸರಿಸಲಾಗಿದೆ. 2004 ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಿಜೆಪಿ ಕೂಟವನ್ನು ಅಧಿಕಾರದಿಂದ ಕೆಳಗೆ ತಳ್ಳುವಂತಹ ಫಲಿತಾಂಶ ದೊರೆಯುವಲ್ಲಿ ಪಕ್ಷವು ಅನುಸರಿಸಿದ ಚುನಾವಣಾ ತಂತ್ರವೇ ಪ್ರಮುಖವಾಗಿದೆ. ಹಾಗೆಯೇ ಸೆಕ್ಯುಲರ್ ಸರ್ಕಾರ ರಚನೆಯಲ್ಲಿಯೂ ಕೂಡ. ಇದರೊಟ್ಟಿಗೆ ವಿನಾಶಕಾರಿ ನೀತಿಗಳ ವಿರುದ್ಧ ಆಂದೋಲನ ಸಂಘಟಿಸಲಾಗಿದೆ.

2002 ರಿಂದ 2004 ರ ನಡುವೆ ತೀವ್ರಗೊಂಡಿದ್ದ ಆರ್ಥಿಕ ಬಿಕ್ಕಟ್ಟು, ವ್ಯಾಪಕ ಬರಗಾಲ ಪರಿಸ್ಥಿತಿ ವಿರುದ್ಧ ಪರಿಹಾರಾತ್ಮಕ-ಕ್ರಮಗಳಿಗಾಗಿ ಹೋರಾಟಗಳನ್ನು ನಡೆಸಲಾಗಿದೆ. ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು (ವಿಎಸ್‌ಎಲ್‌ಎಲ್, ಬಿಪಿಸಿಎಲ್, ಹೆಚ್‌ಪಿಸಿಎಲ್...) ಮಾರುವುದರ ವಿರುದ್ಧ ಹೋರಾಟ ನಡೆದವು. ಏಪ್ರಿಲ್ 16 ರ ಸಾರ್ವಜನಿಕ ವಲಯದ ಮುಷ್ಕರದಲ್ಲಿ ಒಂದೂವರೆ ಕೋಟಿ ಕಾರ್ಮಿಕರು ಭಾಗವಹಿಸಿದರು. ಈ ಅವಧಿಯಲ್ಲಿ ಎರಡು ಸಾರ್ವತ್ರಿಕ ಮಹಾಮುಷ್ಕರ ನಡೆಸಲಾಗಿದೆ. ಮೇ 2003 ರಲ್ಲಿ ಮತ್ತು ಮುಷ್ಕರದ ಹಕ್ಕಿಗಾಗಿ ಫೆಬ್ರವರಿ 24, 2004 ರಲ್ಲಿ ಇನ್ನೊಂದು ಮುಷ್ಕರ. ಭಾರಿ ಯಶಸ್ಸು ಕಂಡಂತಹವುಗಳು. ಶಿಕ್ಷಣದ ವ್ಯಾಪಾರೀಕರಣ ವಿರುದ್ಧ, ಮಹಿಳೆಯರ, ದಲಿತರ ಹಕ್ಕುಗಳ ರಕ್ಷಣೆ ಮುಂತಾದವು ಗುರುತಿಸುವಂತಹ ಇನ್ನಿತರೆ ಹೋರಾಟಗಳು.

ಆರ್ಥಿಕ ನೀತಿ-ಕೋಮುವಾದದ ವಿರುದ್ಧ ಮೂರು ಪ್ರಮುಖ ಪ್ರಚಾರಾಂದೋಲನ..... ಇರಾಕ್ ಯುದ್ಧ ವಿರೋಧಿ - ಪ್ರಬಲ ಪ್ರತಿಭಟನೆ, ಕೇಂದ್ರದ ಸಿಎಂಪಿ ಬಗ್ಗೆ ನಮ್ಮ ನಿಲುವಿನ ಪ್ರಚಾರಾಂದೋಲನ ಪ್ರಮುಖವಾಗಿವೆ.

ಹೀಗೆ ಅನೇಕ ಹೋರಾಟ-ಪ್ರಚಾರಾಂದೋಲನಗಳನ್ನು ವಿಮರ್ಶಿಸಿರುವ ವರದಿಯು, ಒಂದು ಹಂತದಲ್ಲಿ ಜನತೆಯ ಅಪೂರ್ವ ಸಂದನ ಗುರುತಿಸಿದೆ. ನಮ್ಮ ಸಕಾಲಿಕ ಮಧ್ಯ ಪ್ರವೇಶವಿರುವುದನ್ನು ತಿಳಿಸಿದೆ. ಆದರೆ ಸನ್ನಿವೇಶದ ಅಗತ್ಯಕ್ಕೆ ತಕ್ಕಷ್ಟು ಇರಲಿಲ್ಲ. ಈ ಬಗ್ಗೆ ಆಳ ವಿಮರ್ಶೆಯನ್ನು ಆಹ್ವಾನಿಸಿದೆ. ಮಹಾಧಿವೇಶನದಲ್ಲಿ ಮಾತನಾಡಿದ ಪ್ರತಿನಿಧಿಗಳು ಈ ವರದಿಯ ವಿಮರ್ಶೆಯನ್ನು ಒಪ್ಪಿದರು. ಅಲ್ಲದೇ ಈ ಹೋರಾಟಗಳು ರಾಜ್ಯದೊಳಗೆ ಹೊಸ ವಿಭಾಗಗಳತ್ತ ವಿಸ್ತಾರಗೊಳ್ಳಲು ಸಹಾಯಕವಾದುದನ್ನು ಪ್ರಸ್ತಾಪಿಸಿದರು.

ಕಳೆದ ಪಾರ್ಲಿಮೆಂಟ್ ಚುನಾವಣೆ ನಂತರದ ಸನ್ನಿವೇಶವನ್ನು ನಿರ್ದಿಷ್ಟವಾಗಿ ಅಂದಾಜಿಸಿರುವ ವರದಿಯು, ಯುಪಿಎ ಸರ್ಕಾರದ ಬಗೆಗಿನ ನಿಲುವನ್ನು ವಿವರಿಸಿದೆ. ಈ ಸಂದರ್ಭದಲ್ಲಿ ಕನಿಷ್ಟ ಸಾಮಾನ್ಯ ಕಾರ್ಯಕ್ರಮ ಜಾರಿಗೊಳಿಸಲು ಆಗ್ರಹಿಸಿದೆ. ಇದರೊಂದಿಗೆ ಮೂರನೆಯ ಪರ್ಯಾಯದ ಅಗತ್ಯವನ್ನು ಪ್ರತಿಪಾದಿಸಿದ್ದು ಕಾಂಗ್ರೆಸ್ಸೇತರ ಸೆಕ್ಯುಲರ್ ಪಕ್ಷಗಳೊಂದಿಗೆ ನಮ್ಮ ಸಂಬಂಧವಿರಿಸಿಕೊಂಡಿರುವುದು ಮುಂದುವರಿಯುವುದು. ಈ ಕೂಡಲೇ ಮೂರನೇ ಪರ್ಯಾಯದ ಸಾಧ್ಯತೆಗಳು ಸ್ಪಷ್ಟವಾಗಿಲ್ಲವಾದರೂ ಅಂತಹ ಶಕ್ತಿಗಳೊಂದಿಗಿನ ಜಂಟಿ ಕಾರ್ಯಾಚರಣೆ, ಹೋರಾಟ ಅಲ್ಲದೇ ಅಗತ್ಯ ಕಂಡಾಗ ಚುನಾವಣಾ ಪರಸ್ಪರ ತಿಳುವಳಿಕೆಗೂ ಬರಲಾಗುವುದು ಎಂದಿದೆ.

ಇದಕ್ಕಾಗಿ ಎಡ ಐಕ್ಯತೆಯೇ ಅತ್ಯಂತ ಅಗತ್ಯ, ಮಹತ್ವದ್ದಾಗಿರುವುದನ್ನು ಪುನರುಚ್ಚರಿಸಿದೆ. ಕೋಮುವಾದಿಗಳು ಅಧಿಕಾರದಿಂದ ಕೆಳಗಿದ್ದರೂ ಅವುಗಳ ಶಕ್ತಿ, ಹಂಚಿಕೆಗಳು ಇಂದಿಗೂ ಅಪಾಯಕಾರಿಯಾಗಿದ್ದು, ಎಚ್ಚರ ಅಗತ್ಯ.

ಈಗಾಗಲೇ ಈ ಶಕ್ತಿಗಳು ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ, ಸೆಕ್ಯುಲರ್ ಮೌಲ್ಯಗಳಿಗೆ ಮಾಡಿರುವ ಹಾನಿಯನ್ನು ಸರಿಪಡಿಸಲು ಯುಪಿಎ ಸರ್ಕಾರದ ಗಮನ ಕೇಂದ್ರೀಕರಿಸಬೇಕು ಎಂದು ಹೇಳಿದೆ.


- ಎಸ್‌ವೈ ಜಿ

ಹೊಸ ನಾಯಕತ್ವ ಸಮಿತಿ ಆಯ್ಕೆ

ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಪ್ರಕಾಶ್ ಕಾರಾಟ್

ಮಹಾಧಿವೇಶನದ ಇನ್ನೊಂದು ಅತ್ಯಂತ ಪ್ರಮುಖ ಕಲಾಪವೆಂದರೆ ಮುಂದಿನ ಅವಧಿಗೆ ಹೊಸ ನಾಯಕತ್ವವನ್ನು ಆಯ್ಕೆ ಮಾಡುವುದು. ಮಹಾಧಿವೇಶನ ಆರಂಭಗೊಳ್ಳುವುದಕ್ಕಿಂತ ಎರಡೇ ದಿನಗಳ ಮೊದಲು ಹಿರಿಯ ಸಂಗಾತಿ ಕಾಂ. ಸುರ್ಜೀತ್‌ರವರ ಆರೋಗ್ಯ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಹೊಸ ಪ್ರಧಾನ ಕಾರ್ಯದರ್ಶಿಯವರ ಆಯ್ಕೆ ಬಗ್ಗೆ ಅನೇಕ ಊಹಾಪೋಹಗಳನ್ನು ಅದೊಂದೇ ಮುಖ್ಯ ವಿಷಯ ಎಂಬಂತೆ ಬೂರ್ಜ್ವಾ ಮಾಧ್ಯಮಗಳು ತೇಲಿಸಿಬಿಟ್ಟಿದ್ದವು. ಅಧಿವೇಶನ ಜರುಗುತ್ತಿದ್ದಾಗಲೂ ಇದೇ ಜಪ. ಇಷ್ಟೆಲ್ಲಾ ಅಬ್ಬರ ಗಮನ ಬೇರೆಡೆಗೆ ಸೆಳೆಯುವ ಯತ್ನಗಳಿದ್ದರೂ ಇಡೀ ಅಧಿವೇಶನದಲ್ಲಿ ಯಾವ ಪ್ರತಿನಿಧಿಗಳಿಂದಲೂ, ಕಲಾಪಗಳಲ್ಲಿಯೂ ಒಂದೇ ಒಂದು ಮಾತು ಬಂದಿಲ್ಲ. ಯಾರನ್ನು ಕಾಡಲಿಲ್ಲ. ಎಂದಿನಂತೆ 11ರ ಬೆಳಿಗ್ಗೆ ಸಂಚಾಲನಾ ಸಮಿತಿಯ ಪರವಾಗಿ ಕಾಂ. ಪ್ರಕಾಶ್ ಕಾರಟ್‌ರವರು ಮಂಡಿಸಿದ 85 ಸದಸ್ಯರಲ್ಲಿ ಕೇಂದ್ರ ಸಮಿತಿಯ ಸರ್ವಾನುಮತದಿಂದ ಆಯ್ಕೆಯಾಯಿತು. (ಒಂದು ಸ್ಥಾನ ಖಾಲಿ ಕೇರಳಕ್ಕೆ ಇಡಲಾಗಿದೆ). ನೂತನ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಕಾಂ. ಪ್ರಕಾಶ್ ಕಾರಟ್‌ರವರನ್ನು ಸರ್ವಾನುಮತದಿಂದ ಆರಿಸಿತಲ್ಲದೇ, 17 ಸದಸ್ಯರ ಪೊಲಿಟ್ ಬ್ಯೂರೋವನ್ನು ಸಹ ಚುನಾಯಿಸಿತು. ಈ ವಿಷಯವನ್ನು ಅಧಿವೇಶನದ ಮುಂದೆ ಹಿರಿಯ ಸಂಗಾತಿ ಕಾಂ. ಆರ್.ಉಮಾನಾಥ್ ಪ್ರಕಟಿಸುತ್ತಿದ್ದಂತೆ ಪ್ರತಿನಿಧಿಗಳೆಲ್ಲರೂ ಚಪ್ಪಾಳೆ ತಟ್ಟಿ ಸ್ವಾಗತಿಸಿದರಲ್ಲದೇ, ಸಿಪಿಐ(ಎಂ) ಜಿಂದಾಬಾದ್, ಲಾಲ್ ಜಂಡಾ ಜಿಂದಾಬಾದ್, ಕೆಂಪು ವಂದನೆಗಳ ಘೋಷಣೆಗಳು ತಾರಕಕ್ಕೇರಿದವು. ನಂತರ ಮಾತನಾಡಿದ ಕಾಂ. ಪ್ರಕಾಶ್, 'ನಮ್ಮದು ವ್ಯಕ್ತಿಗತ ನಾಯಕತ್ವವಲ್ಲ ಸಾಮೂಹಿಕ ನಾಯಕತ್ವ' ಸೈದ್ಧಾಂತಿಕ - ರಾಜಕೀಯ ಸಂಘಟನಾತ್ಮಕ ಐಕ್ಯತೆಯೊಂದಿಗೆ ದೃಢತೆಯಿಂದ ಕಾರ್ಯ ಎಸಗುವ ನಿರ್ಧಾರ ನಮ್ಮದು' ಎಂದರು. 'ಕಾಂ. ಸುರ್ಜಿತ್, ಕಾಂ. ಜ್ಯೋತಿ ಬಸು ರವರು ಅನಾರೋಗ್ಯದ ಕಾರಣದಿಂದ ತಮ್ಮನ್ನು ಮೊದಲು ಕೇಂದ್ರ ಸಮಿತಿಯಿಂದಲೂ, ಪಿ.ಬಿ. ಯಿಂದ ಬಿಡುಗಡೆ ಮಾಡಿ ಎಂದು ಕೇಳಿದರು. ಆದರೆ ಸಂಗಾತಿಗಳು ಬಿಡಲಿಲ್ಲ. ಹಿಂದೆ ಎರಡು ಅವಧಿ ಮುಗಿದ ಬಳಿಕ ಮುಖ್ಯಮಂತ್ರಿ ಸ್ಥಾನದಿಂದ ಬಿಡುಗಡೆ ಮಾಡಿ ಎಂದು ಜ್ಯೋತಿ ಬಸು ಒತ್ತಾಯಿಸಿದರು. ಅದು ಸದ್ಯಕ್ಕೆ ಅಸಾಧ್ಯವೆಂದಿತು ಪಕ್ಷ. ಇತರೆ ಪಕ್ಷಗಳಲ್ಲಿ ಇಂತಹದ್ದನ್ನು ಕಾಣಲು ಸಾಧ್ಯವೇ? ಸಾಧ್ಯವೇ ಇಲ್ಲ ಎಂದ ಕಾರಟ್, ಈ ಸಂಗಾತಿಗಳು ಕೇವಲ ಸಿಪಿಐ(ಎಂ)ನ ಮಾತ್ರವಲ್ಲ ಭಾರತದ ಕಮ್ಯುನಿಸ್ಟ್ ಆಂದೋಲನದ ಧ್ರುವತಾರೆಗಳು, ಮಾರ್ಗ ಶೋಧಕರು, ಸಿಪಿಐ(ಎಂ) ಸ್ಥಾಪನೆಯಾದಾಗ ರಚಿತವಾದ ಪಿ.ಬಿ.ಯಲ್ಲಿನ ನವರತ್ನಗಳಲ್ಲಿ ಇಬ್ಬರು ಈ ಸಂಗಾತಿಗಳು ಎಂದು ನೆನಪಿಸಿದರು.

ಮಹಾಧಿವೇಶನ ಹಾಕಿಕೊಟ್ಟಿರುವ ನಿರ್ದೇಶನಗಳನ್ನು, ಆಶಯಗಳನ್ನು, ಸೂಚನೆಗಳನ್ನು ಹೊಸ ಕೇಂದ್ರ ಸಮಿತಿ, ಪಿ.ಬಿ. ಸಮರ್ಥವಾಗಿ ಕೈಗೆತ್ತಿಕೊಂಡು ಪಕ್ಷವನ್ನು, ಜನ ಆಂದೋಲನವನ್ನು ವಿಸ್ತಾರಗೊಳಿಸಲು, ಕ್ರಾಂತಿಕಾರಿ ಮುನ್ನಡೆ ಸಾಧಿಸಲು ಶ್ರಮಿಸುತ್ತದೆ ಎಂದಾಗ ಇಡಿ ಸಂಗಾತಿಗಳಲ್ಲಿ ಹೊಸ ಹುರುಪು, ಎಲ್ಲರ ಬಾಯಲ್ಲಿ ಇಂಕ್ವಿಲಾಬ್ ಜಿಂದಾಬಾದ್. ಸಿಪಿಐ(ಂ) ಜಿಂದಾಬಾದ್ ಘೋಷಣೆಗಳು.




ನಮ್ಮದು ಸಾಮೂಹಿಕ ನಾಯಕತ್ವ

ಹೊಸ ಅವಕಾಶಗಳನ್ನು ಉಪಯೋಗಿಸಿ ಸಂಘಟನೆಯ ವ್ಯಾಪಕ ವಿಸ್ತರಣೆಗೆ ಅಧಿವೇಶನ ಕರೆ

ಮಹಾಧಿವೇಶನದ ವರದಿಯಲ್ಲಿ ಅತ್ಯಂತ ಪ್ರಮುಖ ಇನ್ನೊಂದು ಭಾಗ ಸಂಘಟನೆ. ಅದರಲ್ಲಿ ಪ್ರತಿಪಾತಿದವಾದ ವಿಶ್ಲೇಷಣೆಯ ಸಾರ ಇಲ್ಲಿದೆ.

ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಉದ್ಭವಿಸಿರುವ ಹೊಸ ಸನ್ನಿವೇಶದಲ್ಲಿ ಪಕ್ಷದ ಸಂಘಟನೆ ಮತ್ತು ಸಾಮೂಹಿಕ ಸಂಘಟನೆಗಳನ್ನು ದೇಶಾದ್ಯಂತ ವ್ಯಾಪಕವಾಗಿ ವಿಸ್ತರಿಸುವ ನಿಟ್ಟಿನಲ್ಲಿ ದಾಪುಗಾಲು ಹಾಕಬೇಕೆಂದು 18ನೇ ಮಹಾಧಿವೇಶನ ಕರೆ ನೀಡಿದೆ. ಆದ್ಯತೆಯ ರಾಜ್ಯಗಳು, ಜಿಲ್ಲೆಗಳು ಮತ್ತು ಪ್ರದೇಶಗಳನ್ನು ಗುರುತಿಸಿ ಕಾರ್ಯಕರ್ತರಿಗೆ ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸಿಕೊಟ್ಟು, ಎಲ್ಲಾ ಹಂತಗಳಲ್ಲಿ ಪಕ್ಷದ ಸಮಿತಿಗಳನ್ನು ಚುರುಕುಗೊಳಿಸಲು ಅಧಿವೇಶನ ನಿರ್ಧರಿಸಿದೆ.

ಮಹಾಧಿವೇಶನದ ಕರಡು ರಾಜಕೀಯ ಸಂಘಟನೆ ನಿರ್ಣಯದ ಅಂಗವಾದ ಸಂಘಟನಾ ವರದಿಯನ್ನು ಮಂಡಿಸುತ್ತಾ ಪಾಲಿಟ್‌ಬ್ಯೂರೋ ಸದಸ್ಯ ಎಸ್.ರಾಮಚಂದ್ರನ್ ಪಿಳ್ಳೆಯವರು, 17ನೇ ಅಧಿವೇಶನ ನಿಗದಿ ಪಡಿಸಿದ್ದ ತಕ್ಷಣದ ಸಂಘಟನಾ ಕರ್ತವ್ಯಗಳನ್ನು ಹೀಗೆ ಪಟ್ಟಿ ಮಾಡಿದರು. 1. ಪಕ್ಷದ ಕೇಂದ್ರವನ್ನು ಬಲಪಡಿಸುವುದು 2. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ರಂಗಗಳನ್ನು ಕ್ಷಿಪ್ರವಾಗಿ ವಿಸ್ತರಿಸುವುದು.3. ಸೈದ್ಧಾಂತಿಕ ಕೆಲಸವನ್ನು ಬಲಪಡಿಸುವುದು. 4. ಹೊಸ ಸದಸ್ಯರ ಸೇರ್ಪಡೆ, ಸಹಾಯಕ ಗುಂಪುಗಳ ಮತ್ತು ಶಾಖೆಗಳ ಕಾರ್ಯನಿರ್ವಹಣೆ 5. ತಿದ್ದುಪಡಿ ಚಳುವಳಿ



ಎಲ್ಲಾ ಹಂತಗಳಲ್ಲೂ ಈ ತೀರ್ಮಾನಗಳನ್ನು ಜಾರಿಗೊಳಿಸಲು ಮಾಡಲಾದ ಪ್ರಯತ್ನಗಳನ್ನು ಎಸ್‌ಆರ್‌ಪಿ ಯವರು ವಿವರಿಸಿದರು. ಪಕ್ಷದಪ್ರಭಾವ ಕಡಿಮೆಯಿದ್ದ ಹಿಂದಿ ಭಾಷಾ ರಾಜ್ಯಗಳಲ್ಲಿ ಪಕ್ಷದ ಪ್ರಭಾವಬೆಳೆದಿದೆ ಎಂಬುದಕ್ಕೆ 18ನೇ ಅಧಿವೇಶನವು ರಾಷ್ಟ್ರದ ರಾಜಧಾನಿ ದಿಲ್ಲಿಯಲ್ಲಿ ಯಶಸ್ವಿಯಾಗಿ ನಡೆದಿರುವುದೇ ಸಾಕ್ಷಿ. ಕೇಂದ್ರ ಸಮಿತಿಯಿಂದ ಆದ್ಯತೆಯ ರಾಜ್ಯಗಳೆಂದು ಗುರುತಿಸಲ್ಪಟ್ಟ ಅಸ್ಸಾಂ, ಜಾರ್ಖಂಡ್, ಬಿಹಾರ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಕ್ಷದ ಮತ್ತುಸಾಮೂಹಿಕ ಸಂಘಟನೆಗಳ ಸದಸ್ಯತ್ವದಲ್ಲಿ ಗಣನೀಯ ಪ್ರಗತಿಯಾಗಿದೆ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ, ಆಂಧ್ರಪ್ರದೇಶ ಮತ್ತು ತಮಿಳುನಾಡು ಸಂಘಟನಾತ್ಮಕವಾಗಿ ಪಕ್ಷದ ಪ್ರಬಲ ರಾಜ್ಯಗಳಾಗಿ ಬೆಳೆದುಬಂದಿವೆ. ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಒಟ್ಟು ಸದಸ್ಯತ್ವವು ಐದು ಕೋಟಿಗೆ ಏರಿದ್ದು, ಕಳೆದ ಮೂರು ವರ್ಷಗಳಲ್ಲಿ 85 ಲಕ್ಷದಷ್ಟು, ಎಂದರೆ ಸುಮಾರು ಶೇಕಡಾ 21 ರಷ್ಟು ಹೆಚ್ಚಳ ಸಾಧಿಸಿದೆ. ಪ್ರಬಲ ರಾಜ್ಯಗಳ ಪಕ್ಷದ ಬಲವರ್ಧನೆಯ ಪ್ರಕ್ರಿಯೆ ಮುಂದುವರಿಯುತ್ತಿರುವಾಗ ದುರ್ಬಲ ರಾಜ್ಯಗಳಲ್ಲಿ ದೌರ್ಬಲ್ಯಗಳು ಉಳಿದುಕೊಂಡಿರುವುದನ್ನು ಗಮನಿಸಿದ ಅಧಿವೇಶನವು ಹೊಸ ಪರಿಸ್ಥಿತಿಯಲ್ಲಿ ಒದಗಿಬರುತ್ತಿರುವ ಅವಕಾಶಗಳನ್ನು ಬಳಸಿಕೊಂಡು ಪಕ್ಷದ ಸಂಘಟನೆಯು ದೇಶವ್ಯಾಪಿಯಾಗಿ ಬೆಳೆಸುವ ನಿರ್ಧಾರ ಕೈಗೊಂಡಿದೆ.

ಪಕ್ಷದ ಸದಸ್ಯತ್ವದ ಪ್ರಮಾಣವನ್ನು ಹೆಚ್ಚಿಸುವ ಜತೆಯಲ್ಲೇ ಗುಣಮಟ್ಟವನ್ನು ಕಾಪಾಡಬೇಕೆಂದು ಅಧಿವೇಶನವು ನಿರ್ದೇಶಿಸಿ ಈ ನಿಟ್ಟಿನಲ್ಲಿ ಪಕ್ಷದ ಸಂಘಟನಾ ನಿಯಮದ ಜೀವಾಳವಾದ



ಪ್ರಜಾಪ್ರಭುತ್ವ ಕೇಂದ್ರವಾದದ ತತ್ವವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಅಧಿವೇಶನವು ಒತ್ತಿ ಹೇಳಿದೆ. ಗುಂಪುಗಾರಿಕೆ, ಅಧಿಕಾರ ಲಾಲಸೆಯಂತಹ ತಪ್ಪುಗಳು ತಲೆದೋರದಂತೆ ಹಾಗೂ ಸಂಘಟನಾ ತತ್ವಗಳ ಎಲ್ಲಾ ರೀತಿಯ ಉಲ್ಲಂಘನೆಗಳನ್ನು ತಡೆಯಲು ತಿದ್ದುಪಡಿ ಚಳುವಳಿಯನ್ನು ನಡೆಸಬೇಕೆಂಬ ಈ ಹಿಂದಿನ ತೀರ್ಮಾನವನ್ನು ಕ್ರಮಬದ್ಧವಾಗಿ ನಡೆಸಬೇಕೆಂದೂ ಅಧಿವೇಶನ ನಿರ್ದೇಶಿಸಿದೆ.

ಜನಸಾಮಾನ್ಯರ ತುರ್ತಿನ ಪ್ರಶ್ನೆಗಳನ್ನು ಎತ್ತಿಕೊಂಡು ಚಳುವಳಿಗಳನ್ನು ನಡೆಸಬೇಕು. ಸಾಮೂಹಿಕ ಸಂಘಟನೆಗಳನ್ನು ಬಲಪಡಿಸಬೇಕು. ಪಕ್ಷದ ಸದಸ್ಯರ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾ ಪ್ರಜ್ಞೆಯನ್ನು ಹೆಚ್ಚಿಸಲು ನಿರಂತರ ಪ್ರಯತ್ನ ನಡೆಸಬೇಕು. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸಮಿತಿಗಳು ಶಿಕ್ಷಣದ ಕಾರ್ಯಕ್ರಮಗಳನ್ನು ಸಂಯೋಜಿಸಬೇಕು ಎಂದು ಅಧಿವೇಶನ ತೀರ್ಮಾನಿಸಿದೆ. ಶತ್ರುವರ್ಗಗಳ ಸಿದ್ಧಾಂತ ಮತ್ತು ಪ್ರಚಾರಗಳನ್ನು, ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಪಕ್ಷದ ಸೈದ್ಧಾಂತಿಕ ಮತ್ತು ಪ್ರಚಾರ-ಪ್ರಕ್ಷೋಭೆ ಕೆಲಸಗಳನ್ನು ಚುರುಕಗೊಳಿಸಬೇಕೆಂದೂ ಅಧಿವೇಶನ ನಿರ್ದೇಶಿಸಿದೆ.

- ಬಿ.ಮಾಧವ

ಕರಡು ವರದಿ ಮೇಲೆ ಚರ್ಚೆ : ಕರ್ನಾಟಕದಿಂದ

ಕರಡು ವರದಿಯ ಮೇಲಿನ ಚರ್ಚೆಗಾಗಿ ಕರ್ನಾಟಕಕ್ಕೆ ಒಟ್ಟು 28 ನಿಮಿಷಗಳನ್ನು ನೀಡಲಾಗಿತ್ತು. ವರದಿಯ ಮೂರು ಭಾಗಗಳ ಮೇಲೆ ಪ್ರತ್ಯೇಕ ಚರ್ಚೆ ಇದ್ದುದರಿಂದ ಮೂರು ಅಧಿವೇಶನದಲ್ಲಿ ಭಾಗವಹಿಸುವುದು ಹಂಚಿ ಕೊಳ್ಳಲಾಗಿತ್ತು. ರಾಜಕೀಯ ನಿರ್ಣಯ ಹಾಗೂ ರಾಜಕೀಯ ಸಂಘಟನಾ ವರದಿ ಮೇಲಿನ ಚರ್ಚೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ ಜಿ.ವಿ.ಶ್ರೀರಾಮ ರೆಡ್ಡಿಯವರು ಪ್ರತಿನಿದಿಗಳ ಪರವಾಗಿ ಪಾಲ್ಗೊಂಡಿದ್ದರು. ಸಂಘಟನಾ ವಿಭಾಗದ ಮೇಲಿನ ಚರ್ಚೆಯಲ್ಲಿ ರಾಜ್ಯ ಸೆಕ್ರೇಟರಿಯಟ್ ಸದಸ್ಯರಾದ ಕಾಂ. ಬಿ.ಮಾಧವರವರು ಹಾಗೂ ಕೆಲವು ಕಾರ್ಯನೀತಿ ವಿಷಯಗಳ ಮೇಲಿನ ಚರ್ಚೆಯಲ್ಲಿ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್ ಪಾಲ್ಗೊಂಡರು.

ಕರ್ನಾಟಕದಲ್ಲಿ ಒಟ್ಟು 9 ಪ್ರತಿನಿಧಿಗಳು ಇಬ್ಬರು ವೀಕ್ಷಕರು ಭಾಗವಹಿಸಿದ್ದರು.


ಚರ್ಚೆಯಲ್ಲಿ ಕಾಂ. ಜಿವಿಎಸ್

ಹೊಸ ಶಕೆಯತ್ತ ಸಾಗಬೇಕು...

ಪುಟ 7 ರಿಂದ

ದೃಷ್ಟಿಕೋನಗಳ ನಡುವಿನ ಸಂಘರ್ಷ ಮುಂದುವರಿಯಲಿದೆ. ಆದಾಗ್ಯೂ ಸಹ ನಾವು ಕಾಂಗ್ರೆಸ್ ಪಕ್ಷವನ್ನು ಜಾತ್ಯತೀತ ಪಕ್ಷ ಎಂದು ಗುರುತಿಸುತ್ತೇವೆ. ಪ್ರಸಕ್ತ ಸಂದರ್ಭದಲ್ಲಿ ರಾಷ್ಟ್ರದ ದೊಡ್ಡ ರಾಜಕೀಯ ಪಕ್ಷವಾಗಿ ಪ್ರಭುತ್ವದ ಜಾತ್ಯತೀತ ಲಕ್ಷಣವನ್ನು ಉಳಿಸುವ ಅದರ ಪಾತ್ರ ಪ್ರಸ್ತುತವಾದದ್ದು. ಈ ಅಂಶವು ಕಾಂಗ್ರೆಸ್ ನೇತೃತ್ವದ ಯುಪಿಎಗೆ ಬೆಂಬಲ ನೀಡುವಂತೆ ಮಾಡಿದೆ. ಜನಾದೇಶವನ್ನು ಜಾರಿಗೊಳಿಸಬೇಕಾದ ಸರ್ಕಾರವಿದು. ಪ್ರಭುತ್ವದ ಸಂಸ್ಥೆಗಳಲ್ಲಿ ಜಾತ್ಯತೀತ ಮೌಲ್ಯಗಳ ಪುನರ್‌ಸ್ಥಾಪನೆಗಾಗಿ ಕೋಮುವಾದಿ ಮೈತ್ರಿಕೂಟವನ್ನು ನಿರಾಕರಿಸಿದ ಜನಾದೇಶ ಇದು.

ದಲಿತರು, ಮಹಿಳೆಯರು ಮತ್ತು ತುಳಿತಕ್ಕೊಳಗಾದವರನ್ನು ಕಡೆಗಣಿಸುವಂತಹ ಪ್ರತಿಗಾಮಿ ದೃಷ್ಟಿಯ ಆರ್‌ಎಸ್‌ಎಸ್ ದೃಷ್ಟಿಕೋನದ ಬಿಜೆಪಿ ಪ್ರತಿಪಾದನೆಯ ರಾಷ್ಟ್ರೀಯತೆಯ ಧಾರ್ಮಿಕ ಗುರುತಿಗೆ ಪ್ರತಿಯಾಗಿ ಭಾರತದ ದೊಡ್ಡ ಎಡಪಕ್ಷವಾದ ಸಿಪಿಐ(ಎಂ) ಜಾತ್ಯತೀತ ಮತ್ತು ಒಕ್ಕೂಟ ತತ್ವಗಳ ಆಧಾರಿತ ಆಧುನಿಕ ರಾಷ್ಟ್ರ ನಿರ್ಮಿಸುವ ಎಡೆಗೆ ಎಲ್ಲಾ ಸಾಮಾಜಿಕ ಆರ್ಥಿಕ ಅಸಮಾನತೆಯನ್ನು ಬುಡಮೇಲು ಮಾಡುವ, ಪಾಳೆಗಾರಿ, ಜಾತಿವಾದಿ ಸೌಲತ್ತುಗಳ ಮೇಲೆ ದಾಳಿ ಮಾಡುವ ಕ್ರಾಂತಿಕಾರಿ ದೃಷ್ಟಿಕೋನದೊಂದಿಗೆ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ವಿಮೋಚನೆಯನ್ನು ಖಾತ್ರಿ ಪಡಿಸಬಯಸುತ್ತದೆ.

ಪ್ರಸಕ್ತ ಸನ್ನಿವೇಶದ ಅನಿವಾರ್ಯತೆಯನ್ನು ನಿಭಾಯಿಸಲು ನಾವು ಯುಪಿಎ ಸರ್ಕಾರಕ್ಕೆ ಬೆಂಬಲ ನೀಡುತ್ತಿರುವಾಗಲೇ ನಮ್ಮ ಮೂಲಭೂತ ಅಜೆಂಡಾವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇವೆ. ಜನತೆಯ ಆಶಯದ ಒತ್ತಾಸೆಯಾಗಿ ನಾವು ಕಾರ್ಯ ನಿರ್ವಹಿಸಲಿದ್ದೇವೆ. ಸ್ವತಂತ್ರ ಅಂದಾಜನ್ನು ಮಾಡಿ ನಾವು ನಮ್ಮ ಕಾರ್ಯಾಚರಣೆಯನ್ನು ನಿರ್ವಹಿಸಲಿದ್ದೇವೆ.

ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ಕೇವಲ ಅದರ ಕೋಮುವಾದಿ ನೀತಿಗಳಿಗಾಗಿ ಮಾತ್ರವಲ್ಲದೆ, ಕಾರ್ಷಿಕ ಬಿಕ್ಕಟ್ಟಿನಿಂದ ರೈತಾಪಿ ಜನರನ್ನು ರಕ್ಷಿಸುವಲ್ಲಿನ ಅದರ ವಿಫಲತೆ, ಕೈಗಾರಿಕೆಗಳ ದೊಡ್ಡ ಪ್ರಮಾಣದ ಮುಚ್ಚುವಿಕೆ - ನಿರುದ್ಯೋಗದ ಸೃಷ್ಟಿ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಶಿಕ್ಷಣ ಹಾಗೂ ಆರೋಗ್ಯದ ಮೇಲಿನ ಖರ್ಚಿನ ಕಡಿತ ಮತ್ತು ಸಾವಜನಿಕ ವಿತರಣಾ ವ್ಯವಸ್ಥೆಯ ಕಳಚಿಹಾಕುವಿಕೆ ನೀತಿಗಳಿಂದಾಗಿ ಜನತೆ ಇವರನ್ನು ಸೋಲಿಸಿದ್ದಾರೆ.

ಈ ಅಪಾಯಕಾರಿ ನೀತಿಗಳನ್ನು ತಮ್ಮ ಸಮಾನ ಕನಿಷ್ಟ ಕಾರ್ಯಕ್ರಮಗಳಲ್ಲಿನ ಬದ್ಧತೆಯಂತೆ ಯುಪಿಎ ಸರ್ಕಾರವು ಹಿಂದಿರುಗಿಸಬೇಕಿದೆ. ಕೃಷಿಗೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕಿದೆ. ಉದ್ಯೋಗ ಸೃಷ್ಟಿ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪುನರ್‌ಚೇತನ ಗೊಳಿಸಬೇಕಿದೆ. ಆರೋಗ್ಯ ಮತ್ತು ಶಿಕ್ಷಣದ ಮೇಲಿನ ವೆಚ್ಚವನ್ನು ಹೆಚ್ಚಿಸಬೇಕಿದೆ. ನಮ್ಮ ರಾಷ್ಟ್ರೀಯ ಆದ್ಯತೆಗಳನ್ನು ಈಡೇರಿಸಲಿಕ್ಕಾಗಿ ಸ್ವಾವಲಂಬಿ ಆರ್ಥಿಕತೆಯನ್ನು ನಿರ್ಮಿಸುವ ಆಧಾರವಾಗಿ ಸಾರ್ವಜಿಕ ಉದ್ದಿಮಗಳನ್ನು ಪರಿಗಣಿಸಬೇಕೇ ವಿನಹ ರಾಷ್ಟ್ರದ ಮೇಲಿನ ಹೊರೆ ಎಂದಲ್ಲಾ.

ಹಿಂದಿನ ತಪ್ಪು ನೀತಿಗಳನ್ನು ವಿರೋಧಿಸುವಾಗಲೇ ಸಿಎಂಪಿ ಯಲ್ಲಿನ ಜನಪರ ಕ್ರಮಗಳ ಜಾರಿಗಾಗಿ ಸಿಪಿಐ(ಎಂ) ಒತ್ತಾಯುವನ್ನು ಮುಂದುವರೆಸಲಿದೆ. ದುಡಿಯುವ ಜನತೆಯ ಎಲ್ಲಾ ವಿಭಾಗಗಳನ್ನು, ಅವರ ಹಿತಾಸಕ್ತಿಗಳ ರಕ್ಷಣೆಗಾಗಿ ದೊಡ್ಡ ಹಾಗೂ ನಿರಂತರ ಹೋರಾಟಗಳನ್ನು ಪಕ್ಷವು ಹರಿಬಿಡಲಿದೆ.

ಬಲಿಷ್ಠ ಸಿಪಿಐ(ಎಂ) ಮಾತ್ರವೇ ಕಾರ್ಯಸಾಧುವಾದ ತೃತೀಯ ಪರ್ಯಾಯವನ್ನು ಸೃಷ್ಟಿಸುವಲ್ಲಿ ಸಹಕಾರಿಯಾಗಬಲ್ಲದು. ಅದು ಸಮಾನ ನೀತಿಗಳ ವೇದಿಕೆಯ ಆಧಾರದಲ್ಲಿ ಮಾತ್ರ ಇವುಗಳ ಈಡೇರಿಗಾಗಿ ಜಂಟಿ ಚಟುವಟಿಕೆ-ಹೋರಾಟಗಳ ನಡೆಸಿರುವ ಆಸಕ್ತಿಯ ಆಧಾರಿತವಾಗಿರಲಿದೆ. ತೃತೀಯ ಪರ್ಯಾಯವು ಅಪೇಕ್ಷಿತವಾದದ್ದು ಆದರೆ ಅದನ್ನು ಚುನಾವಣೆ ಮೈತ್ರಿಗಷ್ಟೇ ಸೀಮಿತವಾಗಿರಬಾರದು.

ರಾಷ್ಟ್ರಮಟ್ಟದಲ್ಲಿ ಸಿಪಿಐ(ಎಂ) ಬಲಿಷ್ಠ ಶಕ್ತಿಯಾಗಿ ಬೆಳೆಯಬೇಕಿದೆ. ಎಡ ಐಕ್ಯತೆಯನ್ನು ಬಲಪಡಿಸಲು ಹಾಗೂ ಮಧ್ಯಪ್ರವೇಶ ಹೆಚ್ಚಿಸಲು ಸಾಧ್ಯವಾಗಬೇಕು. ಇದರ ಈಡೇರಿಕೆಗಾಗಿ ಪಕ್ಷ ಬಲಿಷ್ಠವಾಗಿರದ ಪ್ರದೇಶಗಳಲ್ಲಿ ಪಕ್ಷವನ್ನು ಕಟ್ಟಲು ಮತ್ತು ಚಳುವಳಿ ಬಲಪಡಿಸಲು ಪಕ್ಷದ ಮಹಾಧಿವೇಶನವು ನಿರ್ದಿಷ್ಟ ಯೋಜನೆಗಳನ್ನು ರೂಪಿಸಲಿದೆ.

18ನೇ ಮಹಾಧಿವೇಶನವು ನಮ್ಮ ಪಕ್ಷದ ಇತಿಹಾಸದಲ್ಲಿ ಮೈಲಿಗಲ್ಲಾಗಬೇಕು. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿ ನೆರೆಸಲು ಆ ಮೂಲಕ ರಾಷ್ಟ್ರದ ರಾಜಕೀಯವನ್ನು ಹೊಸ ಶಕ್ತಿಯೆಡೆಗೆ ಒಯ್ಯಲು ಇದು ನಿರ್ದೇಶನ ನೀಡಲಿ. ಉತ್ತಮ ಜೀವನಕ್ಕಾಗಿನ ಜನತೆಯ ಆಶೋತ್ತರಗಳನ್ನು ಕೇಂದ್ರವಾಗಿರಿಸುವ ವರ್ಗ ಮತ್ತು ಸಾಮಾಜಿಕ ಶೋಷಣೆಯಿಂದ ಮುಕ್ತವಾದ ಜಾತ್ಯತೀತ-ಪ್ರಜಾಸತ್ತಾತ್ಮಕ ಭಾರತದೆಡೆಗೆ ದಾರಿ ತೋರುವ ನಿಟ್ಟಿನಲ್ಲಿರಲಿ ಆ ನಿರ್ದೇಶನ ಎಂದರು ಕಾಂ. ಸುರ್ಜಿತ್‌ರವರು.

ಸಾಂಸ್ಕೃತಿಕ ಸುಗ್ಗಿ....

ದೆಹಲಿಯ ಬೀದಿ ಬೀದಿಗಳಲ್ಲಿ ಚಿಂತಕರ ಚಾವಡಿಗಳಲ್ಲಿ ಜನ ಸಂಸ್ಕೃತಿಯ ಚಿತ್ತಾರ-ಭಿತ್ತರ



ಪ್ರದರ್ಶಿತ ಕೃತಿಯೊಂದಿಗೆ ಸುನೀತ್ ಛೋಪ್ರಾ

ಪಕ್ಷದ ಮಹಾಧಿವೇಶನದ ಪೂರ್ವಭಾವಿಯಾಗಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 'ಪ್ರಗತಿಯತ್ತ ಜನ' ದ ಮುಖ್ಯ ತಿರುಳಿನ ಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು. ಇದರಲ್ಲಿ ದೇಶದ ಖ್ಯಾತ 90 ಕಲಾವಿದರು ತಮ್ಮ ವರ್ಣ ಚಿತ್ರಗಳನ್ನು ಇದಕ್ಕೆಂದೇ ರಚಿಸಿ ಕಳುಹಿಸಿದ್ದಲ್ಲದೇ ಹಲವರು ಸ್ವತಃ ಭಾಗವಹಿಸಿದ್ದರು. ಇವರಲ್ಲಿ ಮಾಜಿ ಪ್ರಧಾನಿ ವಿ.ಪಿ. ಸಿಂಗ್, ವೀರ್ ಮುನ್ಷಿ, ಅಪೂರ್ವ ದೇಸಾಯಿ, ವಿವಂ ಸುಂದರಂ, ಅಜೀತ್ ಕೌರ್ (ಅಕಾಡೆಮಿ ಅಧ್ಯಕ್ಷ), ಸುದೀರ್ ಪಂತ್ ಮುಂತಾದವರು ಪ್ರದರ್ಶನ ವೀಕ್ಷಿಸಿದ್ದಾರೆ. ಈ ವೈವಿಧ್ಯಮಯ ಕಲಾ ಪ್ರದರ್ಶನವನ್ನು ಕಾಂ. ಸುರ್ಜಿತ್ ಉದ್ಘಾಟಿಸಿದರು. ಜನಜೀವನದ



ಆಂಧ್ರ ಪ್ರದೇಶದ ಒಂದು ತಂಡ

ಪ್ರತಿಫಲನದಿಂದ ಹಿಡಿದು ಕೋಮುವಾದ, ಅಮೆರಿಕಾ ಯುದ್ಧ ಘೋರತನ, ಪಿತೂರಿಗಳಲ್ಲದೇ ಬಹುರಾಷ್ಟ್ರೀಯ ಕಂಪನಿಗಳ ಧಾಳಿ, ಇತ್ಯಾದಿಗಳ ವಸ್ತುವಿನ ವಿಶಿಷ್ಟ ಕಲಾಕೃತಿಗಳು ಇಲ್ಲಿದ್ದು ಜನರ ಗಮನ ಸೆಳೆದವು.

ಅಲ್ಲದೇ 'ಜನನಾಟ್ಯ ಮಂಡಳಿ' ಪರಚಂ ಸಹಯೋಗದಲ್ಲಿ ಸಾಂಸ್ಕೃತಿಕ ಕಾಯಕ್ರಮಗಳು ನಡೆದಿವೆ. ದೇಶದ ಹಲವಾರು ನಾಟಕ, ಹಾಡುಗಳ ತಂಡಗಳು ಇದರಲ್ಲಿ ಭಾಗವಹಿಸಿವೆ.

ವಿಚಾರಸಂಕಿರಣಗಳು

ಏಪ್ರಿಲ್ 3 ರಿಂದ 5 ರವರೆಗೆ ಕಾನ್ಸ್ಟಿಟ್ಯೂಷನ್ ಕ್ಲಬ್‌ನಲ್ಲಿ 'ಸಾಮ್ರಾಜ್ಯಶಾಹಿ, ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವ'ದ ಕೇಂದ್ರ ವಸ್ತುವಾಗುಳ್ಳ ವಿಚಾರಸಂಕಿರಣಗಳು ಮೂರು ದಿನಗಳು ಅತ್ಯಂತ ಯಶಸ್ವಿಯಾಗಿ ಜರುಗಿದವು. 3 ರಂದು ಭಾರತದ ಸಾರ್ವಭೌಮತೆ ಮತ್ತು ನವ ಉದಾರವಾದಿ ಅಜೆಂಡಾ, ಆರ್ಥಿಕ ರಂಗ, ಕೈಗಾರಿಕೆ ಮತ್ತು ಮೂಲ ಸೌಕರ್ಯಗಳು' ಕುರಿತ ಒಂದು ಗೋಷ್ಠಿ, ನಂತರ ಕೃಷಿ, ಸಾರ್ವಜನಿಕ ವಿತರಣೆ ಮತ್ತು ಸಾಮಾಜಿಕ ವಲಯ' ಕುರಿತು ವಿಚಾರಸಂಕಿರಣ ಜರುಗಿವೆ. 4 ರಂದು ಸಾಮ್ರಾಜ್ಯಶಾಹಿ: ಸಾಮ್ರಾಜ್ಯ ಶಾಹಿಯ ರಾಜಕೀಯ ಅರ್ಥಶಾಸ್ತ್ರ ಹಾಗೂ ಸಾಮ್ರಾಜ್ಯಶಾಹಿ, ಮಿಲಿಟರೀಕರಣ ಮತ್ತು ಪಶ್ಚಿಮ ಏಶಿಯಾ' , ಅಲ್ಲದೇ ಅಂದೇ ಮಧ್ಯಾಹ್ನ 'ಪ್ರಜಾಪ್ರಭುತ್ವ ಮತ್ತು ಸಮಾಜವಾದ', ಕೋಮುವಾದ ಮತ್ತು ಜಾತಿ ಕುರಿತು'.


5 ರಂದು ಪ್ರಜಾಪ್ರಭುತ್ವ ಮತ್ತು ರಾಜಕೀಯ ಭಾಗವಹಿಸುವಿಕೆ, ಅಲ್ಲದೇ 'ಸಮಾಜವಾದಿ ದೃಷ್ಟಿ' ಬಗೆಗೂ ಗೋಷ್ಠಿಗಳು ಅರ್ಥಪೂರ್ಣವಾಗಿ ಜರುಗಿವೆ. ಈ ವಿಚಾರಗೋಷ್ಠಿಗಳಲ್ಲಿ ದೇಶದ ಅತ್ಯಂತ ಖ್ಯಾತ ವಿದ್ವಾಂಸರು, ಸಂಶೋಧಕರು, ಸಮಾಜವಿಜ್ಞಾನಿಗಳು, ವಿದೇಶಗಳ ಚಿಂತಕರು ಭಾಗವಹಿಸಿರುವುದು ದೆಹಲಿಯ ಬೌದ್ಧಿಕ ವಲಯದ ಅನೇಕರನ್ನು ತನ್ನತ್ತ ಸೆಳೆದಿರುವುದು

ವಿಯೆಟ್ನಾಂ ಪ್ರತಿನಿಧಿಗಳಿಂದ ನೆನಪಿನ ಕಾಣಿಕೆ ನೀಡಿಕೆ.



ಕಮ್ಯುನಿಸ್ಟ್ ಚಳುವಳಿಯ ಇತಿಹಾಸ ಗ್ರಂಥ ಬಿಡುಗಡೆ

ಭಾರತದ ಕಮ್ಯುನಿಸ್ಟ ಚಳುವಳಿ ಆಯೋಗವನ್ನು ಹಿಂದೆ ರಚಿಸಲಾಗಿತ್ತು. ಈ ಆಯೋಗವು ಈಗ ಭಾರತದ ಕಮ್ಯುನಿಸ್ಟ್ ಚಳುವಳಿಯ ಇತಿಹಾಸಕ್ಕೆ ಸಂಬಂಧಿಸಿ ಮೊದಲ ಸಂಪುಟ ಸಿದ್ಧಪಡಿಸಿದ್ದು, ಅದನ್ನು ಕಾಂ. ಸುರ್ಜಿತ್ ಬಿಡುಗಡೆ ಮಾಡಿದರು. ಈ ಕ್ಷೇತ್ರದಲ್ಲಿ ಗಹನವಾಗಿ ತೊಡಗಿ ಸಂಶೋಧನೆ ನಡೆಸಿ, ಗ್ರಂಥ ಬರೆದಿರುವ ಕಾಂ. ಸುಬೋದ್ ರಾಯ್‌ರವರಿಗೆ ಮೊದಲ ಪ್ರತಿ ಸಮರ್ಪಿಸಲಾಯಿತು. ಎರಡನೇ ಪ್ರತಿ ಕಾಂ. ಬರ್ದನ್‌ರವರಿಗೆ. ಪಂಜಾಬ್ ಭಾಷೆಯ ಇನ್ನೊಂದು ಪುಸ್ತಕ ಸಹ ಬಿಡುಗಡೆ ಮಾಡಲಾಯಿತು.





ಹೊಸ ಪ್ರದೇಶಗಳಿಗೆ ವಿಸ್ತರಿಸಿ......

ಪುಟ 10 ರಿಂದ

ಭಾಗ ಗಳಾಗಿದ್ದವು. ಈ ಉತ್ಕ್ರಾಂತಿಯ ಜೊತೆಗೆ ಅಜಾದ್ ಹಿಂದ್ ಸೇನೆ(ಐಎನ್‌ಎ) ವಿಚಾರಣೆಗಳಿಗೆ ಸಂಬಂಧಪಟ್ಟಂತೆ ಜನರ ಭಾವನೆಗಳು ಮತ್ತು ನಂತರ ನಾವಿಕ ಬಂಡಾಯ ಬ್ರಿಟೀಶರು ಇನ್ನು ಮುಂದೆ ಭಾರತವನ್ನು ವಶದಲ್ಲಿಡಲು ತಮಗೆ ಸಾಧ್ಯವೇ ಎಂದು ಯೋಚಿಸುವಂತೆ ಮಾಡಿದವು. ನಂತರ ಪಕ್ಷ ಪಂಜಾಬಿನಲ್ಲಿ 'ಬೆಟರ್‌ಮೆಂಟ್ ಲೆವಿ'ಯ ವಿರುದ್ಧ ಒಂದು ಹೋರಾಟಕ್ಕೆ ನೇತೃತ್ವ ನೀಡಿತು. ಇದನ್ನು ಆಗಿನ ಕೇಂದ್ರ ಸಮಿತಿಯ ಒಂದು ನಿರ್ಣಯ ತೆಲಂಗಾಣಾದ ನಂತರದ ಅತ್ಯಂತ ಮಹತ್ವದ ರೈತಹೋರಾಟ ಎಂದು ಬಣ್ಣಿಸಿತು. 1960 ರ ದಶಕದ ಮಧ್ಯಭಾಗದಲ್ಲಿ ಬಂಗಾಳದಲ್ಲಿ ಪಕ್ಷ ಧೀರ ಆಹಾರ ಹೋರಾಟಕ್ಕೆ ನೇತೃತ್ವ ನೀಡಿತು.

ಈ ಎಲ್ಲಾ ಹೋರಾಟಗಳೇ ಪಕ್ಷವನ್ನು ಎತ್ತರೆತ್ತರಕ್ಕೆ ಒಯ್ದವು. ಈಗ 18ನೇ ಮಹಾಧಿವೇಶನ ಆಳುವ ವರ್ಗಗಳಿಗೆ ಎದುರಾಗಿ ಮತ್ತು ನಮ್ಮ ಮಿತ್ರರು ಹಾಗೂ ಮಿತ್ರರಾಗಹುದಾದವರ ಚಂಚಲತೆಗಳನ್ನು ಮೀರಿನಿಂತು ಪಕ್ಷವನ್ನು ಬಲಿಷ್ಠಗೊಳಿಸಲು ಇಂತಹ ಹೋರಾಟಗಳ ಅಗತ್ಯವನ್ನು ಒತ್ತಿ ಹೇಳಿರುವುದು ಸರಿಯಾಗಿಯೇ ಇದೆ. ಇದು ಒಂದು ಮೂರನೇ ಪರ್ಯಾಯವನ್ನು ನಂತರ ಒಂದು ಎಡ ಪ್ರಜಾಪ್ರಭುತ್ವವಾದೀ ಮೈತ್ರಿಯನ್ನು ಬೆಸೆಯಲು ಹಾಗೂ ಅಂತಿಮವಾಗಿ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಮತ್ತು ಸಮಾಜವಾದದತ್ತ ಮುನ್ನಡೆಯಲು ಅತ್ಯಂತ ಅನಿವಾರ್ಯ.

ಇದೋ ನನ್ನ ಪ್ರತಿಜ್ಞೆ

ಒಂದು ವೈಯಕ್ತಿಕ ಟಿಪ್ಪಣಿಯಿಲ್ಲದೆ ನಾನು ಈ ಕಿರುಲೇಖನವನ್ನು ಮುಗಿಸಲಾರೆ. ನನಗೆ ಬಹಳ ವಯಸ್ಸಾಗುತ್ತಿರುವುದರಿಂದ ಹಾಗೂ ಅದರ ಜತೆಗೆ ಬರುವ ಸಮಸ್ಯೆಗಳಿಂದಾಗಿ ನಾನು ಕಳೆದ ಅರ್ಧ ಶತಮಾನದ ಕಾಲ, ಮೊದಲು 1953 ರಿಂದ ಒಬ್ಬ ಪೊಲಿಟ್‌ಬ್ಯೂರೋ ಸದಸ್ಯನಾಗಿ ಹಾಗೂ ನಂತರ 1992 ರಿಂದ ಪ್ರಧಾನ ಕಾರ್ಯದರ್ಶಿಯಾಗಿ ನಾನು ನಿರ್ವಹಿಸುತ್ತಿರುವ ಜವಾಬ್ದಾರಿಗಳಿಂದ ನನ್ನನ್ನು ಬಿಡುಗಡೆಗೊಳಿಸಬೇಕು ಎಂದು ಕೇಂದ್ರ ಸಮಿತಿಯನ್ನು ಕೇಳಿಕೊಂಡಿದ್ದೆ. ಇದರಲ್ಲಿ ಮೇಲೆ ಪ್ರಸ್ತಾಪಿಸಿದ ಪಂಜಾಬಿನ ಬೆಟರ್‌ಮೆಂಟ್ ಲೆವಿ ವಿರುದ್ಧ ಮುಂದೆ ನಿಂತು ನಾನು ನಡೆಸಿದ ಹೋರಾಟದ ಜವಾಬ್ದಾರಿಯೂ ಸೇರಿದೆ?

ಆದರೆ ನಾನು ಕೆಳಗಿಳಿಯುತ್ತೇನೆ ಎಂದಿರುವುದರ ಅರ್ಥ ಪಕ್ಷದ ಜೀವನದಿಂದ ಹಾಗೂ ರಾಜಕೀಯ ಜೀವನದಿಂದ ಸನ್ಯಾಸ ತೆಗೆದುಕೊಳ್ಳುತ್ತೇನೆ ಎಂದೇನಲ್ಲ. ಈ ಜವಾಬ್ದಾರಿಯನ್ನು ನಿರ್ವಹಿಸಲು ಬೇರೊಬ್ಬರು ಮುಂದೆ ಬರಬೇಕು ಎಂಬುದೇ ನನ್ನ ಆಶಯವಾಗಿತ್ತು. ನಾನಂತೂ ನನಗೆ ಸಾಧ್ಯವಾಗುವ ರೀತಿಯಲ್ಲೆಲ್ಲಾ ಹೋರಾಟಕ್ಕೆ ಮುಂದೆಯೂ ಕಾಣಿಕೆ ನೀಡುತ್ತಿರುತ್ತೇನೆ ಎಂದು ಸ್ಪಷ್ಟಮಾತುಗಳಲ್ಲಿ ಹೇಳಿದ್ದೇನೆ.

ಈಗ ಕೇಂದ್ರ ಸಮಿತಿ ನನ್ನ ಕೋರಿಕೆಯನ್ನು ಅರ್ಧದಷ್ಟು ಈಡೇರಿಸಿದೆ ಎನ್ನಬಹುದು. ಕಾಮ್ರೇಡ್ ಪ್ರಕಾಶ್ ಕಾರಟ್ ಹೊಸ ಪ್ರಧಾನ ಕಾರ್ಯದರ್ಶಿಯಾಗಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಪೊಲಿಟ್‌ಬ್ಯೂರೋನಲ್ಲಿ ನಾನು ಮುಂದುವರೆಯಬೇಕು ಎಂದು ಆದೇಶಿಸಲಾಗಿದೆ.

ಈಗ ಪಕ್ಷದ ಮಹಾಧಿವೇಶನ ಮುಗಿದು, ಪಕ್ಷ ತನ್ನ ಪ್ರಸಕ್ತ ಸಂಘಟನಾ ಇಕ್ಕಟ್ಟನ್ನು ಮುರಿದು ಹೊಸ ಪ್ರದೇಶಗಳಿಗೆ ವಿಸ್ತರಿಸಲು ಒಂದು ಬಲಿಷ್ಠ ಅಖಿಲ ಭಾರತ ಆಂದೋಲನವನ್ನು ಆರಂಭಿಸಲಿರುವಾಗ ನಾನು ಶ್ರಮಜೀವಿ ಜನತೆಗಾಗಿ ನನ್ನಿಂದಾದುದನ್ನು ಸಲ್ಲಿಸುವುದನ್ನು ಮುಂದುವರೆಸುತ್ತೇನೆ ಎಂದು ಪ್ರತಿಜ್ಞೆ ನೀಡುತ್ತಿದ್ದೇನೆ. ಈ ಹಿಂದೆ ನಾನು ರೈತ ಆಂದೋಲನದೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೆ, ಈ ಆಂದೋಲನದ ಹಿರಿಯ ವ್ಯಕ್ತಿಗಳಾದ ಸ್ವಾಮಿ ಸಹಜಾನಂದ ಸರಸ್ವತಿ, ಎನ್.ಜಿ.ರಂಗ, ಇಂದೂಲಾಲ್ ಯಾಜ್ಞಿಕ್ ಮತ್ತಿತರರೊಂದಿಗೆ ಕೆಲಸ ಮಾಡಿದ್ದೇನೆ. ಭಾರತದ ರೈತಾಪಿ ಜನಗಳ ಹಣೆಬರಹವಾಗಿದ್ದ, ಈಗಲೂ ಹಾಗೆ ಇರುವ ಅವರ ಸಂಕಟಗಳ ನಿಕಟ ಅನುಭವ ನನಗೆ ಇದೆ. ಇದೇ ನಾನು ಭಾರತದ ಪುನರುಜ್ಜೀವನಕ್ಕೆ ಒಂದು ಕಾರ್ಷಿಕ ಕ್ರಾಂತಿ ಅನಿವಾರ್ಯ ಎಂದು ಸ್ವೀಕರಿಸುವಂತೆ ಮಾಡಿದ್ದು. ಇದೇ ಆಜೀವ ಪರ್ಯಂತ ಹೋರಾಟಗಾರನಾಗುವಂತೆ ಮಾಡಿದಂತದ್ದು. ಇದೇ ಕೊನೆಯುಸಿರನವರೆಗೂ ನಾನೊಬ್ಬ ಹೋರಾಟಗಾರನಾಗಿಯೇ ಇರುತ್ತೇನೆ ಎಂದು ಪ್ರತಿಜ್ಞೆ ನೀಡುವಂತೆ ಮಾಡಿರುವುದು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್

ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,

ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH